ಸೋಮವಾರ, ಜೂನ್ 1, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯೋಗ...ಯೋಗ...

ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರಿನಲ್ಲಿ ನಡೆದ ‘ಮಹಾಸಂಕಲ್ಪ ದಿವಸ’ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರು ಯೋಗ ಮಾಡಿದ ದೃಶ್ಯ

ಜಾಗೃತಿ

ಪ್ರಯಾಗರಾಜ್‌ನಲ್ಲಿ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ನಡೆದ ಜಾಗೃತಿ ಜಾಥಾದಲ್ಲಿ ಭಾಗಿಯಾಗಿದ್ದ ವ್ಯಕ್ತಿಯೊಬ್ಬರು ಗಮನ ಸೆಳೆದರು

भारत सरकार

PM SVANidhi

ಪ್ರಧಾನಮಂತ್ರಿ ಸ್ವನಿಧಿ ಯೋಜನೆ

ರೂ.15,000 ರಿಂದ ರೂ.50,000 ಆಧಾರರಹಿತ ಸಾಲ ನೀಡುವ ಯೋಜನೆ

ಕಳೆದ 6 ವರ್ಷಗಳಲ್ಲಿ...

- 75+ ಲಕ್ಷಕ್ಕೂ ಅಧಿಕ ಬೀದಿಬದಿ ವ್ಯಾಪಾರಿಗಳಿಗೆ ರೂ.17,800+ ಕೋಟಿ ಮೌಲ್ಯದ ಸಾಲ ನೀಡಲಾಗಿದೆ.
- 841+ ಕೋಟಿಗೂ ಅಧಿಕ ರೂ.9 ಲಕ್ಷ ಕೋಟಿ ಮೌಲ್ಯದ ಡಿಜಿಟಲ್ ಟ್ರಾನ್ಸಾಕ್ಷನ್ಸ್ ಮಾಡಲಾಗಿದೆ.
- 95% ಬೀದಿಬದಿ ವ್ಯಾಪಾರಿಗಳು ಮೊಟ್ಟ ಮೊದಲ ಬಾರಿಗೆ ಬ್ಯಾಂಕ್ ಸಾಲ ಪಡೆದಿದ್ದಾರೆ.
- ಸುಮಾರು 46% ಫಲಾನುಭವಿಗಳು ಮಹಿಳೆಯರಾಗಿದ್ದಾರೆ.
- ಫಲಾನುಭವಿಗಳು, ಡಿಜಿಟಲ್ ಕ್ಯಾಷ್‌ಬ್ಯಾಕ್ ಮತ್ತು ಬಡ್ಡಿ ರಿಯಾಯತಿ ರೂಪದಲ್ಲಿ ಅಂದಾಜು ರೂ.800 ಕೋಟಿ ಪಡೆದಿದ್ದಾರೆ.

CBC 44101/13/0002/2627

ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ – pmsvanidhi.mohua.gov.in



ಕಾಲೇಜು ದಿನಗಳಲ್ಲಿ ಕಾರ್ಯಕ್ರಮವೊಂದಲ್ಲಿ ಭಾಷಣ ನಿರತ ಶಿವಕುಮಾರ್

ವಿದ್ಯಾರ್ಥಿ ದೆಸೆಯಲ್ಲೇ ‘ಸಿ.ಎಂ’ ಕನಸು ಕಂಡಿದ್ದರು..

• ಬರಡನಹಳ್ಳಿ ಕೃಷ್ಣಮೂರ್ತಿ

ಕನಕಪುರ: ‘ವಿದ್ಯಾರ್ಥಿಯಾಗಿದ್ದಾಗ ನಾನು ಮತ್ತು ಶಿವು ಒಮ್ಮೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆ ಎದುರು ನಡೆದುಕೊಂಡು ಹೋಗುತ್ತಿದ್ದೆವು. ಈ ಮನೆಯೊಳಗೆ ನಾವು ಹೋಗೋದು ಯಾವಾಗ ಎಂದು ಕೇಳಿದ. ಈಗಲೇ ಹೋಗೋಣ ನಡಿ ಎಂದು ಗೇಟಿನಲ್ಲಿದ್ದ ಭದ್ರತಾ ಸಿಬ್ಬಂದಿ ಅನುಮತಿ ಕೇಳಿ ಹೋಗಿ ಬಂದೆವು. ಹೊರಗಡೆ ಬಂದಾಗ, ಶಿವು ನಿನ್ನ ಆಸೆ ಈಡೇರಿತಲ್ಲ ಎಂದು ಹೇಳಿದೆ. ಅದಕ್ಕೆ ಶಿವು, ಸಿ.ಎಂ ಆಗಿ ಈ ಮನೆಗೆ ಹೋಗುವುದು ಯಾವಾಗ ಎಂದು ಕೇಳಿದ್ದ. ಆ ಮಾತಿಗೆ ನಾನು ಶಾಕ್ ಆಗಿದ್ದೆ. ಅಂದು ಹೇಳಿದ ಮಾತು ಇಂದು ನಿಜವಾಗಿದೆ...’

ಡಿ.ಕೆ.ಶಿವಕುಮಾರ್ ಕುರಿತು ಆಪ್ತ ಸ್ನೇಹಿತ ಹಾಗೂ ಸೋದರ ಸಂಬಂಧಿಯೂ ಆದ ಕನಕಪುರದ ಮಳಗಾಳು ಗ್ರಾಮದ ಎಂ.ಪರಮೇಶ್ ಹಳೆ ನೆನಪುಗಳನ್ನು ಮೆಲುಕು ಹಾಕಿದರು.

ಅಜ್ಜಿ ಮನೆ ಅಚ್ಚುಮೆಚ್ಚು: ಶಾಲಾ–ಕಾಲೇಜಿಗೆ ರಜೆ ಸಿಕ್ಕಾಗಲೆಲ್ಲಾ ಮಳಗಾಳು ಗ್ರಾಮದಲ್ಲಿರುವ ಅಜ್ಜಿ ಮನೆಗೆ ಶಿವಕುಮಾರ್ ಹೆಚ್ಚಾಗಿ ಬರುತ್ತಿದ್ದರು. ಪರಮೇಶ್ ಸೇರಿ ಸೋದರ ಸಂಬಂಧಿಗಳು ಹಾಗೂ ಕೆಲ ಸ್ನೇಹಿತರ ಜತೆ ಆಟ–ಸುತ್ತಾಟದೊಂದಿಗೆ ಕಾಲ ಕಳೆಯುತ್ತಿದ್ದರು. ಇಂದಿಗೂ ಎಲ್ಲರ ಜತೆ ಆತ್ಮೀಯ ಒಡನಾಟ ಹೊಂದಿದ್ದಾರೆ.

‘ಶಿವಕುಮಾರ್ ಚಿಕ್ಕಂದಿನಿಂದಲೇ ತುಂಬಾ ಖಡಕ್. ಸರಿ ಎನಿಸಿದರೆ ಯಾವುದಕ್ಕೂ, ಯಾರಿಗೂ ಅಂಜದೆ ಮುನ್ನುಗ್ಗುವ ಸ್ವಭಾವ. ಮಾತು ಕಡ್ಡಿ ಮುರಿದಂತೆ. ಅಂದುಕೊಂಡಿದ್ದನ್ನು ಪಟ್ಟು ಬಿಡದೆ ಸಾಧಿಸುವ ಛಲಗಾರ. ಅವರಲ್ಲಿದ್ದ ವಿಭಿನ್ನ ಆಲೋಚನೆಗಳು ನಮಗೆ ಆಶ್ಚರ್ಯ ಹುಟ್ಟಿಸುತ್ತಿದ್ದವು. ಕಾಲೇಜು ಚುನಾವಣೆಯಲ್ಲಿ ಗೆದ್ದು ವಿದ್ಯಾರ್ಥಿ ನಾಯಕನಾದ. ತನ್ನ ಕನಸು ಸಾಕಾರಕ್ಕಾಗಿ ಯುವ ಕಾಂಗ್ರೆಸ್ ಸೇರಿದ. ತಳಮಟ್ಟದಿಂದ ಪಕ್ಷಕ್ಕೆ ದುಡಿದು ಉನ್ನತ ಹುದ್ದೆ ತಲುಪಿದ್ದಾನೆ’ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಮುನಿಲಿಂಗೇಗೌಡರ ಪ್ರಭಾವ: ಶಿವಕುಮಾರ್ ಅವರಿಗೆ ಬಾಲ್ಯದಿಂದಲೂ ರಾಜಕೀಯ ಆಸಕ್ತಿ ಇತ್ತು. ಅದಕ್ಕೆ ಮಳಗಾಳು ಗ್ರಾಮದ ಮುನಿಲಿಂಗೇಗೌಡ ಅವರು ಒಂದು ರೀತಿಯಲ್ಲಿ ಕಾರಣ. ಅಂದಿನ ಕಾಲಕ್ಕೆ ಪುರಸಭೆ ಅಧ್ಯಕ್ಷರಾಗಿದ್ದ ಅವರಿಗೆ, ಹಲವು ಹಿರಿಯ ರಾಜಕಾರಣಿಗಳ ಒಡನಾಟ ಇತ್ತು. ಎಸ್.ಕರಿಯಪ್ಪ, ಅರಳಾಳು ಪಟೇಲರು, ಕಾಂತರಾಜ್ ಅರಸು, ಕೆ.ಜಿ.ತಿಮ್ಮೇಗೌಡ ಅವರಂತಹವರು ಮುನಿಲಿಂಗೇಗೌಡರ ಭೇಟಿಗೆ ಬರುತ್ತಿದ್ದರು. ಆಗಲೇ ದೊಡ್ಡ ರಾಜಕಾರಣಿಗಳನ್ನು ಹತ್ತಿರದಿಂದ ನೋಡಿ ಬೆಳೆದಿದ್ದ ಶಿವಕುಮಾರ್ ಅವರಿಗೆ ತಾವೂ ರಾಜಕಾರಣದಲ್ಲಿ ದೊಡ್ಡದಾಗಿ ಬೆಳೆಯಬೇಕೆಂಬ ಆಸೆ ಚಿಗುರಿತ್ತು.

‘ಎಲ್ಲದರಲ್ಲೂ ಮೊದಲಿಗ’

‘ನಮ್ಮ ಪಕ್ಕದ ಮನೆಯೇ ಶಿವಕುಮಾರ್ ಅವರ ಅಜ್ಜಿ ಮನೆ. ಬಾಲ್ಯದಲ್ಲಿ ಮಳಗಾಳುಗೆ ಹೆಚ್ಚಾಗಿ ಬರುತ್ತಿದ್ದ. ನಾವೆಲ್ಲರೂ ಆಟವಾಡಿದ್ದ ನೆನಪುಗಳು ಇಂದಿಗೂ ಕಣ್ಣು ಮುಂದಿವೆ. ಬಾವಿ ಮತ್ತು ಅರ್ಕಾವತಿ ನದಿಯಲ್ಲಿ ಈಜಾಡಿದ್ದೇವೆ. ಏನೇ ಮಾಡಿದರೂ ಅದಕ್ಕೆ ನಾಯಕ ನಂತಿರುತ್ತಿದ್ದ. ಆ ನಾಯಕತ್ವ ಗುಣವೇ ಇಂದು ಆತನನ್ನು ರಾಜ್ಯದ ಮುಖ್ಯಮಂತ್ರಿ ಪದವಿವರೆಗೆ ತಂದು ನಿಲ್ಲಿಸಿದೆ’ ಎಂದು ಮಳಗಾಳು ಗೋಪಾಲ್ ರಾಜ್, ಒಡನಾಟ ನೆನಪಿಸಿಕೊಂಡರು.

ಸೋಲಿಗೆ ತಿರುಗೇಟು: ವಿಧಾನಸಭಾ ಚುನಾವಣೆಯಲ್ಲಿ ಸಾತನೂರಿನಲ್ಲಿ ತಮ್ಮನ್ನು ಸೋಲಿಸಿದ್ದ ಎಚ್.ಡಿ.ದೇವೇಗೌಡ ಅವರ ವಿರುದ್ಧ 2004ರ ಲೋಕಸಭೆ ಚುನಾವಣೆಯಲ್ಲಿ ಪತ್ರಕರ್ತೆ ತೇಜಸ್ವಿನಿ ಗೌಡ ಅವರನ್ನು ಕಾಂಗ್ರೆಸ್‌ನಿಂದ ನಿಲ್ಲಿಸಿ, ದೇವೇಗೌಡರನ್ನು ಸೋಲಿಸಿದರು. ಆ ಮೂಲಕ ತಮ್ಮ ತಾಕತ್ತು ಪ್ರದರ್ಶಿಸಿ, ಸೋಲಿನ ಸೇಡು ತೀರಿಸಿಕೊಂಡಿದ್ದರು.

‘ಹೋರಾಟದಲ್ಲಿ ನಿಮ್ಮೊಂದಿಗೆ ಇರುತ್ತೇವೆ’

ಕಾಂಗ್ರೆಸ್‌ನ ಗತವೈಭವ ಮರಳಿ ತರುವ ಹೊಣೆ: ಡಿಕೆಶಿಗೆ ನೆನಪಿಸಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಏಕತೆ, ಸಮಗ್ರತೆಯನ್ನು ಉಳಿಸಲು ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಕಾಂಗ್ರೆಸ್‌ನಿಂದ ಮಾತ್ರವೇ ಇದು ಸಾಧ್ಯವಿದ್ದು, ಈ ಹೋರಾಟದಲ್ಲಿ ನಾವು ನಿಮ್ಮೊಂದಿಗೆ ಇರುತ್ತೇವೆ’ ಎಂದು ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ (ಸಿಎಲ್‌ಪಿ) ಡಿ.ಕೆ.ಶಿವಕುಮಾರ್ ಅವರಿಗೆ ಭರವಸೆ ನೀಡಿದ್ದಾರೆ.

ಸಿಎಲ್‌ಪಿ ನೂತನ ನಾಯಕನಾಗಿ ಆಯ್ಕೆಯಾದ ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿ ಸಿದ್ದರಾಮಯ್ಯ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಇತ್ತೀಚಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯವಾಗಿ ಸ್ವಲ್ಪ ಹಿನ್ನಡೆಯಾಗಿದೆ. ನಾವು ಚುನಾವಣೆಯಲ್ಲಿ ಸೋಲಬಹುದು, ಗೆಲ್ಲಬಹುದು. ಆದರೆ ಸೈದ್ಧಾಂತಿಕವಾಗಿ ಎಂದೂ ಸೋಲಬಾರದು. ಒಂದು ಪಕ್ಷ ಸೈದ್ಧಾಂತಿಕವಾಗಿ ಸೋತರೆ ಆ ಪಕ್ಷ ಚುನಾವಣೆಯನ್ನು ಗೆಲ್ಲಲಾಗದೆ ನಾಶವಾಗುತ್ತದೆ. ರಾಜ್ಯದ ಅಭಿವೃದ್ಧಿಯ ಜೊತೆಯಲ್ಲಿ ನಮ್ಮೆಲ್ಲರ ಮಾತೃ ಸ್ವರೂಪಿಯಾಗಿರುವ ಕಾಂಗ್ರೆಸ್ ಪಕ್ಷದ ಗತವೈಭವವನ್ನು ಮರಳಿ ಸ್ಥಾಪಿಸುವ ಹೊಣೆಗಾರಿಕೆ ಕೂಡಾ ನಮ್ಮೆಲ್ಲರ ಮೇಲಿದೆ’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್‌ನ ಹಿರಿಯರು ತ್ಯಾಗ-ಬಲಿದಾನಗಳ ಮೂಲಕ ಕಟ್ಟಿದ ಸೌಹಾರ್ದ ಭಾರತವನ್ನು ಜಾತಿ-ಧರ್ಮಗಳ ಹೆಸರಲ್ಲಿ ಒಡೆದು ಹಾಕಲಾಗುತ್ತಿದೆ. ಸಂವಿಧಾನವನ್ನೇ ಪ್ರಶ್ನಿಸಲಾಗುತ್ತಿದೆ. ಗಾಂಧಿಯವರನ್ನು ಕೊಂದವರು ಇಂದು ಗೋಡ್ಸೆಯನ್ನು ಮೆರೆಸುತ್ತಿದ್ದಾರೆ. ಸಮಾನತೆ, ಸೌಹಾರ್ದ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ಮೌಲ್ಯಗಳನ್ನು ತನ್ನ ಸಿದ್ಧಾಂತವಾಗಿ ಸ್ವೀಕರಿಸಿದ ಪಕ್ಷ ಕಾಂಗ್ರೆಸ್. ಈ ಪಕ್ಷವನ್ನು ಸೈದ್ಧಾಂತಿಕವಾಗಿ ತಳಮಟ್ಟದಿಂದಲೇ ಗಟ್ಟಿಗೊಳಿಸುವುದು ಮಾತ್ರವೇ ದೇಶವನ್ನು ಉಳಿಸಲು ನಮಗಿರುವ ಏಕೈಕ ದಾರಿ’ ಎಂದು ಸಲಹೆ ನೀಡಿದ್ದಾರೆ.

‘ಕಾಂಗ್ರೆಸ್ ಪಕ್ಷ ಇಂತಹ ಸವಾಲಿನ ಅನೇಕ ಅಗ್ನಿದಿವ್ಯಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇತಿಹಾಸ ನಮಗೆಲ್ಲರಿಗೂ ಪ್ರೇರಣೆಯಾಗಲಿ. ನಿಮ್ಮ ನಾಯಕತ್ವ ಬಲ ಈ ಪ್ರಯತ್ನವನ್ನು ಸಫಲಗೊಳಿಸಲಿ. ಈ ಹೋರಾಟದಲ್ಲಿ ಇಡೀ ಶಾಸಕಾಂಗ ಪಕ್ಷವಲ್ಲದೆ, ರಾಜ್ಯದ ಏಳು ಕೋಟಿ ಜನರೂ ನಿಮ್ಮೊಂದಿಗೆ ಇರುತ್ತಾರೆ’ ಎಂದು ಹುರಿದುಂಬಿಸಿದ್ದಾರೆ.

‘ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವ ಹೊಣೆ’

‘ಇಡೀ ದೇಶ ಇಂದು ಆರ್ಥಿಕ ಅಭದ್ರತೆಯಲ್ಲಿ ಭೀತಿಗೊಳಗಾಗಿದ್ದು, ರಾಜ್ಯದ ಜನರೂ ತಮ್ಮ ಭವಿಷ್ಯದ ಬಗ್ಗೆ ಆತಂಕಿತರಾಗಿದ್ದಾರೆ. ಅವರಲ್ಲಿ ಭರವಸೆ ಹುಟ್ಟಿಸುವ ಜೊತೆಗೆ, ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ’ ಎಂದು ಸಿದ್ದರಾಮಯ್ಯ ಅವರು ಶಿವಕುಮಾರ್ ಅವರಿಗೆ ಹೇಳಿದ್ದಾರೆ.



‘ಕರ್ನಾಟಕವು ತಲಾದಾಯ, ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿ ದೇಶಕ್ಕೆ ಮಾದರಿ. ನಮ್ಮ ಪ್ರತಿಯೊಂದು ಯೋಜನೆಯನ್ನೂ ಉಳಿದ ರಾಜ್ಯಗಳು ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಕ್ಕೆ ತರುತ್ತಿರುವುದು ಹೆಮ್ಮೆಯ ಸಂಗತಿ. ಮುಖ್ಯಮಂತ್ರಿಯಾಗಿ ಕನ್ನಡಿಗರ ಸೇವೆಯನ್ನು ಮಾಡಲು ಒದಗಿಬಂದಿದ್ದ ಅವಕಾಶವನ್ನು ಬಳಸಿಕೊಂಡು ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ರಾಜ್ಯವನ್ನಾಗಿ ಅಭಿವೃದ್ಧಿಪಡಿಸಿದ ಹೆಮ್ಮೆ ನನ್ನದು. ಈ ಅಭಿವೃದ್ಧಿಯ ಬಂಡಿಯನ್ನು ಮುಂದಕ್ಕೆ ಎಳೆದೊಯ್ಯುವ ಜವಾಬ್ದಾರಿ ನಿಮ್ಮ ಹೆಗಲ ಮೇಲಿದೆ. ಅದಕ್ಕೆ ಬೇಕಾಗಿರುವ ಬದ್ಧತೆ, ಸಾಮರ್ಥ್ಯ ಮತ್ತು ಮುನ್ನೋಟ ನಿಮ್ಮಲ್ಲಿದೆ ಎನ್ನುವ ನಂಬಿಕೆ ನನ್ನದು’ ಎಂದಿದ್ದಾರೆ.

‘ನಿಮ್ಮಲ್ಲಿರುವ ಅದಮ್ಯವಾದ ಕ್ರಿಯಾಶೀಲತೆ, ಸಂಘಟನಾ ಚಾತುರ್ಯ ಮತ್ತು ಕಾಂಗ್ರೆಸ್ ಪಕ್ಷದ ಮೇಲಿನ ಸಂಶಯಾತೀತ ನಿಷ್ಠೆಯನ್ನು ಒಬ್ಬ ಸಹದ್ಯೋಗಿಯಾಗಿ ನಾನು ಸಮೀಪದಿಂದ ಗಮನಿಸಿದ್ದೇನೆ. ಇವೆಲ್ಲದರ ಸದುಪಯೋಗ ರಾಜ್ಯದ ಜನತೆಗೆ ಆಗಲಿ’ ಎಂದಿದ್ದಾರೆ.

ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

‘ದಲಿತ ನಾಯಕರಿಗೆ ಡಿಸಿಎಂ ಸ್ಥಾನ ನೀಡಿ’

ಬೆಂಗಳೂರು: ದಲಿತ ನಾಯಕರೊಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ನಾಯಕರಾದ ಜಿ.ಪರಮೇಶ್ವರ, ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಕೆ.ಎಚ್.ಮುನಿಯಪ್ಪ ಅವರ ಪೈಕಿ ಒಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಡಿ.ಕೆ.ಶಿವಕುಮಾರ್ ಅವರು ಜೂನ್ 3ರಂದು ಲೋಕಭವನದಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅಂದು ದಲಿತ ನಾಯಕರೊಬ್ಬರು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವಂತಾಗಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರನ್ನು ಒತ್ತಾಯಿಸಿದರು. ಯಾವುದೇ ಕಾರಣಕ್ಕೂ ದಲಿತ ಸಮುದಾಯಕ್ಕೆ ಅನ್ಯಾಯವಾಗಬಾರದು. ಇಲ್ಲವಾದರೆ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಆರ್‌ಪಿಐ ಅಧ್ಯಕ್ಷ ವೆಂಕಟಸ್ವಾಮಿ, ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಡಿ.ಶಿವಶಂಕರ್, ಸುರೇಶ್ ರಾಜ್ ಪಾಲ್ಗೊಂಡಿದ್ದರು.

ಸಚಿವ ಸ್ಥಾನದ ಆಕಾಂಕ್ಷಿ: ಬಿ.ಆರ್.ಪಾಟೀಲ

ಪ್ರಜಾವಾಣಿ ವಾರ್ತೆ

ಬಿ.ಆರ್. ಪಾಟೀಲ

ಕಲಬುರಗಿ: ‘ಕಳೆದ ಐದು ದಶಕಗಳಿಂದ ಸಕ್ರಿಯ ರಾಜಕಾರಣದಲ್ಲಿರುವ ನಾನು ಅಹಿಂದ ಚಳವಳಿ, ರೈತ ಹೋರಾಟ, ಪರಿಸರ ಹೋರಾಟ, ಕಾರ್ಮಿಕ ಚಳವಳಿ ಹಾಗೂ ವಿವಿಧ ನೀರಾವರಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಈ ಬಾರಿಯ ಸಚಿವ ಸಂಪುಟದಲ್ಲಿ ನನಗೆ ಸ್ಥಾನ ಕೊಡಬೇಕು’ ಎಂದು ಆಳಂದ ಶಾಸಕ ಬಿ.ಆರ್.ಪಾಟೀಲ ಅವರು ಒತ್ತಾಯಿಸಿದ್ದಾರೆ.

‘ಸಿದ್ದರಾಮಯ್ಯ ಅವರು ಜೆಡಿಎಸ್ ಬಿಟ್ಟು ಬಂದಾಗ ಏಕೈಕ ಲಿಂಗಾಯತ ಸಮುದಾಯದವನಾಗಿ ರಾಜ್ಯದಾದ್ಯಂತ ಅವರೊಂದಿಗೆ ಸುತ್ತಾಡಿ ಅಹಿಂದ ಚಳವಳಿ ಕಟ್ಟಿದ್ದೇನೆ. 8 ಜನ ಶಾಸಕರು ಜೆಡಿಎಸ್ ಬಿಟ್ಟು ಬಂದಂಥ ಸಂಕಷ್ಟದ ಪರಿಸ್ಥಿತಿಯಲ್ಲಿ ವಿಧಾನಸಭೆ ಸದಸ್ಯತ್ವ ರದ್ದಾದರೂ ಚಿಂತಿಸದೇ ನೈತಿಕವಾಗಿ ಸಿದ್ದರಾಮಯ್ಯ ಅವರೊಟ್ಟಿಗೆ ಬೆನ್ನೆಲುಬಾಗಿ ನಿಂತಿದ್ದೆ. ನನ್ನೊಬ್ಬನನ್ನು ಬಿಟ್ಟು ಉಳಿದೆಲ್ಲ ಶಾಸಕರು ಸಚಿವರಾಗಿದ್ದಾರೆ. ಇದುವರೆಗೆ ಸಚಿವ ಸ್ಥಾನದಿಂದ ವಂಚಿತನಾಗಿರುವ ನನಗೆ ಸಿದ್ದರಾಮಯ್ಯ ಅವರೇ ಮುತುವರ್ಜಿ ವಹಿಸಿ ಸಂಪುಟದಲ್ಲಿ ಸೇರ್ಪಡೆ ಮಾಡಿಕೊಳ್ಳಲು ಕಾಳಜಿ ವಹಿಸಬೇಕು. ಆಳಂದ ಕ್ಷೇತ್ರದಿಂದ ಈವರೆಗೆ ಯಾರೊಬ್ಬರೂ ಸಚಿವರಾಗಿಲ್ಲ. ಆ ಬರವನ್ನು ನೀಗಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯವರು ನನ್ನ ಆಳಂದ ಕ್ಷೇತ್ರದಲ್ಲಿ ವೋಟ್ ಚೋರಿ ಮಾಡಲು ರೂಪಿಸಿದ್ದ ವ್ಯವಸ್ಥಿತ ಕುತಂತ್ರವನ್ನು ನಾನು ಬಯಲಿಗೆಳೆದೆ. ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರು ಈ ಪ್ರಕರಣವನ್ನು ದೇಶದ ಮುಂದಿಟ್ಟು ಹೋರಾಟಕ್ಕೆ ನಾಂದಿ ಹಾಡಿದರು. ಇಡೀ ದೇಶದಲ್ಲೇ ವೋಟ್ ಚೋರಿ ಸಂಬಂಧ ಚಾರ್ಜ್‌ಶೀಟ್ ದಾಖಲಾದ ಪ್ರಕರಣ ಇದೊಂದೇ ಆಗಿದೆ. ಹೀಗಾಗಿ, ನನಗೆ ಸಚಿವ ಸ್ಥಾನ ನೀಡುವಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಸಹಮತಿ ಸೂಚಿಸುತ್ತಾರೆ ಎಂಬ ಅಚಲ ವಿಶ್ವಾಸವಿದೆ’ ಎಂದಿದ್ದಾರೆ.

‘ಹರಿಪ್ರಸಾದ್ ಸರ್ಕಾರದ ಅಂಗವಾಗಲಿ’

ಮಂಗಳೂರು: ‘ಡಿ.ಕೆ ಶಿವಕುಮಾರ್ ಮಂತ್ರಿ ಮಂಡಲದಲ್ಲಿ ಬಿಲ್ಲವರಿಗೆ ಸೂಕ್ತ ಸ್ಥಾನ ಸಿಗಬೇಕು. ಸಮುದಾಯದ ಅಗ್ರಗಣ್ಯ ನಾಯಕ ಬಿ.ಕೆ. ಹರಿಪ್ರಸಾದ್ ಅವರನ್ನು ಸಚಿವರನ್ನಾಗಿ ಮಾಡಬೇಕು’ ಎಂದು ಸೋಲೂರುಮಠದ ಆರ್ಯ ಈಡಿಗ ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ ಆಗ್ರಹಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಬಿಲ್ಲವರು ಬಹುಸಂಖ್ಯಾತರು. ಆದರೆ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯದಲ್ಲಿ ಪ್ರಾತಿನಿಧ್ಯ ಸಿಗದೇ ಇರುವುದು ವಿಷಾದನೀಯ’ ಎಂದರು.

‘ರಾಜ್ಯಸಭಾ ಸದಸ್ಯರಾಗಿ, ವಿಧಾನ ಪರಿಷತ್‌ನಲ್ಲಿ ವಿಪಕ್ಷ ನಾಯಕರಾಗಿ ಜವಾಬ್ದಾರಿಯನ್ನು ನಿರ್ವಹಿಸಿರುವ ಹರಿಪ್ರಸಾದ್, ನ್ಯಾಯದ ಪರವಾಗಿ ರಾಜಿ ರಹಿತವಾಗಿ ಹೋರಾಡಿದವರು. ಈ ಎಲ್ಲ ಕಾರಣಗಳಿಂದ ಅವರಿಗೆ ಸಚಿವ ಸ್ಥಾನ ಸಿಗಬೇಕು ಎಂಬುದು ಬಿಲ್ಲವ ಸಮಾಜದ ಒಕ್ಕೊರಲಿನ ಆಗ್ರಹ’ ಎಂದರು.

ರಾಜ್ಯ ಬಿಲ್ಲವ ಮಹಾಮಂಡಲದ ಕಾರ್ಯದರ್ಶಿ ಗಣೇಶ್ ಬಂಗೇರ ಮಾತನಾಡಿ ಹರಿಪ್ರಸಾದ್ ಅವರ ರಾಜಕೀಯ ಹಾದಿಯಲ್ಲಿ ಕಪ್ಪುಚುಕ್ಕೆ ಇಲ್ಲ. ಜನಾರ್ದನ ಪೂಜಾರಿ ಅವರ ನಂತರ ಸಮುದಾಯದ ಪ್ರಮುಖ ನಾಯಕನಾಗಿರುವ ಅವರಿಗೆ ಈವರೆಗೆ ಸರ್ಕಾರದ ಭಾಗವಾಗುವ ಅವಕಾಶ ಸಿಗಲೇ ಇಲ್ಲ. ಆದ್ದರಿಂದ ಈ ಬಾರಿ ಮಂತ್ರಿ ಮಂಡಲದಲ್ಲಿ ಸೇರಿಸಬೇಕು ಎಂದರು. ಕುದ್ರೋಳಿ ಗೋಕರ್ಣನಾಥ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ಜೈರಾಜ್ ಸೋಮಸುಂದರಂ, ಪ್ರಮುಖರಾದ ಜಯಚಂದ್ರ, ಲೋಕನಾಥ್, ಜೀವನ್ ಕುಮಾರ್, ಶಕೀಲಾ ರಾಜ್, ಯೋಗೀಶ್ ಕುಮಾರ್, ಬಿ.ದೇರಣ್ಣ, ಸುಖಲಾಕ್ಷಿ ಸುವರ್ಣ ಪಾಲ್ಗೊಂಡಿದ್ದರು.

ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕೆ.ಪಿ.ನಂಜುಂಡಿ ಆಗ್ರಹ

‘ವಿಶ್ವಕರ್ಮರಿಗೆ ಮೀಸಲಾತಿ ಕೊಡಿ’

ಪ್ರಜಾವಾಣಿ ವಾರ್ತೆ

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಾವು ಗುಡಿ ಗೋಪುರಗಳನ್ನು ನಿರ್ಮಿಸುವವರು. ಆದರೆ, ಅದೇ ಗುಡಿಗಳಿಗೆ ನಮಗೆ ಪ್ರವೇಶವಿಲ್ಲ. ನಮ್ಮ ಸಮುದಾಯದ ಐದು ಕುಲಕಸುಬುಗಳು ಆಧುನಿಕ ತಂತ್ರಜ್ಞಾನಗಳ ನಡುವೆ ಮರೆಯಾಗುತ್ತಿವೆ. ವಿಶ್ವಕರ್ಮ ಸಮುದಾಯ ಮೇಲೆ ಬರಬೇಕಿದ್ದರೆ ಮೀಸಲಾತಿ ಅಗತ್ಯ’ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅಧ್ಯಕ್ಷ ಕೆ.ಪಿ. ನಂಜುಂಡಿ ತಿಳಿಸಿದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 99 ಅಂಕ ಪಡೆದ ನಮ್ಮ ಸಮುದಾಯದ ಮಕ್ಕಳ ಹಿನ್ನೆಲೆ ನೋಡಿದರೆ ಅವರೆಲ್ಲ ಬಡ ಕುಟುಂಬದಿಂದ ಬಂದವರು. ಭವಿಷ್ಯದಲ್ಲಿ ಉತ್ತಮ ನೆಲೆ ಕಂಡುಕೊಳ್ಳಬೇಕಿದ್ದರೆ ಈ ಬಡ ಮಕ್ಕಳಿಗೆ ಮೀಸಲಾತಿ ಸಿಗಬೇಕು’ ಎಂದು ಆಗ್ರಹಿಸಿದರು.

‘ದೇಶವನ್ನು ಕಟ್ಟಿದವರು ನಾವು. ವಿಶ್ವಕರ್ಮ ಸಮಾಜದಲ್ಲಿ ಹುಟ್ಟುತ್ತಲೇ ಎಂಜಿನಿಯರ್‌ಗಳಾಗಿರುತ್ತಾರೆ. ದೇಶದ ಬೆನ್ನೆಲುಬು ರೈತರಾದರೆ, ರೈತರ ಬೆನ್ನೆಲುಬು ವಿಶ್ವಕರ್ಮರು’ ಎಂದು ಹೇಳಿದರು.

‘ಅಧಿಕಾರ, ಸ್ಥಾನಮಾನಕ್ಕಾಗಿ ಎಂದೂ ಚಮಚಾಗಿರಿ ಮಾಡಿಲ್ಲ. ಸ್ಥಾನಮಾನ ನೀಡುವುದಾದರೆ ಯೋಗ್ಯತೆ, ಅರ್ಹತೆಗೆ ನೀಡಬೇಕು. ಪ್ರಜಾಪ್ರಭುತ್ವವನ್ನು ಅರ್ಥಮಾಡಿಕೊಳ್ಳದೇ ಇದ್ದರೆ ಸಮಾಜ ಮುಂದಕ್ಕೆ ಬರುವುದು ಕಷ್ಟ’ ಎಂದರು.

ನೊಣವಿನಕೆರೆ ಸೋಮೆಕಟ್ಟೆ ಕಾಡಸಿದ್ದೇಶ್ವರ ಸಂಸ್ಥಾನ ಮಠದ ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ (ಅಜ್ಜಯ್ಯ) ಉದ್ಘಾಟಿಸಿದರು. ಕಲಬುರಗಿಯ ಐ.ಸಿ. ಪಾಂಚಾಳ್ ಅಧ್ಯಕ್ಷತೆ ವಹಿಸಿದ್ದರು. 750ಕ್ಕೂ ಅಧಿಕ ಮಕ್ಕಳಿಗೆ ಪುರಸ್ಕಾರ ನೀಡಲಾಯಿತು.

ಮಾಜಿ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಎಸ್.ಟಿ. ಸೋಮಶೇಖರ್, ಕೊಪ್ಪಳ ಲೇಬಗೇರಿ ಮಠದ ನಾಗಮೂರ್ತೇಂದ್ರ ಸ್ವಾಮೀಜಿ, ತುಮಕೂರು ನಿಟ್ಟರಹಳ್ಳಿ ನೀಲಕಂಠ ಸ್ವಾಮೀಜಿ, ಕಲಬುರಗಿ ಜಿಲ್ಲೆ ಸುಲೇಪೇಟ್‌ನ ದೊಡ್ಡೇಂದ್ರ ಸ್ವಾಮೀಜಿ, ಕೊಪ್ಪಳ ಜಿಲ್ಲೆ ಮುದ್ದಾಬಳ್ಳಿಯ ಗುರುನಾಥ ಸ್ವಾಮೀಜಿ, ದಾವಣಗೆರೆ ವಡ್ನಾಳ್ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ, ಕೊಪ್ಪಳದ ನಾಗಲಿಂಗ ಸ್ವಾಮೀಜಿ, ಲೇಬಗಿರಿ ಮಠದ ವಿಶ್ವೇಂದ್ರ ಸ್ವಾಮೀಜಿ, ಪತ್ರಕರ್ತ ರವಿ ಹೆಗಡೆ ಉಪಸ್ಥಿತರಿದ್ದರು.

ಜಾಣಜಾಣೆಯರ ನಗೆ ಉತ್ಸವ ಯಶಸ್ವಿ

ಪ್ರಜಾವಾಣಿ ವಾರ್ತೆ

ನಗರದಲ್ಲಿ ನಡೆದ ನಗೆ ಉತ್ಸವದಲ್ಲಿ ಕಲಾವಿದರಿಗೆ ಆರೋಗ್ಯ ವಿಮೆಯ ಪಾಲಿಸಿಗಳನ್ನು ವಿತರಿಸಲಾಯಿತು

ಬೆಂಗಳೂರು: ನಗು ಬರೀ ಮನರಂಜನೆಯಲ್ಲ, ಅದು ಉತ್ತಮ ಆರೋಗ್ಯ ಮತ್ತು ಸಂತೋಷದ ಬದುಕಿನ ಮೂಲಮಂತ್ರ ಎಂಬ ಸಂದೇಶವನ್ನು ನಗರದ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಭಾನುವಾರ ನಡೆದ ಜಾಣಜಾಣೆಯರ ನಗೆ ಉತ್ಸವ ಸಾರಿತು.

ಜಾಣಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ನಗೆರಸದ ಸವಿಯನ್ನು ಆಸ್ವಾದಿಸಿದರು.

ಸಂಗೀತ ನಿರ್ದೇಶಕ ಗುರುಕಿರಣ್, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಕೀಲ ಚಂದ್ರಮೌಳಿ, ಹಾಸ್ಯ ಕಲಾವಿದರಾದ ಮಿಮಿಕ್ರಿ ದಯಾನಂದ್, ಎಂ.ಕೃಷ್ಣೇಗೌಡ, ಗೋಪಿ, ವೈ.ವಿ. ಗುಂಡೂರಾವ್, ಎಂ.ಎಸ್. ನರಸಿಂಹ ಮೂರ್ತಿ, ಟ್ರಸ್ಟಿ ಉದಯ್ ಎಂ., ವಿದುಷಿ ಸುಮಾ ಸುಧೀಂದ್ರ ಪಾಲ್ಗೊಂಡಿದ್ದರು.

‘ಇಂದಿನ ಡಿಜಿಟಲ್ ಯುಗದಲ್ಲಿ ಜನರು ಮೊಬೈಲ್ ಫೋನ್‌ಗಳ ಪರದೆಗಳಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದು, ಮುಖಾಮುಖಿಯಾಗಿ ಮಾತನಾಡುವ, ಬೆರೆಯುವ ಮತ್ತು ಒಟ್ಟಾಗಿ ನಗುವ ಸಂಸ್ಕೃತಿ ನಿಧಾನವಾಗಿ ಮರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಗೆ ಉತ್ಸವವು ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ, ಮಾನವೀಯ ಸಂಬಂಧಗಳ ಮಹತ್ವ ಮತ್ತು ನಗುವಿನ ಆರೋಗ್ಯಕರ ಪರಿಣಾಮ ನೆನಪಿಸಿದೆ’ ಎಂದು ಅತಿಥಿಗಳು ಹೇಳಿದರು.

ಸಂಗೀತ ನಿರ್ದೇಶಕ ಗುರುಕಿರಣ್ ಕಲಾವಿದರ ಸೇವೆಯನ್ನು ಶ್ಲಾಘಿಸಿದರು. ಐಪಿಎಲ್ ಮೂಲಕ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವ ಡ್ರಮ್ಸ್ ದೇವ್ ಅವರ ಪ್ರದರ್ಶನ ಚಪ್ಪಾಳೆ ಗಳಿಸಿತು.

ಸಮಾಜದಲ್ಲಿ ಸಾಹಿತ್ಯ, ಕಲೆ, ಕಲಾವಿದರ ಕಲ್ಯಾಣಕ್ಕಾಗಿ ಜಾಣ ಜಾಣೆಯರ ಸಾಹಿತಿ ಕಲಾವಿದರ ಟ್ರಸ್ಟ್ ಸ್ಥಾಪನೆಯಾಗಿದ್ದು, ಕಾರ್ಯಕ್ರಮದ ಅಂಗವಾಗಿ 60 ಕಲಾವಿದರಿಗೆ ತಲಾ ₹10 ಲಕ್ಷ ಆರೋಗ್ಯ ವಿಮೆಯ ಪಾಲಿಸಿ ವಿತರಿಸಲಾಯಿತು.

ಮಕ್ಕಳ ಹಕ್ಕುಗಳ ಆಯೋಗಕ್ಕೆ ಸಂತೋಷ್ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾಗಿ ಸಂತೋಷ್ ಕುಮಾರ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರವು ಆದೇಶಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಇದೇ ಮೇ 27ರಂದು ಆದೇಶ ಹೊರಡಿಸಿದ್ದು, ಅಂದಿನಿಂದಲೇ ಆದೇಶ ಜಾರಿಯಾಗಿದೆ. ಕಲಬುರಗಿ ಜಿಲ್ಲೆಯ ಆದರ್ಶನಗರದವರಾದ ಸಂತೋಷ್ ಕುಮಾರ್ ಅವರು ಮೂರು ವರ್ಷಗಳವರೆಗೆ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಜತೆಗೆ, ಸತ್ಯನಾರಾಯಣ ಶೆಟ್ಟಿ, ಜಗನ್ನಾಥ ಹಲಮಡಗಿ ಮತ್ತು ವೆಂಕಟೇಶ್ ಅವರನ್ನು ಆಯೋಗದ ನೂತನ ಸದಸ್ಯರಾಗಿ ನೇಮಕ ಮಾಡಲಾಗಿದೆ. ಮೂವರು ಸದಸ್ಯರ ಅಧಿಕಾರದ ಅವಧಿ ಮೂರು ವರ್ಷ ಎಂದು ಇಲಾಖೆಯು ತನ್ನ ಆದೇಶದಲ್ಲಿ ತಿಳಿಸಿದೆ.

‘ಒತ್ತಡ ನಿವಾರಣೆಗೆ ಕ್ರೀಡೆಗಳು ಸಹಕಾರಿ’

ಕೆ.ಆರ್.ಪುರ: ದೈನಂದಿನ ಜೀವನದಲ್ಲಿ ಸದಾ ಒತ್ತಡದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳಿಗೆ ಕ್ರೀಡೆಗಳು ಸಹಕಾರಿ ಎಂದು ಶಾಸಕಿ ಮಂಜುಳಾ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ದೊಡ್ಡ ಗುಬ್ಬಿಯಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ನೌಕರರಿಗಾಗಿ ಹಮ್ಮಿಕೊಂಡಿದ್ದ ಕ್ರೀಡಾ ಉತ್ಸವ ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಗಳು ಒತ್ತಡದ ಜೀವನಕ್ಕೆ ತುಸು ವಿರಾಮ ನೀಡಿ ಮತ್ತೆ ಚೈತನ್ಯದಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತವೆ ಎಂದರು.

ಕ್ರಿಕೆಟ್‌ನಲ್ಲಿ ಹಾಲನಾಯಕನಹಳ್ಳಿ ಗ್ರಾ.ಪಂ ಪ್ರಥಮ ಸ್ಥಾನ ಪಡೆದರೆ, ಮಂಡೂರು ಎರಡನೇ ಸ್ಥಾನ ಪಡೆಯಿತು. ವಾಲಿಬಾಲ್‌ನಲ್ಲಿ ಬಿದರಹಳ್ಳಿ ಪ್ರಥಮ ಸ್ಥಾನ ಪಡೆದರೆ, ಮಂಡೂರು ಎರಡನೇ ಸ್ಥಾನ ಪಡೆದು ಟ್ರೋಫಿ, ಬಹುಮಾನ ಪಡೆದವು. ಜಿಲ್ಲಾ ಪಂಚಾಯಿತಿ ಸಿಇಒ ಯತೀಶ್ ಆರ್, ತಾಲ್ಲೂಕು ಪಂಚಾಯಿತಿ ಇಒ ವಸಂತ್ ಕುಮಾರ್, ಸಿಇಎ ಯಶೋದ, ಪಿಡಿಒ ಮೋಹನ್ ಇದ್ದರು.

ಶಾಸಕಿ ಮಂಜುಳಾ ಲಿಂಬಾವಳಿ ಅವರು ಕ್ರಿಕೆಟ್ ಆಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ತಾ.ಪಂ. ಇಒ ವಸಂತ್ ಕುಮಾರ್ ಉಪಸ್ಥಿತರಿದ್ದರು

ಆಟೊ ಚಾಲಕರಲ್ಲಿ ಕ್ಯಾನ್ಸರ್ ಪತ್ತೆಗೆ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಾಯಿ ಮತ್ತು ಶ್ವಾಸಕೋಶ ಕ್ಯಾನ್ಸರ್ ತಪಾಸಣಾ ಶಿಬಿರದಲ್ಲಿ 250ಕ್ಕೂ ಅಧಿಕ ಆಟೊ ಚಾಲಕರಿಗೆ ತಪಾಸಣೆ ಮಾಡಲಾಯಿತು.

ಕೆ.ಆರ್. ರಸ್ತೆಯಲ್ಲಿರುವ ಆಸ್ಪತ್ರೆಯ ಆವರಣದಲ್ಲಿ ನಡೆದ ಈ ತಪಾಸಣಾ ಶಿಬಿರಕ್ಕೆ ಎಚ್‌ಸಿಜಿ ಕರ್ನಾಟಕ ವಿಭಾಗದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಮನಿಷ್ ಕುಮಾರ್ ಚಾಲನೆ ನೀಡಿದರು. ತಂಬಾಕು ಉತ್ಪನ್ನಗಳ ಸೇವನೆಯ ಅಪಾಯದ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ, ಅಪಾಯದ ವರ್ಗದಲ್ಲಿ ಗುರುತಿಸಲಾದ ಆಟೊ ರಿಕ್ಷಾ ಚಾಲಕರಿಗೆ ಉಚಿತವಾಗಿ ತಪಾಸಣೆ ಮಾಡಲಾಯಿತು.

ಆಟೊ ಚಾಲಕರ ಆರೋಗ್ಯ ತಪಾಸಣೆ ನಡೆಸಲಾಯಿತು

‘ಆಟೊ ಚಾಲಕರು ನಗರದ ಸಂಚಾರ ದಟ್ಟಣೆಯಲ್ಲಿ ಹೆಚ್ಚಿನ ಸಮಯ ಕಳೆಯಬೇಕಾಗಿದ್ದು, ವಾಹನ ಹೊರಸೂಸುವ ಹೊಗೆ ಮತ್ತು ವಾತಾವರಣದಲ್ಲಿನ ದೂಳು ಅವರ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಅನಿಯಮಿತ ಆಹಾರ ಪದ್ಧತಿ ಅನುಸರಿಸುವ ಅವರು ಸದಾ ಒತ್ತಡದಲ್ಲಿ ಇರುತ್ತಾರೆ. ಕೆಲವರು ಧೂಮಪಾನ ಸೇರಿ ತಂಬಾಕು ಉತ್ಪನ್ನಗಳನ್ನು ಸೇವಿಸುವ ಮೂಲಕ ಕ್ಯಾನ್ಸರ್‌ನ ಅಪಾಯ ತಂದುಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅವರು ಆರೋಗ್ಯದ ಕಡೆ ಹೆಚ್ಚಿನ ಕಾಳಜಿ ವಹಿಸಿ, ನಿಯಮಿತ ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟರು.

ಆಸ್ಪತ್ರೆಯ ಹಿರಿಯ ಸಲಹೆಗಾರ ಡಾ. ಮಂಜುನಾಥ್ ಎನ್‌ಎಂಎಲ್, ‘ತಂಬಾಕು ಉತ್ಪನ್ನಗಳ ಸೇವನೆಯು ಬಾಯಿಯ ಕ್ಯಾನ್ಸರ್‌ಗೆ ಪ್ರಮುಖ ಕಾರಣವಾಗಿದೆ. ಕ್ಯಾನ್ಸರ್ ಮುಂದುವರಿದ ಹಂತವನ್ನು ತಲುಪುವವರೆಗೂ ಅನೇಕ ವ್ಯಕ್ತಿಗಳು ರೋಗಲಕ್ಷಣಗಳನ್ನು ನಿರ್ಲಕ್ಷಿಸುತ್ತಾರೆ. ಆಟೊ ಚಾಲಕರ ಸಮುದಾಯ ನಿರಂತರ ಮಾಲಿನ್ಯಕ್ಕೆ ಒಡ್ಡಿಕೊಳ್ಳುತ್ತದೆ. ಒತ್ತಡ ನಿವಾರಣೆಗೆ ಚಾಲಕರು ತಂಬಾಕು ಉತ್ಪನ್ನಗಳ ಮೊರೆ ಹೋಗುವ ಸಾಧ್ಯತೆ ಇರುತ್ತದೆ. ಇಂತಹ ಸಮುದಾಯಕ್ಕೆ ಆರೋಗ್ಯ ತಪಾಸಣೆ ಬಗ್ಗೆ ಜಾಗೃತಿ ಅಗತ್ಯ’ ಎಂದು ಹೇಳಿದರು.

ಕ್ಯಾನ್ಸರ್ ತಜ್ಞ ಡಾ. ಸತೀಶ್ ಸಿ.ಟಿ., ‘ತಂಬಾಕು ಉತ್ಪನ್ನಗಳ ಸೇವನೆ ಹಾಗೂ ದೀರ್ಘಕಾಲ ವಾಯುಮಾಲಿನ್ಯಕ್ಕೆ ಒಡ್ಡಿಕೊಳ್ಳುವುದರಿಂದ ಶ್ವಾಸಕೋಶದ ಕ್ಯಾನ್ಸರ್ ಮತ್ತು ಉಸಿರಾಟದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ’ ಎಂದು ಅಭಿಪ್ರಾಯಪಟ್ಟರು.

ಯುವಜನರಲ್ಲಿ ಹೆಚ್ಚುತ್ತಿರುವ ಹೃದಯಾಘಾತದ ಬಗ್ಗೆ ಫೋರ್ಟಿಸ್ ಆಸ್ಪತ್ರೆ ಜಾಗೃತಿ

‘ಜಡ ಜೀವನಶೈಲಿಯಿಂದ ಹೃದ್ರೋಗ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೃದಯಾಘಾತ: ಪ್ರತಿ ನಿಮಿಷವೂ ಅಮೂಲ್ಯ
- ಚಿಕಿತ್ಸೆ ವಿಳಂಬ: ಹೃದಯಕ್ಕೆ ಹೆಚ್ಚು ಹಾನಿ
- ತ್ವರಿತ ವೈದ್ಯಕೀಯ ನೆರವಿನಿಂದ ಜೀವ ಉಳಿಯುವ ಸಾಧ್ಯತೆ



ಬೆಂಗಳೂರು: ‘ದೈಹಿಕ ಶ್ರಮವಿಲ್ಲದ ಜಡ ಜೀವನಶೈಲಿ, ಕೆಲಸದ ಒತ್ತಡ, ಅನಾರೋಗ್ಯಕರ ಆಹಾರ ಪದ್ಧತಿ, ಧೂಮಪಾನ, ನಿದ್ದೆಯ ಕೊರತೆ ಸೇರಿ ವಿವಿಧ ಕಾರಣದಿಂದ ಹೃದಯದ ಕಾಯಿಲೆ ಹೆಚ್ಚಳವಾಗುತ್ತಿದೆ’ ಎಂದು ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದರು.

ಕಿರುತೆರೆ ಕಲಾವಿದರ ಸಹಭಾಗಿತ್ವದಲ್ಲಿ ಫೋರ್ಟಿಸ್ ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಜೀವನಶೈಲಿ ಬದಲಾವಣೆಯೊಂದಿಗೆ ಹೃದಯದ ಕಾಯಿಲೆ ತಡೆಗಟ್ಟುವಿಕೆ, ಹೃದಯದ ಕಾಯಿಲೆಯ ಲಕ್ಷಣಗಳ ಗುರುತಿಸುವಿಕೆ ಬಗ್ಗೆಯೂ ತಜ್ಞರು ಸಾರ್ವಜನಿಕರಿಗೆ ತಿಳಿಸಿದರು.

ಯಶವಂತಪುರದ ಫೋರ್ಟಿಸ್ ಆಸ್ಪತ್ರೆಯ ಹೃದ್ರೋಗ ವಿಭಾಗದ ಹೆಚ್ಚುವರಿ ನಿರ್ದೇಶಕ ಡಾ. ಪ್ರಸಾದ್ ಎಂ. ಭಟ್, ‘ಹೃದಯ ಸಂಬಂಧಿ ಕಾಯಿಲೆಗಳು ಈಗ ಯುವಜನರಲ್ಲಿಯೂ ಕಾಣಿಸಿಕೊಳ್ಳುತ್ತಿದ್ದು, ಆಸ್ಪತ್ರೆ ದಾಖಲಾತಿಯೂ ಇತ್ತೀಚೆಗೆ ಹೆಚ್ಚಾಗಿದೆ. ಆರೋಗ್ಯ ಕಡೆಗಣನೆಯೇ ಇದಕ್ಕೆ ಮುಖ್ಯ ಕಾರಣ. ನಿಯಮಿತ ಆರೋಗ್ಯ ತಪಾಸಣೆ, ದೈಹಿಕವಾಗಿ ಸಕ್ರಿಯವಾಗಿರುವುದು, ರಕ್ತದೊತ್ತಡ ಮತ್ತು ಮಧುಮೇಹವನ್ನು ನಿಯಂತ್ರಣದಲ್ಲಿಡುವುದು, ತಂಬಾಕು ಸೇವನೆಯಿಂದ ದೂರವಿರುವುದು ಸೇರಿ ವಿವಿಧ ಕ್ರಮಗಳ ಮೂಲಕ ಹೃದಯ ರಕ್ತನಾಳದ ಕಾಯಿಲೆಗಳ ಅಪಾಯವನ್ನು ಗಣನೀಯವಾಗಿ ಕಡಿಮೆ ಮಾಡಬಹುದು’ ಎಂದು ಹೇಳಿದರು.

ಹೃದ್ರೋಗ ತಜ್ಞ ಡಾ. ಸತೀಶ್ ಎಲ್., ‘ಹೃದಯಾಘಾತ ಸಂಭವಿಸಿದಾಗ ಪ್ರತಿಯೊಂದು ನಿಮಿಷವೂ ಅತ್ಯಂತ ಅಮೂಲ್ಯವಾಗಿರುತ್ತದೆ. ಎದೆ ನೋವು ಅಥವಾ ಅಸ್ವಸ್ಥತೆ, ಉಸಿರಾಟದ ತೊಂದರೆ, ಅತಿಯಾಗಿ ಬೆವರುವುದು, ಯಾವುದೇ ಕಾರಣವಿಲ್ಲದೆ ವಿಪರೀತ ಆಯಾಸವಾಗುವುದು ಸೇರಿ ವಿವಿಧ ಲಕ್ಷಣಗಳನ್ನು ನಿರ್ಲಕ್ಷಿಸಬಾರದು. ಚಿಕಿತ್ಸೆ ವಿಳಂಬವಾದರೆ ಅದು ಹೃದಯದ ಸ್ನಾಯುಗಳಿಗೆ ಸರಿಪಡಿಸಲಾಗದಷ್ಟು ಹಾನಿಯನ್ನುಂಟು ಮಾಡುತ್ತದೆ. ಲಕ್ಷಣಗಳು ಕಂಡು ಬಂದ ತಕ್ಷಣವೇ ವೈದ್ಯಕೀಯ ನೆರವು ಪಡೆಯುವುದರಿಂದ ರೋಗಿ ಗುಣಮುಖವಾಗುವ ಸಾಧ್ಯತೆ ಹೆಚ್ಚುತ್ತದೆ’ ಎಂದು ಅಭಿಪ್ರಾಯಪಟ್ಟರು.

ನಟ ಅನಿರುದ್ಧ, ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗದ ಸಹಾಯಕ ಪೊಲೀಸ್ ಕಮಿಷನರ್ (ಎಸಿಪಿ- ಸಂಚಾರ ಯೋಜನೆ) ಕವಿತಾ ಕರಿಯಪ್ಪ, ಕರ್ನಾಟಕ ಕಿರುತೆರೆ ಕಲಾವಿದರ ಕೂಟದ ಸಂಸ್ಥಾಪನಾಧ್ಯಕ್ಷ ಗಣೇಶ್ ರಾವ್ ಕೇಸರ್ಕರ್ ಉಪಸ್ಥಿತರಿದ್ದರು.

prajavani.net | prajavani
ಸೋಮವಾರ, ಜೂನ್ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 151 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಡಬಲ್ಸ್ ಕಿರೀಟ
ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಭಾನುವಾರ ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು

ಲಾಭಕ್ಕೆ ಮರಳಿದ ಕಾಫಿ ಡೇ ಗ್ಲೋಬಲ್ 10
ಅಭಿಷೇಕ್ ಮೇಲೆ ಹಲ್ಲೆ; ನಾಲ್ವರ ಬಂಧನ 10

ಪ್ರತ್ಯೇಕ ಅವಘಡ ಹನ್ನೊಂದು ಸಾವು

ಚಿಕ್ಕಬಳ್ಳಾಪುರ/ರಾಯಚೂರು: ರಾಜ್ಯದಲ್ಲಿ ಸಂಭವಿಸಿದ ಪ್ರತ್ಯೇಕ ಅವಘಡಗಳಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಸರಣಿ ಅಪಘಾತ ನಡೆದಿದ್ದರೆ, ಮಂತ್ರಾಲಯದ ಬಳಿ ನದಿಯಲ್ಲಿ ಈಜಲು ತೆರಳಿದ್ದ ಐವರು ಮೃತಪಟ್ಟಿದ್ದಾರೆ.

ಸುದ್ದಿ 5

ದೋಷ ಒಪ್ಪಿಕೊಂಡ ಸಿಬಿಎಸ್‌ಇ

ನವದೆಹಲಿ: 10 ಮತ್ತು 12ನೇ ತರಗತಿ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನಕ್ಕಾಗಿ ಪರಿಚಯಿಸಲಾದ ಒಎಸ್‌ಎಂ ವ್ಯವಸ್ಥೆ– ಆನ್‌ಮಾರ್ಕ್ ಪೋರ್ಟಲ್‌ನಲ್ಲಿ ದೋಷ ಇತ್ತು ಎನ್ನುವುದನ್ನು ಸಿಬಿಎಸ್‌ಇ ಒಪ್ಪಿಕೊಂಡಿದೆ.

ಸುದ್ದಿ 11

ಅಪಘಾತ: ಕರ್ನಾಟಕದ ಏಳು ಮಂದಿ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಚಾಂಬಾ ಜಿಲ್ಲೆಯಲ್ಲಿ ಕಾರೊಂದು ಸುಮಾರು 500 ಮೀಟರ್ ಆಳವಾದ ಕಮರಿಗೆ ಬಿದ್ದು, ಕರ್ನಾಟಕದ ಏಳು ಮಂದಿ ಸೇರಿ ಎಂಟು ಮಂದಿ ಮೃತಪಟ್ಟಿದ್ದಾರೆ.

ಸುದ್ದಿ 2

ಚಿನಕುರುಳಿ ಪ್ರಕಾಶ್ ಶೆಟ್ಟಿ

ಈ ಸಲವೂ ಕಪ್ ಆರ್‌ಸಿಬಿಗೇ

ಇಂಡಿಯನ್ ಪ್ರೀಮಿಯರ್ ಲೀಗ್‌ನ ಟ್ರೋಫಿಯೊಂದಿಗೆ ಸಂಭ್ರಮಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

8ಕ್ಕೆ 155 (20 ಓವರ್) ಗುಜರಾತ್ ಟೈಟನ್ಸ್
5ಕ್ಕೆ 161 (18 ಓವರ್) ಆರ್‌ಸಿಬಿ
ಫಲಿತಾಂಶ: ಆರ್‌ಸಿಬಿಗೆ 5 ವಿಕೆಟ್‌ಗಳ ಗೆಲುವು

ಅಹಮದಾಬಾದ್/ ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕಣ್ಮಣಿ ವಿರಾಟ್ ಕೊಹ್ಲಿ ತಮ್ಮ ಅಭಿಮಾನಿಗಳನ್ನು ನಿರಾಶೆಗೊಳಿಸಲಿಲ್ಲ. ಸತತ ಎರಡನೇ ಬಾರಿ ಐಪಿಎಲ್ ಪ್ರಶಸ್ತಿಯನ್ನು ಬೆಂಗಳೂರಿಗೆ ತಂದರು. ಸಾಬರಮತಿ ನದಿ ತೀರದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಹುಟ್ಟಿದ ಸಂಭ್ರಮದ ಅಲೆಗಳು ಕರ್ನಾಟಕದ ಬೀದಿಬೀದಿಗಳಿಗೂ ಅಪ್ಪಳಿಸಿದವು.

ಸತತ 17 ವರ್ಷಗಳ ಪ್ರಶಸ್ತಿ ಬರ ಎದುರಿಸಿದ್ದ ಆರ್‌ಸಿಬಿ ಹೋದ ವರ್ಷ ಇದೇ ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ ಕಿರೀಟ ಧರಿಸಿತ್ತು. ಆಗ ಭಾವುಕತೆಯು ನದಿಯಾಗಿ ಹರಿದಿತ್ತು. ಈ ಸಲ ಆತಿಥೇಯ ಗುಜರಾತ್ ಟೈಟನ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದಾಗ ಅಂತಹ ಯಾವುದೇ ಭಾವನಾತ್ಮಕ ದೃಶ್ಯಗಳು ಕಾಣಲಿಲ್ಲ. ಕೊಹ್ಲಿಯನ್ನು ಸುತ್ತುವರಿದ ಸಹ ಆಟಗಾರರು ಸಂಭ್ರಮಿಸಿದರು. 'ಅಂದುಕೊಂಡಂತೆ ಎರಡನೇ ಸಲ ಪ್ರಶಸ್ತಿ ಜಯಿಸಿದ್ದೇವೆ' ಎಂಬ ಹಾವಭಾವ ಆಟಗಾರರಲ್ಲಿ ಕಂಡಿತ್ತು. ಐಪಿಎಲ್ ಇತಿಹಾಸದಲ್ಲಿ ಸತತ ಎರಡನೇ ಪ್ರಶಸ್ತಿ ಗೆದ್ದ ಮೂರನೇ ತಂಡವೆಂಬ ಹೆಗ್ಗಳಿಕೆಗೆ ರಜತ್ ಪಾಟೀದಾರ್ ಬಳಗ ಪಾತ್ರವಾಯಿತು.

ಟೂರ್ನಿ ಆರಂಭವಾಗುವ ಮುನ್ನ ಬೆಂಗಳೂರಿನಲ್ಲಿ ಫೈನಲ್ ನಡೆಯಲಿದೆ ಎಂದು ಘೋಷಿಸಲಾಗಿತ್ತು. ಆದರೆ ಲೀಗ್ ಹಂತದ ಅಂತ್ಯದಲ್ಲಿ ಸ್ಥಳಾಂತರ ಮಾಡಲಾಗಿತ್ತು. ಇದರಿಂದಾಗಿ ಬೆಂಗಳೂರಿಗೆ ಫೈನಲ್ ಆತಿಥ್ಯದ ಅವಕಾಶ ಕೈತಪ್ಪಿತ್ತು. ಆದರೆ ಟ್ರೋಫಿ ಕೈತಪ್ಪದಂತೆ ವಿರಾಟ್ ನೋಡಿಕೊಂಡರು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಆರ್‌ಸಿಬಿಯ ಜೋಶ್ ಹೇಝಲ್‌ವುಡ್ (37ಕ್ಕೆ2) ಮತ್ತು ರಸಿಕ್ ದಾರ್ (27ಕ್ಕೆ3) ಗುಜರಾತ್ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದರು. ಗುರಿ ಬೆನ್ನಟ್ಟಿದ್ದ ಆರ್‌ಸಿಬಿ ತಂಡವು ಕೆಲವು ಆತಂಕದ ಕ್ಷಣಗಳನ್ನು ಎದುರಿಸಿತು. ಆದರೆ ವಿರಾಟ್ (ಅಜೇಯ 75;42ಎ) ಚೆಂದದ ಬ್ಯಾಟಿಂಗ್ ಮುಂದೆ ಬೌಲರ್‌ಗಳ ಆಟ ನಡೆಯಲಿಲ್ಲ.

ಇಂದಿನಿಂದ ಶಾಲೆಗಳು ಪುನರಾರಂಭ

ಬೆಂಗಳೂರು: ಬೇಸಿಗೆ ರಜೆ ಬಳಿಕ ಸೋಮವಾರದಿಂದ (ಜೂನ್ 1) ರಾಜ್ಯದಲ್ಲಿ ಶಾಲೆಗಳು ಪುನರಾರಂಭವಾಗಲಿದ್ದು, ಮಕ್ಕಳನ್ನು ಸ್ವಾಗತಿಸಲು ಶಾಲೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಸುದ್ದಿ 6

ಸಚಿವ ಸಂಪುಟ ರಚನೆ: ದೆಹಲಿಗೆ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರ ಪ್ರಮಾಣ ವಚನಕ್ಕೆ ಮುಹೂರ್ತ ನಿಗದಿಯಾದ ಬೆನ್ನಲ್ಲೇ, ಮಂತ್ರಿ ಮಂಡಲ ರಚನೆಯ ಕಸರತ್ತು ಬಿರುಸು ಪಡೆದಿದೆ.

ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರು ಸೋಮವಾರ (ಜೂನ್ 1) ಹೈಕಮಾಂಡ್ ನಾಯಕರ ಜೊತೆ ದೆಹಲಿಯಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

2

ಡಿಸಿಎಂ ಪ್ರಸ್ತಾವ ಇನ್ನೂ ಬಂದಿಲ್ಲ: ಖರ್ಗೆ

ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ಹೊಸ ಸಚಿವ ಸಂಪುಟದಲ್ಲಿ ಎಷ್ಟು ಜನ ಉಪ ಮುಖ್ಯಮಂತ್ರಿಗಳನ್ನು (ಡಿಸಿಎಂ) ಮಾಡಬೇಕು ಎಂಬುದರ ಬಗ್ಗೆ ಇನ್ನೂ ಯಾವುದೇ ಪ್ರಸ್ತಾವಗಳು ಬಂದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸ್ಪಷ್ಟಪಡಿಸಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿ, 'ಪ್ರಸ್ತಾವಗಳು ಬಂದ ಮೇಲೆ ಎಷ್ಟು ಡಿಸಿಎಂ ಮಾಡಬೇಕು? ಎಷ್ಟು ಶಾಸಕರು ಸಚಿವರಾಗಬೇಕು? ಮಹತ್ವದ ನಿಗಮದ ಅಧ್ಯಕ್ಷ ಸ್ಥಾನಗಳಿಗೂ ಜೊತೆಯಲ್ಲೇ ನೇಮಕ ಮಾಡಬೇಕೇ ಎನ್ನುವ ಚರ್ಚೆಯೂ ನಡೆದಿದೆ. ಈ ಬಗ್ಗೆ ಜೂನ್ 3ರ ನಂತರ ಸ್ಪಷ್ಟ ಚಿತ್ರಣ ಸಿಗಲಿದೆ' ಎಂದರು.

2

ಕೈಲಾಸ ಜೀವನ
ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್
Now Available In 60g Tube

ಕಾಲಿನ ಬಿರುಕುಗಳು
ಕಾಲುಗಳನ್ನು ಸ್ವಚ್ಛವಾಗಿ ತೊಳೆದು, ತುಸು ಹೊತ್ತು ಬೆಚ್ಚನೆ ನೀರಲ್ಲಿ ಅದ್ದಿಟ್ಟು, ಮೆತ್ತಗೆ ಮಾಡಿ. ಮೆತ್ತನೆ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. ಉಜ್ಜಬೇಡಿ. ಕಾಲಿನ ಬಿರುಕುಗಳು ತುಂಬಿ ಬರಲು ನೆರವಾಗುವುದು. ಕಾಲುಗಳ ಚರ್ಮ ನವುರು ಹಾಗೂ ಮೃದುವಾಗುವುದು.

ಗುಳ್ಳೆಗಳು, ಮೊಡವೆ
ಬೆಚ್ಚನೆ ನೀರಿನಿಂದ ಮುಖಕ್ಕೆ ಶಾಖ ಕೊಟ್ಟು, ಮೆತ್ತನೆಯ ಬಟ್ಟೆಯಿಂದ ಒರೆಸಿ. ಕೈಲಾಸ ಜೀವನವನ್ನು ನಿಧಾನವಾಗಿ ಚರ್ಮದಲ್ಲಿ ಇಂಗಿಸಿ. (ಉಜ್ಜಬೇಡಿ.) ಮೊಡವೆ, ಗುಳ್ಳೆಗಳಿಂದ ಶೀಘ್ರ ಆರಾಮ ಲಭಿಸಲು ನೆರವಾಗುತ್ತದೆ. ಮುಖ ತೇಜಸ್ವಿ, ಆಕರ್ಷಕ, ತಿಳಿಯಾಗಲು ನೆರವಾಗುವುದು.

ಕಣ್ಣುಗಳ ಉರಿತ
ಬೆಚ್ಚನೆ ನೀರಿನಿಂದ ಮುಖ ಮತ್ತು ಕಣ್ಣುಗಳನ್ನು ಸ್ವಚ್ಛ ಮಾಡಿ. ರಾತ್ರಿ ಮಲಗುವಾಗ ಕೈಲಾಸ ಜೀವನವನ್ನು ಲೇಪಿಸಿ ಮೇಲೆ ಹತ್ತಿಯ ಮಡಿಕೆಯನ್ನಿರಿಸಿ. ತಂಪು ಉಂಟಾಗಿ ಕಣ್ಣುಗಳ ಉರಿತ ಮತ್ತು ಕೆಂಪು ಕಡಿಮೆಯಾಗಲು ನೆರವಾಗುವುದು.

ಮೂಲವ್ಯಾಧಿ / ಫಿಶೂರ್
ಒಂದು ಚಮಚೆ ಕೈಲಾಸ ಜೀವನವನ್ನು ಅಷ್ಟೇ ಸಕ್ಕರೆಯೊಂದಿಗೆ ರಾತ್ರಿ 21 ದಿನಗಳ ಕಾಲ ಸೇವಿಸಿ. ಕೆಜೆ ಕ್ರೀಮ್ ಅನ್ನು ಪೀಡಿತ ಪ್ರದೇಶಕ್ಕೆ ದಿನಕ್ಕೆ 2/3 ಬಾರಿ ಅನ್ವಯಿಸಿ. ಇದು ಬಿರುಕುಗಳಿಂದ ಪರಿಹಾರವನ್ನು ತರುತ್ತದೆ. ಎಣ್ಣೆ, ಮಾಂಸ ಮತ್ತು ಮದ್ಯವನ್ನು ತಪ್ಪಿಸಿ.

ಕಾಲಿನ ಬಿರುಕುಗಳು, ಮೊಡವೆ, ಗುಳ್ಳೆಗಳು, ಕಣ್ಣುಗಳ ಉರಿತ, ಸುಡುವಿಕೆ, ಗಾಯ ಮತ್ತು ಕೊಯ್ತಗಳು, ಬಿರುಕುಗಳು... ಇತ್ಯಾದಿಗಳಿಗೆ ಪರಿಣಾಮಕಾರಿ!
ರೋಗ ಹಲವು, ಪರಿಹಾರ ಒಂದು... ಹೀಗಾಗಿ ಮಲ್ಟಿಪರ್ಪಸ್ ! ಇಂದೇ ಖರೀದಿಸಿ !

Also available on amazon | netmeds.com India Ki Pharmacy
Available in: 12g, 20g & 60g Tube, 30g, 60g, 120g, 230g Bottle
Manufacturer: ASUM, Pune: 020-24486865 I Customer Care: Prashant: 91300 26070
I asumkj@gmail.com I www.asum.com I

INTRODUCING
RAMAIAH INSTITUTE OF SCIENCE & MANAGEMENT
A Distinct Greenfield **Deemed to be University**
Under UGC Act, AICTE approved

IN COLLABORATION WITH
UNIVERSITY AT ALBANY
STATE UNIVERSITY OF NEW YORK

ENGINEER YOUR FUTURE BEFORE THE FUTURE ARRIVES

RISM where **Science, Technology, Engineering & Mathematics (STEM) converges** with Management

Designed in Bengaluru
India's innovation capital RISM is:
- GLOBALLY BENCHMARKED
- INDUSTRY EMBEDDED
- TRANSLATIONAL RESEARCH FOCUSED
- WITH GLOBALLY RECOGNISED FACULTY

Scan the QR Code to view the pre-registration / application page.
WWW.RISM.ORG.IN

ADMISSIONS OPEN
Scores of SAT, JEE and COMEDK will be considered for the admission.
PROGRAMMES B. Tech. in
COMPUTER SCIENCE & AI
AEROSPACE ENGINEERING
ELECTRICAL SCIENCES
Management
BBA - TECHNOLOGY MANAGEMENT
Pre-Registration Email:
preregistration@rism.org.in

TUITION FEE WAIVER
20% of students will receive an 80% tuition fee waiver for all four years of the program.

Contact Numbers:
73533 34533 |73533 05533

6th & 7th Floor, Wing-B, North Gate, Airport Road, Yelahanka Hobli, Bengaluru – 560 064
BUILT FOR FUTURE ENGINEERS, INNOVATORS, ENTREPRENEURS & INDUSTRY LEADERS

SIKSHA 'O' ANUSANDHAN (DEEMED TO BE UNIVERSITY)
SAAT-2026

Accredited by NAAC with Grade 'A++' | UGC Graded Autonomy(Category-I) | NBA Accredited | ICAR Accredited | NABL Accredited | NABH Accredited
AICTE Approved | NMC Approved | DCI Approved | PCI Approved | BCI Approved | INC Approved | VCI Approved

PROGRAMMES OFFERED

B.TECH PROGRAMMES IN CORE ENGINEERING
Civil Engineering
Electrical Engineering
Mechanical Engineering

B.TECH PROGRAMMES IN ELECTRONICS DESIGN
Electrical and Electronics Engineering
Electronics and Communication Engineering

B.TECH PROGRAMMES IN CORE COMPUTING
Computer Science and Engineering
Computer Science and Information Technology

B.TECH PROGRAMMES IN EMERGING COMPUTING
Computer Science and Engineering (AI and ML)
Computer Science and Engineering (Cyber Security)
Computer Science and Engineering (Data Science)
Computer Science and Engineering (Internet of Things)

M.TECH PROGRAMMES
Structural Engineering
Electric Vehicle Technology
Machine Design and Robotics
Embedded System and VLSI Design
Computer Science and Engineering

M.Sc. PROGRAMMES
Physics
Chemistry
Mathemetics
Biotechnology
Integrated M.Sc. Biotechnology

COMPUTER APPLICATIONS PROGRAMMES
Bachelor of Computer Applications (BCA)
Master of Computer Applications (MCA)

LAW PROGRAMMES
BA. LL.B (H) - Integrated
BBA LL.B (H) - Integrated
LL.B. (H) - 3 Years
LL.M. - 1 Year

MANAGEMENT PROGRAMMES
BBA
MBA
Integrated MBA
MBA (Hospital Administration)
MBA (Artificial Intelligence and Data Science)

HOTEL MANAGEMENT PROGRAMMES
BHMCT (Bachelor of Hotel Management & Catering Technology)
MBA (Hospitality Management)

NURSING PROGRAMMES
B.Sc. (Nursing) (Basic)
B.Sc. (Nursing) (Post Basic)
M.Sc. (Nursing)

AGRICULTURAL PROGRAMMES
B.Sc. (H) Agriculture
M.Sc. Agriculture

PHARMACY PROGRAMMES
B. Pharm
M. Pharm

nirf
National Institutional Ranking Framework 2025
15th in University Category
22nd in Engineering Category
15th in Medical Category
09th in Dental Category
10th in Law Category

Globally Ranked By
QS WORLD UNIVERSITY RANKINGS | THE WORLD UNIVERSITY RANKINGS

To apply for admission through SAAT,
Visit: www.soa.ac.in

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

‘ಅನ್ಯ ಉದ್ದೇಶಕ್ಕೆ ಜಮೀನು ನೀಡಬೇಡಿ’

ನ್ಯಾಯಮೂರ್ತಿಗಳ ವಸತಿಗೃಹ ನಿರ್ಮಾಣಕ್ಕೆ ಪಶುವೈದ್ಯಕೀಯ ಜಮೀನು ಸ್ವಾಧೀನ: ಸರ್ಕಾರದ ನಿರ್ಧಾರಕ್ಕೆ ವಿರೋಧ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ನಾಲ್ಕು ಎಕರೆ ಭೂಮಿಯನ್ನು ನ್ಯಾಯಮೂರ್ತಿಗಳ ವಸತಿಗೃಹ ಹಾಗೂ ಮೂರು ಎಕರೆ ಭೂಮಿಯನ್ನು ಆಸ್ಪತ್ರೆ ನಿರ್ಮಾಣಕ್ಕಾಗಿ ನೀಡಲು ಸರ್ಕಾರ ಅಧಿಸೂಚನೆ ಹೊರಡಿಸಿದೆ. ಆದರೆ, ಇದನ್ನು ವಿರೋಧಿಸಿ ವಿದ್ಯಾರ್ಥಿಗಳು, ಹಳೆ ವಿದ್ಯಾರ್ಥಿಗಳು ಹೋರಾಟಕ್ಕಿಳಿದಿದ್ದಾರೆ.

ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಪ್ರಮುಖ ಸಂಸ್ಥೆಯಾಗಿರುವ ಈ ಮಹಾವಿದ್ಯಾಲಯವು ಪಶುವೈದ್ಯಕೀಯ ಶಿಕ್ಷಣ, ಸಂಶೋಧನೆ ಮತ್ತು ಪ್ರಾಣಿ ಚಿಕಿತ್ಸೆಯಲ್ಲಿ ರಾಜ್ಯದಲ್ಲಿಯೇ ಅತ್ಯುನ್ನತ ಸ್ಥಾನ ಪಡೆದಿದೆ. ದೇಶದಲ್ಲಿ ಐದನೇ ಸ್ಥಾನದಲ್ಲಿದೆ.

ಹಿಂದೆಯೇ ಕಣ್ಣು: ಹೈಕೋರ್ಟ್ ನ್ಯಾಯಮೂರ್ತಿಗಳ ವಸತಿಗಾಗಿ 20 ಎಕರೆ ಜಮೀನು ನೀಡಬೇಕು ಎಂದು 2011ರಲ್ಲಿಯೇ ಸರ್ಕಾರ ಕೇಳಿತ್ತು. ಆದರೆ, ಪಶುವೈದ್ಯಕೀಯ ಕಾಲೇಜಿನ ಆಗಿನ ಆಡಳಿತ ಮಂಡಳಿ ಒಪ್ಪಿರಲಿಲ್ಲ. ಅಲ್ಲೇ ಪಕ್ಕದಲ್ಲಿ ಕರ್ನಾಟಕ ಆಗ್ರೊ ಇಂಡಸ್ಟ್ರೀಸ್ ಜಾಗ ಸಿಕ್ಕಿದ್ದರಿಂದ ಅಲ್ಲಿ ‘ನ್ಯಾಯಗ್ರಾಮ’ ನಿರ್ಮಿಸಿ ನ್ಯಾಯಮೂರ್ತಿಗಳಿಗೆ ವಸತಿ ಗೃಹಗಳನ್ನು ನೀಡಲಾಗಿತ್ತು.

ಇನ್ನಷ್ಟು ವಸತಿಗೃಹಗಳ ವ್ಯವಸ್ಥೆ ಅಗತ್ಯ ಇರುವುದರಿಂದ ಈ ನ್ಯಾಯ ಗ್ರಾಮಕ್ಕೆ ಹೊಂದಿಕೊಂಡಿರುವ ನಾಲ್ಕು ಎಕರೆ ಜಮೀನನ್ನು ನೀಡುವಂತೆ ಕೋರಿದ್ದರಿಂದ ಸರ್ಕಾರ ಈ ನಾಲ್ಕು ಎಕರೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದೆ ಎಂದು ಇಲ್ಲಿನ ವಿದ್ಯಾರ್ಥಿಗಳು ಮಾಹಿತಿ ನೀಡಿದರು.

ಈ ಪಶುವೈದ್ಯಕೀಯ ಮಹಾವಿದ್ಯಾಲಯದ ಜಾಗದಲ್ಲಿ ಮನುಷ್ಯರಿಗೆ ಸಂಬಂಧಿಸಿದ ಆಸ್ಪತ್ರೆ ನಿರ್ಮಿಸಬೇಕು ಎಂದು ಸ್ಥಳೀಯ ರಾಜಕಾರಣಿಗಳು ಒತ್ತಾಯಿಸುತ್ತಾ ಬಂದಿದ್ದರು. ಈಗ ನ್ಯಾಯಮೂರ್ತಿಗಳ ವಸತಿಗೃಹಗಳಿಗಾಗಿ ಅಧಿಸೂಚನೆ ಹೊರಡಿಸುವಾಗ ಆಸ್ಪತ್ರೆಗೆ ಅಗತ್ಯ ಇರುವ ಮೂರು ಎಕರೆಯನ್ನೂ ಸೇರಿಸಲಾಗಿದೆ ಎಂದು ದೂರಿದರು.

ಕ್ಯಾಂಪಸ್‌ನಲ್ಲಿ ಜಾನುವಾರು, ಹಂದಿ, ಕೋಳಿ ಫಾರಂಗಳು ಇರುವುದರಿಂದ ಸಾರ್ವಜನಿಕರ ಓಡಾಟವು ಜೈವಿಕ ಭದ್ರತೆಗೆ ಧಕ್ಕೆ ತರಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಆ್ಯಂಡ್ ವೆಟರ್ನರಿ ಬಯಲಾಜಿಕಲ್ಸ್‌ನಲ್ಲಿ ವಿವಿಧ ಪ್ರಾಣಿಗಳಿಗೆ ನೀಡುವ ಲಸಿಕೆಗಳನ್ನು ತಯಾರಿಸಲಾಗುತ್ತದೆ. ಸೋಂಕುಕಾರಕ ವೈರಲ್ ಹಾಗೂ ಬ್ಯಾಕ್ಟೀರಿಯಲ್ ರೋಗಕಾರಕಗಳನ್ನು ನಿರ್ವಹಿಸಲಾಗುತ್ತದೆ. ಅಂಥ ಸ್ಥಳದ ಪಕ್ಕದಲ್ಲಿ ನ್ಯಾಯಮೂರ್ತಿಗಳ ವಸತಿ ಗೃಹ, ಮನುಷ್ಯರ ಆಸ್ಪತ್ರೆ ನಿರ್ಮಿಸುವುದು ಒಳ್ಳೆಯದಲ್ಲ. ವೈರಾಣು ಹರಡಿದರೆ ಅಪಾಯ ಉಂಟಾಗುವ ಸಾಧ್ಯತೆಗಳಿರುತ್ತವೆ ಎಂದು ತಜ್ಞರು ತಿಳಿಸಿದ್ದಾರೆ.

‘ಇಲ್ಲಿ 500ಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಬಹುತೇಕರು ಸೇರಿ ಈಗಾಗಲೇ ಪ್ರತಿಭಟನೆ ನಡೆಸಿದ್ದೇವೆ. ಯಾವ ಕಾರಣಕ್ಕೂ ನಮ್ಮ ಸಂಸ್ಥೆಯ ಜಮೀನನ್ನು ಅನ್ಯ ಉದ್ದೇಶಕ್ಕೆ ಬಳಸಲು ಬಿಡುವುದಿಲ್ಲ’ ಎಂದು ವಿದ್ಯಾರ್ಥಿಗಳು ತಿಳಿಸಿದರು.

ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯ

ಮುಖ್ಯಾಂಶಗಳು

- 2011ರಲ್ಲಿಯೇ 20 ಎಕರೆ ಜಮೀನು ಕೇಳಿದ್ದ ಸರ್ಕಾರ
- ಸಾರ್ವಜನಿಕರ ಓಡಾಟವು ಜೈವಿಕ ಭದ್ರತೆಗೆ ಧಕ್ಕೆ: ಕಳವಳ
- ವೈರಾಣು ಹರಡಿದರೆ ಕಷ್ಟ: ತಜ್ಞರ ಅಭಿಪ್ರಾಯ

ನ್ಯಾಯಗ್ರಾಮದ ಪಕ್ಕದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯದ 4 ಎಕರೆ ಜಮೀನು

ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ವಿದ್ಯಾರ್ಥಿಗಳ ಅಭಿಪ್ರಾಯಗಳು

ನ್ಯಾಯಮೂರ್ತಿಗಳ ವಸತಿಗೃಹಗಳಿಗೆ ಜಮೀನು ಬೇಕಿದ್ದರೆ ಅರ್ಕಾವತಿ ಬಡಾವಣೆ, ಶಿವರಾಮ ಕಾರಂತ ಬಡಾವಣೆ ಸೇರಿದಂತೆ ಬೇರೆ ಕಡೆ ಕೊಡಬಹುದು. ವಿದ್ಯಾಲಯದ ಜಮೀನು ಮೇಲೆ ಕಣ್ಣು ಹಾಕುವುದು ಸರಿಯಲ್ಲ.

ಕಾರ್ತಿಕ್ ನರೋಣೆ, ಪಶುವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿ

ಸೂಪರ್ ಸ್ಪೆಷಾಲಿಟಿ ಪಶು ವೈದ್ಯಕೀಯ ಆಸ್ಪತ್ರೆ, ಪೆಟ್ ಪಾರ್ಕ್ ನಿರ್ಮಾಣ, ಸಂಶೋಧನಾ ಕೇಂದ್ರ ನಿರ್ಮಾಣ ಹೀಗೆ ಅನೇಕ ಯೋಜನೆಗಳನ್ನು ಸಂಸ್ಥೆ ಹಾಕಿಕೊಂಡಿದೆ. ಅದಕ್ಕೆ ಜಮೀನು ಬೇಕು. ಇದರ ಅರಿವು ಇಲ್ಲದವರು ಬೇರೆ ಉದ್ದೇಶಕ್ಕೆ ಬಳಸಲು ನೋಡುತ್ತಿದ್ದಾರೆ.

ಸಂಜಯ್ ಎನ್.ಪಿ., ಪಶುವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿ

ಹೊರಗಿನಿಂದ ನೋಡುವವರಿಗೆ ಇದು ಖಾಲಿ ಜಾಗದಂತೆ ಕಾಣಬಹುದು. ಆದರೆ, ಇದು ಖಾಲಿ ಜಾಗವಲ್ಲ, ಆಡು, ಕುರಿ, ಹಸುಗಳಿಗೆ ಇಲ್ಲಿ ಹುಲ್ಲು ಬೆಳೆಯಲಾಗುತ್ತದೆ. ಸಂಶೋಧನೆಗೆ ಬಳಸಲಾಗುತ್ತದೆ. ರೋಗಾಣುಗಳ ಪರೀಕ್ಷೆಗೆ ಬೇಕಾದ ಬಫರ್ ವಲಯ ಇದು.

ಗೋಪಾಲಗೌಡ ಕೆ., ಪಶುವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿ

ಪಶುವೈದ್ಯಕೀಯ ಕೋರ್ಸ್ ಓದುವವರಿಗೆ, ಅದಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಮಾಡುವುದಕ್ಕಾಗಿ ಮೈಸೂರು ಮಹಾರಾಜರು ನೀಡಿರುವ ಜಮೀನು ಇದು. ಬೇರೆ ಉದ್ದೇಶಕ್ಕೆ ಬಳಸುವುದು ಷರತ್ತು ಉಲ್ಲಂಘಿಸಿದಂತಾಗುತ್ತದೆ.

ಸುಹಾಸ್ ಕೆ.ಎಂ., ಪಶುವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿ

ಬಾಲ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 2026ನೇ ಸಾಲಿನ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ, ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಮಕ್ಕಳು ವೆಬ್‌ಸೈಟ್: https://awards.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

5 ವರ್ಷ ಮೇಲ್ಪಟ್ಟು, 18 ವರ್ಷದೊಳಗಿನ ಸಾಧನೆ ಮಾಡಿರುವ ಮಕ್ಕಳು ಬಾಲ ಪುರಸ್ಕಾರ 2026ಕ್ಕೆ ಅರ್ಜಿ ಸಲ್ಲಿಸಲು ಅರ್ಹರು. ಮಾಹಿತಿಗೆ 080–29919017 ಸಂಪರ್ಕಿಸಬಹುದು.

PUBLIC NOTICE

My Client intends to purchase a property, which is more particularly described in the Schedule hereunder and hereinafter referred to as the Schedule Property presently owned by Mrs. Sandhya Khandelwal, aged about 72 years, wife of Sri Jagdish Prasad Kahndelwal, residing a t No.205, 5th Cross, 10th 'D' Main Road, Jayanagar 1st Block, Bangalore - 560011, who have represented that they have a clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents within fifteen (15) days hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

SCHEDULE PROPERTY

All that piece and parcel of the converted land measuring an extent of about 17 Guntas comprised in Sy.No.26/1 and 12 Guntas comprised in Sy.No.33/4, both situated at Kalena Agrahara Village, Begur Hobli, Bangalore South Taluk (converted vide Official Memorandum bearing No.ALN(S).SR.13/2007-08, dated:25/0/2014 issued by the Deputy Commissioner, Bangalore District), presently bearing EPID No.5734093373 assigned by the Bruhat Bangalore Mahanagara Palike and bounded on the:

East by : Re. Sy. Nos. 24 and 26, West by : Re. Sy. Nos. 33/3 and 33/4, North by : Road, South by : Remaining portion o f Sy.Nos. 26.

Arvind Raghavan, Advocate
No. 48, "ISHITA", 2nd Main Road, Vyalikavar, Bangalore-560003. Ph. No: 9845004419
E-Mail: arvind_ncsr@yahoo.com

PUBLIC NOTICE

Notice is hereby given to the General Public that my clients namely, **Sri. Harish Babu. Y, Sri. K.C. Jayaprakash, and or their nominees,** are intending to purchase all that piece and parcel of agricultural land bearing **Survey No.86, (Old Sy No: 64)** measuring 1 Acre 35.12 Guntas excluding 4.04 guntas of B Kharab Land, situated at Balagere Village, Varthur Hobli, Bengaluru East Taluk, Bengaluru Urban District, from: Sri. Manjunath B.C, B.C. Satish, Sri. Shankar.B.D, Sri. Munivenkatappa, Sri. Anjinappa, Sri. Muniyellappa, and Sri. Narayanaswamy along with their family members who claim to be the joint and absolute owners in possession and enjoyment of the Schedule Property.

Therefore, any person/s, banks, financial institutions or anybody having any right, title, interest, share, claim, lien, charge, mortgage, tenancy, easement, inheritance, acquisition proceedings, attachment, litigation or objection of whatsoever nature over the Schedule Property are hereby called upon to notify the same in writing to the undersigned together with supporting documentary proof within 15 (Fifteen) days from the date of publication of this notice, failing which it shall be presumed that no person has any claim whatsoever over the Schedule Property and the proposed transaction shall be proceeded with without any further reference.

SCHEDULE PROPERTY

All that piece and parcel of the agricultural land bearing **Survey No.86 (Old Sy No: 64) measuring 1 Acre 35.12 Guntas, excluding 4.04 guntas of kharab land** situated at Balagere Village, Varthur Hobli, Bengaluru East Taluk, Bengaluru Urban District and bounded on:

East by : Land bearing Sy. No.64
West by : Road
North by : Land bearing Sy. No.82
South by : Land bearing Sy. No.64

Manjunath J S
ANSHI LEGAL
Advocates & Solicitors,
No. #216, Chethan Illam, 7th Cross, 7th Main, Defence Layout, Sahakaranagara, Bangalore– 560 092.
Ph:9980913373/9886385075
Place : Bengaluru Date : 31.05.2026

ಭಾನುವಾರ ನಡೆದ ಐಪಿಎಲ್ ಫೈನಲ್ಸ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ವಿರುದ್ಧ ಆರ್ ಸಿ ಬಿ ತಂಡದವರು ಜಯಗಳಿಸಿದ ನಂತರ ಬೆಂಗಳೂರಿನ ಚರ್ಚ್ ಸ್ಟ್ರೀಟ್ ನಲ್ಲಿ ಅಭಿಮಾನಿಗಳು ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ. ಕಿಶೋರ್ ಕುಮಾರ್ ಬೋಳಾರ್

ಆರ್‌ಸಿಬಿ ಅಭಿಮಾನಿಗಳ ಸಂಭ್ರಮ

ಬೆಂಗಳೂರು: ಐಪಿಎಲ್‌ನಲ್ಲಿ ಎರಡನೇ ಬಾರಿಗೆ ಆರ್‌ಸಿಬಿ ತಂಡ ಚಾಂಪಿಯನ್ ಆಗುತ್ತಿದ್ದಂತೆ ನಗರದಲ್ಲಿ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿತ್ತು. ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಬಸವನಗುಡಿ, ಕೋರಮಂಗಲ, ಜಯನಗರ ಸೇರಿ ಹಲವೆಡೆ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಗೆಲುವಿನ ಸಂಭ್ರಮಾಚರಣೆಗೆ ಪೊಲೀಸರು ಅವಕಾಶ ನಿರಾಕರಿಸಿದ್ದರೂ, ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ರಸ್ತೆಗೆ ಇಳಿದಿದ್ದರು. ಅಷ್ಟೇ ಅಲ್ಲದೆ, ಬಾರ್ ಮತ್ತು ಕೆಫೆಯಲ್ಲಿನ ಪರದೆಗಳಲ್ಲಿ ಕ್ರಿಕೆಟ್ ವೀಕ್ಷಣೆಯಲ್ಲಿ ತೊಡಗಿದ್ದ ಯುವಕ–ಯುವತಿಯರು ಆರ್‌ಸಿಬಿ ತಂಡ ಚಾಂಪಿಯನ್ ಆಗುತ್ತಿದ್ದಂತೆ ಕುಣಿದು ಕುಪ್ಪಳಿಸಿದರು.

ಚಿನ್ನಸ್ವಾಮಿ ಸ್ಟೇಡಿಯಂ ಸುತ್ತಮುತ್ತ ಆರ್‌ಸಿಬಿ ಅಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು. ಪಂದ್ಯ ಮುಗಿಯುವ ವೇಳೆಗೆ ಸಂಭ್ರಮಾಚರಣೆಯಲ್ಲಿ ಭಾಗಿಯಾಗಲು ಯುವಕರು ಗುಂಪು ಗುಂಪಾಗಿ ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಕೋರಮಂಗಲ ಸೇರಿದಂತೆ ಹಲವು ಪ್ರಮುಖ ರಸ್ತೆಗಳತ್ತ ಬಂದರು. ಎಲ್ಲೆಡೆ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಆರ್‌ಸಿಬಿ ತಂಡ ಈ ಬಾರಿಯೂ ಚಾಂಪಿಯನ್ ಆಗಲಿ ಎಂದು ಪ್ರಾರ್ಥಿಸಿ ಅಭಿಮಾನಿಗಳು ಭಾನುವಾರ ಬೆಳಿಗ್ಗೆ ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಲುಲುಮಾಲ್, ಒರಾಯಿನ್ ಮಾಲ್ ಸೇರಿದಂತೆ ನಗರದ ಹಲವು ಮಾಲ್‌ಗಳು, ಪಬ್‌ಗಳು, ರೆಸ್ಟೋರೆಂಟ್‌ಗಳಲ್ಲಿ ಪಂದ್ಯ ವೀಕ್ಷಣೆಗೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಭಾನುವಾರ ರಜಾ ದಿನವಾದ್ದರಿಂದ ಕೆಲವರು ಕುಟುಂಬ ಸಮೇತ ಪಂದ್ಯ ನೋಡಲು ಮಾಲ್‌ಗಳಲ್ಲಿ ಮೊದಲೇ ಆಸನಗಳನ್ನು ಕಾಯ್ದಿರಿಸಿದ್ದರು.

ಸಚಿವ ಸಂಪುಟ ರಚನೆ: ದೆಹಲಿಗೆ ವರ್ಗ

ಒಂದನೇ ಪುಟದಿಂದ...

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮತ್ತು ಮೊದಲ ಹಂತದಲ್ಲಿ ಸಚಿವ ಸಂಪುಟಕ್ಕೆ ಯಾರನ್ನೆಲ್ಲ ಸೇರಿಸಿಕೊಳ್ಳಬೇಕು ಎಂಬ ಬಗ್ಗೆ ಉಭಯ ನಾಯಕರು ಚರ್ಚಿಸಲಿದ್ದಾರೆ. ಬಳಿಕ, ಸಚಿವರಾಗುವವರ ಪಟ್ಟಿಯನ್ನು ಕಾಂಗ್ರೆಸ್ ಹೈಕಮಾಂಡ್ ಅಂತಿಮಗೊಳಿಸುವ ಸಾಧ್ಯತೆ ಇದೆ.

ಸಿದ್ದರಾಮಯ್ಯ ನೇತೃತ್ವದ ಸಂಪುಟದಲ್ಲಿದ್ದವರು ಮತ್ತು ಹೊಸಬರು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಹುದ್ದೆ ಆಕಾಂಕ್ಷಿ ಶಾಸಕರು ತೆರೆಮರೆ ತಂತ್ರಗಾರಿಕೆ ಚುರುಕುಗೊಳಿಸಿದ್ದಾರೆ. ನಾಯಕರಿಬ್ಬರು ದೆಹಲಿಗೆ ತೆರಳುವ ಮಾಹಿತಿ ಪಡೆದಿದ್ದ ಸಚಿವ ಸ್ಥಾನದ ಆಕಾಂಕ್ಷಿಗಳು ದೆಹಲಿಗೆ ದೌಡಾಯಿಸಿದ್ದಾರೆ.

ಡಿಸಿಎಂ ಪ್ರಸ್ತಾವ ಇನ್ನೂ ಬಂದಿಲ್ಲ: ಖರ್ಗೆ

ಒಂದನೇ ಪುಟದಿಂದ...

‘ಶಿವಕುಮಾರ್ ಅವರೊಂದಿಗೆ ಎಷ್ಟು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ ಎನ್ನುವ ಪ್ರಸ್ತಾವವೂ ಬಂದಿಲ್ಲ. ಸದ್ಯಕ್ಕೆ ಮೊದಲ ಹಂತದಲ್ಲಿ ಕೆಲವರು ಸಂಪುಟ ಸೇರಲಿ. ಅದಾದ 15 ದಿನ ಅಥವಾ ಒಂದು ತಿಂಗಳು ಬಿಟ್ಟು ಎರಡನೇ ಹಂತದ ಮಂತ್ರಿಮಂಡಲ ರಚಿಸಲಿ ಎಂಬ ವಿಚಾರಗಳಿವೆ. ಆದರೆ, ಮುಖ್ಯಮಂತ್ರಿ ಏನು ವಿಚಾರ ಮಾಡುತ್ತಾರೋ ಅವರಿಗೇ ಬಿಟ್ಟಿದ್ದು’ ಎಂದು ಸ್ಪಷ್ಟಪಡಿಸಿದರು.

ಕೆಪಿಸಿಸಿಗೆ ಸೂಕ್ತ ಆಯ್ಕೆ: ‘ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿ ಹುದ್ದೆಗೆ ಮತ್ತೊಬ್ಬರು ಬರಲೇಬೇಕು. ಅದು ಸಹಜ ಪ್ರಕ್ರಿಯೆ. ಒಳ್ಳೆಯವರು, ಕಾಂಬಿನೇಷನ್ ಎಲ್ಲವನ್ನೂ ನೋಡಿ ಕೆಪಿಸಿಸಿಗೆ ನೇಮಿಸಬೇಕಾಗುತ್ತದೆ. ಮುಂಬರುವ ಚುನಾವಣೆಗೆ ಪಕ್ಷದ ಸಿದ್ಧತೆ ಹಾಗೂ ಪಕ್ಷ ಕಟ್ಟುವ ದೃಷ್ಟಿಯಿಂದ ಎಲ್ಲವನ್ನೂ ವಿಚಾರ ಮಾಡಿ ಆಯ್ಕೆ ಮಾಡಬೇಕಾಗುತ್ತದೆ. ಚುನಾವಣೆಗೆ 24 ತಿಂಗಳು ಮಾತ್ರ ಬಾಕಿ ಉಳಿದಿದೆ’ ಎಂದರು.

‘ಬಹಳ ಕ್ಷಿಪ್ರವಾಗಿ ಕೆಲಸ ಮಾಡಬೇಕಿದೆ. ವೇಗವಾಗಿ, ಸಾಮೂಹಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನನ್ನು ನಾವು ಹುಡುಕಬೇಕಿದೆ. ಜೊತೆಗೆ, ಅವರಿಗೆ ಸಹಕಾರ ನೀಡುವಂಥ ತಂಡವೂ ಬೇಕು. ಇವೆಲ್ಲ ವಿಚಾರ ಮಾಡಿ ಅಧ್ಯಕ್ಷರ ಆಯ್ಕೆ ಮಾಡುತ್ತೇವೆ’ ಎಂದರು.

> ನನ್ನ ಜೊತೆ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ಎಲ್ಲ ಆಯಾಮದಲ್ಲಿ ಆಲೋಚಿಸಿ ಪಕ್ಷದ ಹೈಕಮಾಂಡ್ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ
>
> **ಡಿ.ಕೆ. ಶಿವಕುಮಾರ್,** ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ಕಂದಕಕ್ಕೆ ಬಿದ್ದ ಕಾರು: ಕರ್ನಾಟಕದ ಏಳು ಮಂದಿ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಚಾಂಬಾ ಜಿಲ್ಲೆಯಲ್ಲಿ ಕಾರೊಂದು ಸುಮಾರು 500 ಮೀಟರ್ ಆಳವಾದ ಕಮರಿಗೆ (ಕಣಿವೆ ಪ್ರದೇಶ) ಬಿದ್ದು ಎಂಟು ಮಂದಿ ಮೃತಪಟ್ಟಿದ್ದಾರೆ. ಮೃತಪಟ್ಟವರಲ್ಲಿ ಏಳು ಮಂದಿ ಕರ್ನಾಟಕದವರು.

ಶುಕ್ರವಾರ ತಡರಾತ್ರಿ ಬೈರಾಗ್ ಸಚ್ ಪಾಸ್ ಕಿಲ್ಲಾರ್ ರಸ್ತೆಯಲ್ಲಿ ಅಪಘಾತ ಸಂಭವಿಸಿದ್ದು, ಶನಿವಾರ ಮಧ್ಯಾಹ್ನ ಸ್ಥಳೀಯರ ಗಮನಕ್ಕೆ ಬಂದಿತ್ತು.

ಮೃತರನ್ನು ಬೆಂಗಳೂರಿನ ಕಾಡುಗೋಡಿಯ ಅರವಿಂದ್ ಚಂದ್ರಕರ್, ಅವರ ಪತ್ನಿ ಪ್ರಾಚಿ, ಪುತ್ರ 8 ವರ್ಷದ ದರ್ಶ್ ಮತ್ತು 11 ವರ್ಷದ ಅಕ್ಷದ್. ಜತೆಗೆ ಪಿ.ಜಿ. ಕಾರ್ತಿಕೇಯನ್, ಅವರ ಪತ್ನಿ ಮಣಿಮಾಲಾ, ಪುತ್ರ ನಂದನ್ ಮತ್ತು ಟ್ಯಾಕ್ಸಿ ಚಾಲಕ, ಹಿಮಾಚಲ ಪ್ರದೇಶದ ಬನಿಖೇಟ್ ನಿವಾಸಿ ವಿಶ್ವಾಸ್ ಎಂದು ಗುರುತಿಸಲಾಗಿದೆ.

‘ಹಿಮಾಚಲ ಪ್ರದೇಶದ ಅತ್ಯಂತ ಕಡಿದಾದ ಮತ್ತು ದುರ್ಗಮ ಹಿಮಚ್ಛಾದಿತ ಪ್ರದೇಶ ಸಚ್ ಪಾಸ್‌ಗೆ ಇವರೆಲ್ಲರೂ ಟ್ಯಾಕ್ಸಿ ಮಾಡಿಕೊಂಡು ತೆರಳುತ್ತಿದ್ದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಪೊಲೀಸರು, ಸ್ಥಳೀಯರು ಹಗ್ಗದ ಸಹಾಯದಿಂದ ಕಾರು ಬಿದ್ದಿರುವ ಸ್ಥಳಕ್ಕೆ ಇಳಿದು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ಕುಟುಂಬಗಳು ಸೇರಿ ಟ್ಯಾಕ್ಸಿ ಬುಕ್ ಮಾಡಿಕೊಂಡು ತೆರಳಿದ್ದರು. ಸರಿಯಾದ ಸಮಯಕ್ಕೆ ಟ್ಯಾಕ್ಸಿ ವಾಪಸ್ ಬಾರದೇ ಇದ್ದಾಗ ಅನುಮಾನ ಬಂದು ವಾಹನ ಮಾಲೀಕ ಜಿಪಿಎಸ್ ಆಧಾರದ ಮೇಲೆ ಟ್ರ್ಯಾಕ್ ಮಾಡಿದ್ದರು. ಕಲಾವನ್ ಪ್ರದೇಶದಲ್ಲಿ ಕೊನೆಯದಾಗಿ ಟ್ಯಾಕ್ಸಿ ಸಂಪರ್ಕಕ್ಕೆ ಸಿಕ್ಕಿತ್ತು.

ಗಾಯಕಿ ಸುಮನ್ ಕಲ್ಯಾಣಪುರ್ ನಿಧನ

ಮುಂಬೈ (ಪಿಟಿಐ): ‘ತುಮ್ನೆ ಪುಕಾರಾ’, ‘ನಾ ನಾ ಕರ್ತೆ’ ಸೇರಿದಂತೆ ಹಲವು ಜನಪ್ರಿಯ ಹಾಡುಗಳಿಂದ ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಬಹುಭಾಷಾ ಗಾಯಕಿ ಸುಮನ್ ಕಲ್ಯಾಣಪುರ್(89) ಭಾನುವಾರ ನಿಧನರಾಗಿದ್ದಾರೆ.

ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು ಲೋಖಂಡವಾಲಾ ಪ್ರದೇಶದ ನಿವಾಸದಲ್ಲಿ ರಾತ್ರಿ 8ರ ಸುಮಾರಿಗೆ ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಪುತ್ರಿ ಚಾರು ಇದ್ದಾರೆ.

1960 ಮತ್ತು 1970ರ ದಶಕದಲ್ಲಿ ತಮ್ಮ ಮಧುರ ಗೀತೆಗಳಿಂದ ಮನಸೆಳೆದಿದ್ದ ಕಲ್ಯಾಣಪುರ್ ಅವರು, ಅಂದಿನ ಕಾಲದ ಮೇರುಗಾಯಕಿ ಲತಾ ಮಂಗೇಶ್ಕರ್ ಪ್ರಭಾವದ ನಡುವೆಯೂ ತಮ್ಮದೇ ಸ್ವಂತಿಕೆಯನ್ನು ರೂಪಿಸಿದ್ದರು. ಸುಮನ್ ಅವರ ಧ್ವನಿಯನ್ನು ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರ ದನಿಗೆ ಹೋಲಿಸಲಾಗುತಿತ್ತು. ಆದರೆ, ಸಂದರ್ಶನವೊಂದರಲ್ಲಿ ಇದನ್ನು ಸುಮನ್ ನಿರಾಕರಿಸಿದ್ದರು.

ಸುಮನ್ ಕಲ್ಯಾಣಪುರ್

ಹಿಂದಿ, ಕನ್ನಡ, ಮರಾಠಿ, ಅಸ್ಸಾಮಿ, ಬಂಗಾಳಿ, ಒಡಿಯಾ ಸೇರಿದಂತೆ ಹಲವು ಭಾಷೆಗಳಲ್ಲಿ ಭಕ್ತಿಗೀತೆ, ಗಜಲ್ ಹೀಗೆ ಹಲವು ಪ್ರಕಾರದ ಹಾಡುಗಾರಿಕೆಯಲ್ಲಿ ಹೆಸರು ಮಾಡಿದ್ದರು.

ಅಂತ್ಯಸಂಸ್ಕಾರ ಸೋಮವಾರ ಮಧ್ಯಾಹ್ನ ಮುಂಬೈನ ಪವನ್ ಹನ್ಸ್ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಮನ್ ಅವರ ತಂದೆ ಶಂಕರರಾವ್ ಹೆಮ್ಮಾಡಿ ಅವರು ಮೂಲತಃ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯವರು. ಬ್ಯಾಂಕ್ ಉದ್ಯೋಗಿಯಾಗಿದ್ದ ಅವರು ಸ್ವಾತಂತ್ರ್ಯ ಪೂರ್ವದಲ್ಲೇ ಮುಂಬೈಗೆ ಸ್ಥಳಾಂತರಗೊಂಡಿದ್ದರು.

ನಗರದಲ್ಲಿ ಇಂದು

ಸಂಕಥನ ಉಪನ್ಯಾಸ ಸರಣಿ: ಉಪನ್ಯಾಸ: ನಟರಾಜ್ ಹುಳಿಯಾರ್, ಆಯೋಜನೆ: ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 11

ನಾಟಕಕಾರ ಡಿ.ಕೆ.ಚೌಟ ಅವರ ನೆನಪಿನಲ್ಲಿ ರಂಗಗೀತೆ, ರಂಗ ಗೌರವ, ನಾಟಕ ಪ್ರದರ್ಶನ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಕೆ.ಈ. ರಾಧಾಕೃಷ್ಣ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ನಾ. ದಾಮೋದರ ಶೆಟ್ಟಿ, ಶಶಿಧರ ಅಡಪ, ಉಪಸ್ಥಿತಿ: ರಾಧಾಕೃಷ್ಣ ಹೆಗಡೆ, ಜಿಪಿಒ ಚಂದ್ರು, ರಂಗ ಗೌರವ: ಕೃಷ್ಣಮೂರ್ತಿ ಕವತ್ತಾರ್, ಸುರೇಶ ಆನಗಳ್ಳಿ, ಮುಹಮ್ಮದ್ ಕುಳಾಯಿ, ಪ್ರಿಯ ಎಸ್.ಕೆ. ಸಿಂಗ್, ಕೆ. ಶಿವಸುಬ್ರಮಣ್ಯ, ರಂಗಗೀತೆ ಗಾಯನ: ರಾಜ್‌ಗುರು ಹೊಸಕೋಟೆ ಮತ್ತು ತಂಡ, ಡಿ.ಕೆ. ಚೌಟ ಅವರ ಕಾದಂಬರಿ ಆಧಾರಿತ ‘ಮಿತ್ತಬೈಲ್ ಯಮುನಕ್ಕ’ ನಾಟಕ ಪ್ರದರ್ಶನ, ಆಯೋಜನೆ: ರಂಗಚಂದಿರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30


ಡಿ.ಕೆ.ಚೌಟ

26ನೇ ವರ್ಷದ ಪ್ರವಚನ ವಾಹಿನಿ: ‘ಹದಿಬದೆಯ ಧರ್ಮ’ ವಿಷಯದ ಬಗ್ಗೆ ಪ್ರವಚನ: ಸತ್ಯೇಶ್ ಬೆಳ್ಳೂರ್, ವೈಷ್ಣವಿ ಡಿ. ಆಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256

‘ರಸ್ತೆ ಆವರಿಸಿಕೊಂಡ ಕಸ’

ಮಲ್ಲತ್ತಹಳ್ಳಿಯ ವಿಶ್ವೇಶ್ವರಯ್ಯ ಲೇಔಟ್‌ನ ಎಂ.ಪಿ. ಕ್ರೀಡಾ ಕ್ಲಬ್ ರಸ್ತೆ ತುಂಬ ಕಸ ಆವರಿಸಿಕೊಂಡಿದೆ. ಇಲ್ಲಿ ಕಸವನ್ನು ನಿಯಮಿತವಾಗಿ ವಿಲೇವಾರಿ ಮಾಡದ ಪರಿಣಾಮ, ಕಸ ಎಲ್ಲೆಂದರಲ್ಲಿ ಬಿದ್ದು ಚೆಲ್ಲಾಪಿಲ್ಲಿಯಾಗಿದೆ. ಕೆಲವರು ಇಲ್ಲಿ ಹಸಿ ಹಾಗೂ ಒಣ ಕಸವನ್ನು ಎಸೆಯುತ್ತಿದ್ದು, ವಾಸನೆಯಿಂದ ಸ್ಥಳೀಯರು ಸಮಸ್ಯೆ ಎದುರಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ಈ ಕಸದ ರಾಶಿ ಬೆಳೆಯುತ್ತಿದೆ. ಮಳೆ ಬಂದಲ್ಲಿ ಸೊಳ್ಳೆ ಕಾಟದ ಸಾಧ್ಯತೆಯಿದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಜಿಬಿಎ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬಿ.ಎಸ್. ಪ್ರಭಾಕರ್, ಸ್ಥಳೀಯ ನಿವಾಸಿ

‘ಕೊಳವೆಬಾವಿ ತೆರವು ಮಾಡಿ’

ಹೆಬ್ಬಾಳದ ಚಿದಾನಂದ ರೆಡ್ಡಿ ಲೇಔಟ್‌ನ ಮೂರನೇ ಅಡ್ಡರಸ್ತೆಯಲ್ಲಿರುವ ಕೊಳವೆಬಾವಿ ಒಂದು ವರ್ಷದಿಂದ ಕೆಟ್ಟು ಹೋಗಿದೆ. ಇದರಿಂದ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ಕೊಳವೆಬಾವಿ ರಸ್ತೆಯಲ್ಲಿಯೇ ಇದ್ದ ಕಾರಣ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ದ್ವಿಚಕ್ರ ವಾಹನಗಳು ಹಾಗೂ ಕಾರುಗಳು ಅಪಘಾತಕ್ಕೆ ಒಳಗಾಗುವ ಸಾಧ್ಯತೆಯಿದೆ. ಆದ್ದರಿಂದ ತಕ್ಷಣವೇ ಕೊಳವೆ ಬಾವಿ ಮುಚ್ಚಿಸಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು.

ಜಿ.ಎಸ್. ಮಂಜುನಾಥ್
ಜಿ.ಆರ್. ಲೇಔಟ್ ನಿವಾಸಿ

‘ಪಾದಚಾರಿ ಮಾರ್ಗ ಒತ್ತುವರಿ’

ಶಾಂತಿನಗರದ ಕೆ.ಎಚ್. ರಸ್ತೆಯ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ, ಅಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಇದರಿಂದ ಆ ರಸ್ತೆಯಲ್ಲಿ ಸಂಚಾರ ಕಷ್ಟಸಾಧ್ಯವಾಗುತ್ತಿದೆ. ಪಾದಚಾರಿಗಳೂ ಸಮಸ್ಯೆ ಎದುರಿಸುತ್ತಿದ್ದು, ಪಾದಚಾರಿ ಮಾರ್ಗ ಇಲ್ಲದ ಕಾರಣ ರಸ್ತೆಯಲ್ಲಿಯೇ ಸಾಗಬೇಕಾಗಿದೆ. ವಾಹನಗಳು ವೇಗವಾಗಿ ಬರುವುದರಿಂದ ಅಪಘಾತಗಳಾಗುವ ಸಾಧ್ಯತೆಯಿದ್ದು, ನಿಯಮ ಉಲ್ಲಂಘಿಸಿ ಪಾದಚಾರಿ ಮಾರ್ಗದಲ್ಲಿ ಶೆಡ್‌ಗಳನ್ನು ನಿರ್ಮಿಸಿದವರ ಮೇಲೆ ಕ್ರಮ ಕೈಗೊಳ್ಳಬೇಕು. ಸಾವು–ನೋವು ಸಂಭವಿಸುವ ಮೊದಲು ಶೆಡ್‌ಗಳನ್ನು ತೆರವುಗೊಳಿಸಬೇಕು.

ಶಾಂತಿನಗರದ ನಿವಾಸಿಗಳು

‘ರಸ್ತೆಗೆ ಕಸ: ಕ್ರಮ ಕೈಗೊಳ್ಳಿ’

ಬಿಇಎಂಎಲ್ ಲೇಔಟ್‌ನ 3ನೇ ಹಂತದಲ್ಲಿರುವ ಬಿಇಟಿ ಸ್ಕೂಲ್ ರಸ್ತೆಗೆ ಕಸ ಹಾಕಲಾಗುತ್ತಿದೆ. ಸಮರ್ಪಕವಾಗಿ ಕಸ ವಿಲೇವಾರಿಯಾಗದ ಕಾರಣ ಕಸದ ರಾಶಿ ಬೆಳೆಯುತ್ತಿದೆ. ಕಸ ತಂದು ಎಸೆಯುವವರ ಮೇಲೂ ಯಾವುದೇ ಕ್ರಮ ಕೈಗೊಳ್ಳುತಿಲ್ಲ. ಜನ ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯರ ಅಹವಾಲು ಕೇಳುವವರಿಲ್ಲವಾಗಿದೆ. ಪ್ರದೇಶದ ಸುತ್ತಮುತ್ತ ತ್ಯಾಜ್ಯ ಹರಡಿಕೊಳ್ಳುವ ಪರಿಣಾಮ ಸಮಸ್ಯೆ ಉಂಟಾಗುತ್ತಿದೆ. ಈ ಬಗ್ಗೆ ಕೂಡಲೇ ಕ್ರಮಕೈಗೊಂಡು, ಮತ್ತೆ ಅಲ್ಲಿ ಕಸ ಹಾಕದಂತೆ ನೋಡಿಕೊಳ್ಳಬೇಕು.

ಮಂಜುನಾಥ್, ಬಿಇಎಂಎಲ್ ಲೇಔಟ್‌ನ 3ನೇ ಹಂತ

‘ಕಟ್ಟಡ ತೆರವುಗೊಳಿಸಿ’

ಮಲ್ಲೇಶ್ವರದ ಕೊಕೊನಟ್ ಅವಿನ್ಯೂ ರಸ್ತೆಯಲ್ಲಿರುವ ಶಂಕರ ವೆಜಿಟೆಬಲ್ ಆ್ಯಂಡ್ ಫ್ರೂಟ್ಸ್ ಅಂಗಡಿಯ ಎದುರು ಹಳೆಯ ಕಟ್ಟಡವೊಂದು ಬೀಳುವ ಸ್ಥಿತಿ ತಲುಪಿದೆ. ಅಪಾಯವನ್ನು ಎದುರು ನೋಡುತ್ತಲೇ ಸಾಗಬೇಕಾಗಿದೆ. ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದ ಪರಿಣಾಮ ಅಲ್ಲಿದ್ದ ಅಮಾಯಕ ಜೀವಗಳು ಮೃತಪಟ್ಟಿದ್ದವು. ಈ ಘಟನೆಯ ಬಳಿಕವೂ ಅಧಿಕಾರಿಗಳು ಎಚ್ಚೆತ್ತುಕೊಂಡು ಈ ಕಟ್ಟಡದ ತೆರವಿಗೆ ಕ್ರಮಕೈಗೊಂಡಿಲ್ಲ. ಇಲ್ಲಿ ಮಕ್ಕಳು, ಮಹಿಳೆಯರು, ವೃದ್ಧರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಾರೆ. ಶಿಥಿಲಾವಸ್ಥೆಯಲ್ಲಿರುವ ಈ ಕಟ್ಟಡವನ್ನು ಕೂಡಲೇ ತೆರವುಗೊಳಿಸಿ, ಅಪಾಯವನ್ನು ತಪ್ಪಿಸಬೇಕು.

ಶಿವಪ್ರಸಾದ್ ಎಸ್., ವಾಹನ ಸವಾರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I, JAYASHREE M. D/o Andani, residing at No.31, Siddhartha Nagara, 1st Cross, Malavalli Town, Mandya, Karnataka-571430, have changed my Name from JAYASHREE to JAYASHREE M vide affidavit dated 25.05.2026 before Notary D. Sarala Kumari, Bangalore.

I, B NAGAMMA, DOB 01/06/2002, R/o Emmiganur, 583113 have changed name to U NANDINI vide affidavit dt 29-05-2026 before Notary, Gangavathi. B NAGAMMA (Old) U NANDINI (New)

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

M G Road And Around

FULLY FURNISHED beautiful interiors 2 BHK flat on Brunton road opp Prestige office 3 CR 9740919014

JOB OPPORTUNITIES

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

್ಯಾಜ್ಯ: 6 ವಾಹನಗಳ ವಶ

ೀಕರು, ಚಾಲಕರು, ುದ್ಧ ಎಫ್‌ಐಆರ್

ವಸತಿ ಸಮುಚ್ಚಯಗಳ ಘನತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಇಕೋ ಸ್ಪಿಯರ್ ವೆಸ್ಟ್ ಸೆಲ್ಯೂಷನ್ ಕಂಪನಿಗೆ ಕಾರ್ಯಾದೇಶ ನೀಡಲಾಗಿದೆ. ಆದರೆ, ನೌಶಾದ್ ಮತ್ತು ಇತರರ ತಂಡವು ಕಂಪನಿ ಹೆಸರಿನಲ್ಲಿ ನಕಲಿ ಗುರುತಿನ ಚೀಟಿ ಬಳಸಿಕೊಂಡು ವಿವಿಧ ಪ್ರದೇಶಗಳಿಂದ ಅನಧಿಕೃತವಾಗಿ ಬಲ್ಕ್ ತ್ಯಾಜ್ಯವನ್ನು ಸಂಗ್ರಹಿಸಿ ತಂದು ಇಲ್ಲಿ ಸುರಿಯುತ್ತಿದ್ದರು ಎಂದು ತಿಳಿಸಿದರು.

ನಗರ ಪಾಲಿಕೆಯ ಸಹಾಯಕ ಪ್ರಧಾನ ವ್ಯವಸ್ಥಾಪಕರು ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದ್ದು, ವಾಹನಗಳ ಮಾಲೀಕರು, ಚಾಲಕರು, ಸಂಬಂಧಪಟ್ಟ ವ್ಯಕ್ತಿಗಳು ಹಾಗೂ ತ್ಯಾಜ್ಯ ಸುರಿಯಲು ಅವಕಾಶ ನೀಡಿದ ಭೂ ಮಾಲೀಕರ ವಿರುದ್ಧವೂ ಕಾನೂನು ಕ್ರಮ ಜರುಗಿಸಲು ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.

ಕಾಡುಗೋಡಿ ವ್ಯಾಪ್ತಿಯಲ್ಲಿ ದಕ್ಷಿಣ ಪಿನಾಕಿನಿ ನದಿಗೆ ತ್ಯಾಜ್ಯ ಸುರಿದಿರುವುದನ್ನು ಪೂರ್ವ ನಗರ ಪಾಲಿಕೆ ಅಧಿಕಾರಿಗಳು ಪರಿಶೀಲಿಸಿದರು

ಮಾಹಿತಿ ನೀಡಲು ಮನವಿ

ನಗರದ ಸ್ವಚ್ಛತೆ, ಸಾರ್ವಜನಿಕ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆಗೆ ಧಕ್ಕೆಯುಂಟು ಮಾಡುವ ಇಂತಹ ಕಾನೂನುಬಾಹಿರ ಚಟುವಟಿಕೆಗಳ ವಿರುದ್ಧ ನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ತ್ಯಾಜ್ಯವನ್ನು ಅನಧಿಕೃತ ಸ್ಥಳಗಳಲ್ಲಿ ಸುರಿಯುವುದು, ಖಾಲಿ ಜಾಗಗಳನ್ನು ಕಸದ ತೊಟ್ಟಿಗಳಾಗಿ ಬಳಸುವುದು ಹಾಗೂ ಅಕ್ರಮ ಸಾಗಣೆ ನಡೆಸುವವರ ವಿರುದ್ಧ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳಲಾಗುವುದು. ಇಂಥ ಚಟುವಟಿಕೆಗಳು ಕಂಡು ಬಂದರೆ ಸಾರ್ವಜನಿಕರು ಮಾಹಿತಿ ನೀಡಬೇಕು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಮನವಿ ಮಾಡಿದರು.

ಕಾರ್ಯಾಚರಣೆಯಲ್ಲಿ ಘನತ್ಯಾಜ್ಯ ನಿರ್ವಹಣಾ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಮಾರ್ಷಲ್ ಸೂಪರ್ ವೈಸರ್, ವಾರ್ಡ್ ಮಾರ್ಷಲ್ , ಆರೋಗ್ಯ ಪರಿವೀಕ್ಷಕರು ಪಾಲ್ಗೊಂಡಿದ್ದರು.

ಒಳಮೀಸಲು: ಅನುದಾನ ಹಂಚಿಕೆಗೆ ಆಗ್ರಹ

ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗೊಳಿಸಿ ಮೇ 8ರಂದು ಹೊರಡಿಸಿರುವ ಅಧಿಸೂಚನೆಯು ಕಾನೂನುಬಾಹಿರ, ಅವೈಜ್ಞಾನಿಕ ಹಾಗೂ ಗೊಂದಲದ ಗೂಡಾಗಿದ್ದು ಉದ್ದೇಶವೇ ವಿಫಲವಾಗಿದೆ ಎಂದು ಆರೋಪಿಸಿ, ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

3ಕ್ಕಿಂತ ಕಡಿಮೆ ಹುದ್ದೆಗಳನ್ನು ಎಸ್‌.ಸಿ ಸಾಮಾನ್ಯ ಎಂದು ಪರಿಗಣಿಸುವ ಅವೈಜ್ಞಾನಿಕ ಷರತ್ತು ಹಿಂದಕ್ಕೆ ಪಡೆಯಬೇಕು. ಪರಿಶಿಷ್ಟ ಜಾತಿಗೆ ಮೀಸಲಾತಿ ಇರುವ ಕಡೆ ಒಳಮೀಸಲಾತಿ ಅಳವಡಿಸಿ ಆದೇಶಿಸಬೇಕು. ನಾಲ್ಕು ಆಯೋಗಗಳ ವರದಿಯ ಅಂಕಿಅಂಶಗಳನ್ನು ಪರಿಗಣಿಸಿ, ಜನಸಂಖ್ಯೆಗೆ ಅನುಗುಣವಾಗಿ ಮಾದಿಗ ಸಮುದಾಯಕ್ಕೆ ಶೇ6 ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರದ ನೌಕರರಿಗೆ ಮುಂಬಡ್ತಿಯಲ್ಲಿ ಒಳಮೀಸಲಾತಿ ಅಳವಡಿಸಿ ಆದೇಶಿಸಬೇಕು. ಎಸ್‌ಸಿಎಸ್‌ಪಿ/ಟಿಎಸ್‌ಪಿಯ ₹49 ಸಾವಿರ ಕೋಟಿ ಅನುದಾನವನ್ನು ಒಳಮೀಸಲಾತಿ ಅನ್ವಯ ಹಂಚಿಕೆ ಮಾಡಬೇಕು ಎಂದು ಕೋರಿದರು.

ಮಾದಿಗ ಸಂಘಟನೆಗಳ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮಾದಿಗ ಸಮುದಾಯಕ್ಕೆ ಪ್ರತ್ಯೇಕವಾಗಿ ಸಮಾಜ ಕಲ್ಯಾಣ ಇಲಾಖೆ ಇರಬೇಕು. ಅಲೆಮಾರಿ ಸಮುದಾಯಗಳಿಗೆ ಶೇ 1 ಪ್ರತ್ಯೇಕ ಒಳಮೀಸಲಾತಿ ನೀಡಬೇಕು. ಅಲ್ಲದೇ ಪ್ರವರ್ಗ ‘ಎ’ ಎಂಬುದಾಗಿ ಪರಿಗಣಿಸಬೇಕು. ಮುಂಬರುವ ಸ್ಥಳೀಯ ಚುನಾವಣೆಯಲ್ಲಿ ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಒದಗಿಸಬೇಕು. ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವ ಗುತ್ತಿಗೆ ಕಾಮಗಾರಿಗಳು, ಗುತ್ತಿಗೆ ಕಾರ್ಮಿಕರ ನೇಮಕಾತಿ, ತಾತ್ಕಾಲಿಕ ನೇಮಕಾತಿ, ಅತಿಥಿ ಉಪನ್ಯಾಸಕರ ನೇಮಕಾತಿ ಹಾಗೂ ಶಿಕ್ಷಕರ ನೇಮಕಾತಿಯಲ್ಲೂ ಒಳಮೀಸಲಾತಿ ಅಳವಡಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಎನ್‌.ಮೂರ್ತಿ, ಕರ್ನಾಟಕ ಮಾದಿಗ ದಂಡೋರದ ರಾಜ್ಯ ಅಧ್ಯಕ್ಷ ಶಂಕರಪ್ಪ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯ ಗೌರವಾಧ್ಯಕ್ಷ ಕೇಶವಮೂರ್ತಿ, ವಿಶ್ವ ಆದಿಜಾಂಬವ ಮಹಾಸಭಾದ ರಾಜ್ಯ ಅಧ್ಯಕ್ಷ ಭೀಮರಾಜ್, ದೇವರಾಜ್ ಕೈವಾರ, ಕನಕೇನಹಳ್ಳಿ ಕೃಷ್ಣಪ್ಪ, ಲಿಂಗರಾಜ್ ಸೇರಿ ಹಲವರು ಹಾಜರಿದ್ದರು.

ಪ್ರಜಾವಾಣಿ
CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಮಾದಕ ವಸ್ತು ವಿರುದ್ಧ ಪೊಲೀಸರ ಸಮರ

ಐದು ತಿಂಗಳಲ್ಲಿ ₹200 ಕೋಟಿಗೂ ಅಧಿಕ ಮೌಲ್ಯದ ಡಗ್ಸ್ ವಶ

• ದಂಧೆಯಲ್ಲಿ ಭಾಗಿಯಾಗಿದ್ದ ಸ್ಥಳೀಯ, ವಿದೇಶಿ ಪ್ರಜೆಗಳ ಬಂಧನ

• ಕೆ.ಎಸ್.ಸುನಿಲ್

ಆರೋಪಿಗಳಿಂದ ವಶಪಡಿಸಿಕೊಂಡಿರುವ ಮಾದಕ ವಸ್ತು

ಬೆಂಗಳೂರು: ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿರುವ ಪೊಲೀಸರು ಪ್ರಸಕ್ತ ಸಾಲಿನ ಐದು ತಿಂಗಳಲ್ಲಿ ₹200 ಕೋಟಿಗೂ ಅಧಿಕ ಮೌಲ್ಯದ ನೈಸರ್ಗಿಕ ಮತ್ತು ಸಿಂಥೆಟಿಕ್ ಮಾದರಿಯ ಮಾದಕ ವಸ್ತು ಜಪ್ತಿ ಮಾಡಿದ್ದಾರೆ.

ಡ್ರಗ್ಸ್ ದಂಧೆ ವಿರುದ್ಧ ಸಿಸಿಬಿಯ ಮಾದಕ ವಸ್ತು ನಿಗ್ರಹ ದಳ ಹಾಗೂ ಸ್ಥಳೀಯ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುವ ಮೂಲಕ ಪೆಡ್ಲರ್‌ಗಳನ್ನು ಬಂಧಿಸಿ, ಜೈಲಿಗೆ ಕಳುಹಿಸುತ್ತಿದ್ದಾರೆ. ಹೀಗಿದ್ದರೂ ನಗರಕ್ಕೆ ಡ್ರಗ್ಸ್ ಪೂರೈಕೆ ದಿನೇ ದಿನೇ ಹೆಚ್ಚುತ್ತಿರುವುದು ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

2024ರಲ್ಲಿ 530, 2025ರಲ್ಲಿ 1,402, 2026ರಲ್ಲಿ (ಮೇ ತಿಂಗಳ ವರೆಗೆ) 1,972 ಪ್ರಕರಣ ದಾಖಲಿಸಲಾಗಿದೆ. ಐದು ತಿಂಗಳಲ್ಲಿ 2,601 ಭಾರತೀಯರು ಹಾಗೂ 32 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ಅಂದಾಜು 1,122 ಕೆ.ಜಿ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಕೇವಲ ಹದಿನೈದು ದಿನಗಳಲ್ಲಿ ₹65 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ, ದಂಧೆಯಲ್ಲಿ ಭಾಗಿಯಾಗಿದ್ದ ಸ್ಥಳೀಯ ಹಾಗೂ ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ.

ಎನ್‌ಸಿಬಿ, ಅಬಕಾರಿ ಇಲಾಖೆ, ವಲಸೆ ಅಧಿಕಾರಿಗಳು ಹಾಗೂ ನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ, ಆರೋಪಿಗಳು ನೀಡಿದ ಮಾಹಿತಿ ಆಧರಿಸಿ ಹೊರರಾಜ್ಯಗಳಲ್ಲೂ ಕಾರ್ಯಾಚರಣೆ ನಡೆಸಿದ್ದಾರೆ.

ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಿಂಥೆಟಿಕ್ ಮಾದರಿಯ ಡ್ರಗ್ಸ್ ವಿದೇಶಗಳಿಂದಲೇ ಪೂರೈಕೆ ಆಗುತ್ತಿದೆ. ಕಳ್ಳ ಸಾಗಣೆಯ ಮೂಲಕ ನಗರಕ್ಕೆ ಡ್ರಗ್ಸ್ ತಂದು, ಇಲ್ಲಿಂದ ದೇಶದ ಬೇರೆ ಬೇರೆ ನಗರಗಳಿಗೆ ಪೂರೈಸಲಾಗುತ್ತಿದೆ. ಶಿಕ್ಷಣ ಹಾಗೂ ಪ್ರವಾಸಿ ವೀಸಾದ ಮೇಲೆ ನೈಜೀರಿಯಾ, ಥಾಯ್ಲೆಂಡ್‌ನ ಪ್ರಜೆಗಳು ದೆಹಲಿ, ಬೆಂಗಳೂರಿಗೆ ಬಂದು ವೀಸಾ ಅವಧಿ ಮುಕ್ತಾಯವಾದ ಮೇಲೆ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಮಾದಕವಸ್ತು ಪೂರೈಕೆ ಜಾಲವನ್ನು ಜಾಲಾಡುತ್ತಿರುವ ಪೊಲೀಸರು, ಪೆಡ್ಲರ್‌ಗಳ ಬಳಿಕ ಈಗ ಪೂರೈಕೆದಾರರ ಪತ್ತೆಗೆ ಕಸರತ್ತು ನಡೆಸಿದ್ದಾರೆ. ನಗರಕ್ಕೆ ದೆಹಲಿ, ಆಂಧ್ರಪ್ರದೇಶ, ಒಡಿಶಾ ಮೂಲಕ ಗಾಂಜಾ ಸರಬರಾಜು ಆಗುತ್ತಿರುವುದು ತನಿಖೆ ವೇಳೆ ಗೊತ್ತಾಗಿದೆ.

'ಐಟಿ, ಬಿಟಿ ಉದ್ಯೋಗಿಗಳು, ಕಾಲೇಜು ವಿದ್ಯಾರ್ಥಿಗಳು, ಶ್ರೀಮಂತ ಕುಟುಂಬದ ಯುವಕ-ಯುವತಿಯರನ್ನೇ ಗುರಿಯಾಗಿಸಿಕೊಂಡು ಡ್ರಗ್ಸ್ ಜಾಲ ಕೆಲಸ ಮಾಡುತ್ತಿದೆ. ಕಾಲೇಜು, ಪೇಯಿಂಗ್ ಗೆಸ್ಟ್‌ಗಳು ಮತ್ತು ಹಾಸ್ಟೆಲ್‌ಗಳ ಬಳಿ ಮಾದಕ ವಸ್ತುಗಳ ಮಾರಾಟ ದಂಧೆ ನಡೆಯುತ್ತಿದೆ. ಪೆಡ್ಲರ್‌ಗಳು ಮಧ್ಯವರ್ತಿಗಳಿಗೆ ಡ್ರಗ್ಸ್ ಪೂರೈಸುತ್ತಾರೆ. ಅವರು ಟೆಕಿಗಳು, ವಿದ್ಯಾರ್ಥಿಗಳಿಗೆ ಮಾರಾಟ ಮಾಡಿ, ಹೆಚ್ಚಿನ ಹಣ ಗಳಿಸುತ್ತಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಾದಕ ದ್ರವ್ಯ ಜಾಲದಲ್ಲಿ ಭಾಗಿಯಾಗಿ ಜೈಲಿನಿಂದ ಹೊರ ಬಂದವರ ಮೇಲೆ ಪೊಲೀಸರು ಕಣ್ಣಿಟ್ಟಿರುತ್ತಾರೆ. ಅವರು ಮತ್ತೆ ಕೃತ್ಯ ಮುಂದುವರಿಸಿದರೆ ಎನ್‌ಡಿಪಿಎಸ್ ಕಾಯ್ದೆಯಡಿ ಜೈಲಿಗೆ ಕಳುಹಿಸಲಾಗುತ್ತದೆ.

'ಗಾಂಜಾ, ಕೊಕೇನ್, ಎಂಡಿಎಂಎ ಡ್ರಗ್ಸ್ ಮಟ್ಟ ಹಾಕಲು ಸಾರ್ವಜನಿಕರ ಸಹಕಾರ ಅಗತ್ಯ. ವಿದ್ಯಾರ್ಥಿಗಳ ನಡವಳಿಕೆ ಮೇಲೆ ಪೋಷಕರು ಮತ್ತು ಕಾಲೇಜು ಸಿಬ್ಬಂದಿ ನಿಗಾ ಇಡಬೇಕಿದೆ. ಪೋಷಕರು ತಮ್ಮ ಮಕ್ಕಳ ವರ್ತನೆಯಲ್ಲಿನ ಬದಲಾವಣೆಯನ್ನು ಗಮನಿಸಿ, ಆರಂಭಿಕ ಹಂತದಲ್ಲೇ ಮಾದಕವಸ್ತು ಸೇವನೆ ಮತ್ತು ಮಾರಾಟ ಕುರಿತು ಆಪ್ತ ಸಮಾಲೋಚನೆ ನಡೆಸಬೇಕು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಮಾತ್ರೆ, ಎಕ್ಸ್‌ಟೆಸಿ ಟ್ಯಾಬ್ಲೆಟ್, ಸಿಂಥೆಟಿಕ್ ಡ್ರಗ್ಸ್, ಅಫೀಮು, ಬ್ರೌನ್ ಶುಗರ್ ಮತ್ತಿತರ ನಶೆ ಬರಿಸುವ ಮಾದಕ ವಸ್ತುಗಳನ್ನು ವಿದೇಶಿ ಪ್ರಜೆಗಳು ಮತ್ತು ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳು ಸಂಗ್ರಹಿಸಿ ಮಾರಾಟ ಮಾಡುವ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಮಾದಕ ವಸ್ತು ಮಾರಾಟ ಹಾಗೂ ಸರಬರಾಜು ಕಾಯ್ದೆ (ಎನ್‌ಡಿಪಿಎಸ್) ಕಲಂ 27ರ ಅನ್ವಯ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ' ಎಂದು ಹೇಳಿದರು.

ಸೋಪು, ಚಾಕೋಲೇಟ್‌ನಲ್ಲಿ ಡ್ರಗ್ಸ್ ಸಾಗಣಿಕೆ

ಅಂಚೆ ಪಾರ್ಸೆಲ್, ದೆಹಲಿ ಹಾಗೂ ಮುಂಬೈ ಮೂಲಗಳಿಂದ ಚಾಕೋಲೇಟ್, ಸೋಪು ಹಾಗೂ ಇನ್ನಿತರ ಪಾರ್ಸೆಲ್‌ಗಳಲ್ಲಿ ಡ್ರಗ್ಸ್ ತರಿಸಿಕೊಂಡು ಟೆಕಿಗಳು, ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ, ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಪೊಲೀಸರ ಕಣ್ಣು ತಪ್ಪಿಸಲು ಪೆಡ್ಲರ್‌ಗಳು ನಾನಾ ಮಾರ್ಗ ಕಂಡುಕೊಂಡಿದ್ದಾರೆ.

ಕೆಲ ದಿನಗಳ ಹಿಂದೆ ಹೆಬ್ಬಾಳ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಚೂಡಿದಾರ ಉಡುಪು ಸಾಗಾಣಿಕೆ ನೆಪದಲ್ಲಿ ಡ್ರಗ್ಸ್ ತಂದು ಮಾರುತ್ತಿದ್ದ ಇಬ್ಬರು ಮಹಿಳೆಯರು ಸೇರಿ 8 ಮಂದಿಯನ್ನು ಬಂಧಿಸಿ, ₹35 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು.

ಉಪವಿಭಾಗ ಮಟ್ಟವೊಂದರಲ್ಲಿ ವಶಪಡಿಸಿಕೊಳ್ಳಲಾದ ದೊಡ್ಡ ಪ್ರಮಾಣದ ಡ್ರಗ್ಸ್ ಇದಾಗಿದೆ.

ಮತ್ತೊಂದು ಪ್ರಕರಣದಲ್ಲಿ ಡಗ್ಸ್ ದಂಧೆಗೆ ಅನುಕೂಲವಾಗಲಿದೆ ಎಂಬ ಉದ್ದೇಶದಿಂದ ಬೆಂಗಳೂರಿನ ಮಹಿಳೆಯನ್ನು ಪ್ರೀತಿಸಿ ವಿವಾಹವಾಗಿ, ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಪೆಡ್ಲರ್‌ನನ್ನು ಬಂಧಿಸಿ, ₹27 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ ಮಾಡಲಾಗಿತ್ತು.

'ವ್ಯಾಪಾರ ವೀಸಾದಡಿ ಭಾರತಕ್ಕೆ ಬಂದಿದ್ದ ಆರೋಪಿ, ಸ್ಥಳೀಯ ಮಹಿಳೆಯನ್ನು ವಿವಾಹವಾಗಿ, ಅವಳ ವಿಳಾಸದೊಂದಿಗೆ ಕೆಲ ಬ್ಯಾಂಕ್ ಖಾತೆಗಳನ್ನು ಹೊಂದಿದ್ದ. 12 ವರ್ಷಗಳಿಂದ ಡ್ರಗ್ಸ್ ಮಾರಾಟ ದಂಧೆ ನಡೆಸುತ್ತಿದ್ದರೂ ಯಾರಿಗೂ ಸಂಶಯ ಬಾರದಂತೆ ನೋಡಿಕೊಳ್ಳುತ್ತಿದ್ದ. ವಿದೇಶದಿಂದ ಕಡಿಮೆ ಬೆಲೆಗೆ ಡ್ರಗ್ಸ್ ತರಿಸಿಕೊಂಡು ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಮಾರಾಟ ಜಾಲದ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಪೂರೈಕೆದಾರರು ಮತ್ತು ಪೆಡ್ಲರ್‌ಗಳನ್ನು ಬಂಧಿಸಿ, ಡ್ರಗ್ಸ್ ಜಪ್ತಿ ಮಾಡಲಾಗುತ್ತಿದೆ

ಸೀಮಾಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ವರ್ಷ	ಒಟ್ಟು ಪ್ರಕರಣ	ವಶಕ್ಕೆ ಪಡೆದ ಡಗ್ಸ್ (ಕೆ.ಜಿ)	ಮೌಲ್ಯ (ಕೋಟಿ ₹ಗಳಲ್ಲಿ)
2024	530	1,970	98.86
2025	1,402	1,499	173
2026*	1,972	1,122	202

(*ಮೇ 30ಗಳವರೆಗೆ)

ನಾಲ್ವರು ಸುಲಿಗೆಕೋರರ ಸೆರೆ; ಬೈಕ್, ಆಟೊ ವಶ

ಪ್ರಜಾವಾಣಿ ವಾರ್ತೆ

ಹರಿಕೃಷ್ಣ

ಯೋಗೇಶ್

ಶಾಹಿಕ್ ತೌಫಿದ್

ಅಪರಾಧ ಸುದ್ದಿ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಸುಲಿಗೆಕೋರರನ್ನು ಬಂಧಿಸಿರುವ ಹೆಬ್ಬಗೋಡಿ ಠಾಣೆ ಪೊಲೀಸರು, ಅವರಿಂದ ಮೊಬೈಲ್ ಫೋನ್, ದ್ವಿಚಕ್ರ ವಾಹನ, ಆಟೊ ವಶಪಡಿಸಿಕೊಂಡಿದ್ದಾರೆ.

ಜಿಗಣಿ ಹೋಬಳಿಯ ಜನತಾ ಕಾಲೊನಿ ನಿವಾಸಿ ಹರಿಕೃಷ್ಣ (22), ಕಂಚನಾಯಕನಹಳ್ಳಿ ದಿಣ್ಣೆ ನಿವಾಸಿ ಯೋಗೇಶ್ (19), ಶಿಕಾರಿಪಾಳ್ಯ ನಿವಾಸಿ ಶಾಹಿಕ್ ತೌಫಿದ್ (19) ಬಂಧಿತರು.

ಹುಲಿಮಂಗಲ ಮುಖ್ಯರಸ್ತೆಯ ಬಾರ್‌ವೊಂದರ ಬಳಿ ವ್ಯಕ್ತಿಯೊಬ್ಬರು ನಡೆದುಕೊಂಡು ಹೋಗುತ್ತಿದ್ದ ವೇಳೆ ಅಡ್ಡಗಟ್ಟಿ ಬೆದರಿಸಿ, ಮೊಬೈಲ್ ಕಿತ್ತುಕೊಂಡು ಇಬ್ಬರು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು.

ಮತ್ತೊಂದು ಪ್ರಕರಣದಲ್ಲಿ ಯಾರಂಡಹಳ್ಳಿಯಲ್ಲಿ ಮೂವರು ಅಪರಿಚಿತರು ವ್ಯಕ್ತಿಯೊಬ್ಬರನ್ನು ಅಡ್ಡಗಟ್ಟಿ ದ್ವಿಚಕ್ರ ವಾಹನ ಕಿತ್ತುಕೊಂಡು ಪರಾರಿಯಾಗಿದ್ದರು.

'ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ಕೈಗೊಂಡರು. ಬಾತ್ಮೀದಾರರ ಮಾಹಿತಿ ಆಧರಿಸಿ ಶಿಕಾರಿಪಾಳ್ಯದ ಸಮೀಪ ಇಬ್ಬರು ವ್ಯಕ್ತಿಗಳನ್ನು ಮೊಬೈಲ್ ಫೋನ್ ಮತ್ತು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು. ಆರೋಪಿಗಳು ಮೊಬೈಲ್ ಸುಲಿಗೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡರು' ಎಂದು ಪೊಲೀಸರು ತಿಳಿಸಿದರು.

ಮತ್ತೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಚರಕನಹಳ್ಳಿ ಲೇಔಟ್‌ವೊಂದರ ಸಮೀಪ ಇಬ್ಬರು ವ್ಯಕ್ತಿಗಳನ್ನು ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ ಆಟೊ ಸಮೇತ ವಶಕ್ಕೆ ಪಡೆಯಲಾಯಿತು. ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಗಾಗಿ ಶೋಧ ನಡೆಸುತ್ತಿದ್ದಾರೆ.

ಸ್ನೇಹಿತನ ಕೊಲೆ ಮಾಡಿದ್ದ ಆರೋಪಿ ಬಂಧನ

ಬೆಂಗಳೂರು: ಮದ್ಯದ ಅಮಲಿನಲ್ಲಿ ಗೆಳೆಯನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಗಂಗಮ್ಮನ ಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರವೀಂದರ್

ಉತ್ತರಪ್ರದೇಶದ ಗೋರಖ್‌ಪುರದ ರವೀಂದರ್ ಬಂಧಿತ. ಏಪ್ರಿಲ್ 24ರಂದು ನಿಸರ್ಗ ಲೇಔಟ್‌ನ ಬಿಡಿಎ ಪಾರ್ಕ್‌ನಲ್ಲಿ ಮೃತದೇಹವನ್ನು ಚೀಲದಲ್ಲಿ ತುಂಬಿ ಬಿಸಾಡಲಾಗಿತ್ತು. ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ಹಲವು ಆಯಾಮಗಳಲ್ಲಿ ತನಿಖೆ ನಡೆಸಿದಾಗ ಕೊಲೆಯಾದ ವ್ಯಕ್ತಿ ಉತ್ತರಪ್ರದೇಶದ ವಿದ್ಯಾ ಪ್ರಸಾದ್ ಎಂಬುದು ಗೊತ್ತಾಗಿತ್ತು.

'ಆರೋಪಿ ರವೀಂದರ್‌ನನ್ನು ಗೋರಖ್ ಪುರದಲ್ಲಿ ಬಂಧಿಸಿ ಕರೆತರಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಮತ್ತಿಬ್ಬರು ತಲೆ ಮರೆಸಿಕೊಂಡಿದ್ದು, ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪೇಂಟಿಂಗ್ ಕೆಲಸ ಮಾಡುತ್ತಿದ್ದ ರವೀಂದರ್ ಹಾಗೂ ವಿದ್ಯಾಪ್ರಸಾದ್, ನಿಸರ್ಗ ಲೇಔಟ್‌ನಲ್ಲಿ ಬಾಡಿಗೆಗೆ ಮನೆ ಪಡೆದು ವಾಸವಾಗಿದ್ದರು. ಏಪ್ರಿಲ್ 20ರಂದು ಮದ್ಯದ ಅಮಲಿನಲ್ಲಿ ಇಬ್ಬರೂ ಜಗಳವಾಡಿದ್ದಾರೆ. ಆಗ ರವೀಂದರ್, ವಿದ್ಯಾಪ್ರಸಾದ್‌ನ ಎದೆ, ಹೊಟ್ಟೆಗೆ ಜೋರಾಗಿ ಹೊಡೆದ ಕಾರಣ ಕುಸಿದು ಮೃತಪಟ್ಟಿದ್ದರು.

ಮರುದಿನ ಬೆಳಿಗ್ಗೆ ಕೆಲಸಕ್ಕೆ ಹೋಗಿ ವಾಪಸ್ ಮನೆಗೆ ಬಂದು ವಿದ್ಯಾಪ್ರಸಾದ್‌ನನ್ನು ಮಾತನಾಡಿಸಲು ಪ್ರಯತ್ನಿಸಿದಾಗ ಮೃತಪಟ್ಟಿರುವುದು ಗೊತ್ತಾಗಿದೆ. ಇಬ್ಬರು ಸ್ನೇಹಿತರ ನೆರವಿನಿಂದ ಮೃತಹದೇಹವನ್ನು ಚೀಲಕ್ಕೆ ತುಂಬಿಸಿ ಪಾರ್ಕ್‌ನಲ್ಲಿ ಎಸೆದು ಪರಾರಿಯಾಗಿದ್ದರು.

ತನಿಖೆ ವೇಳೆ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಮೂವರು ಮೂಟೆಯೊಂದನ್ನು ಸಾಗಿಸುತ್ತಿರುವುದು ಕಂಡು ಬಂದಿತು. ಬೈಕ್ ನೋಂದಣಿ ಸಂಖ್ಯೆ ಆಧರಿಸಿ ಶೋಧ ನಡೆಸಿದಾಗ ಆರೋಪಿಗಳ ಸುಳಿವು ದೊರೆಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಅವಹೇಳನಕಾರಿ ಪೋಸ್ಟ್: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕರುನಾಡ ಕುರುಬಗೌಡ್ರು' ಹಾಗೂ 'ಬಂಡಾಯ ಧ್ವನಿ' ಎಂಬ ನಕಲಿ ಫೇಸ್‌ಬುಕ್ ಖಾತೆಗಳಲ್ಲಿ ಶಾಸಕ ಸತೀಶ ಜಾರಕಿಹೊಳಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿರುವುದಕ್ಕೆ ಸಂಬಂಧಿಸಿ, ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಅವರು ಬೆಳಗಾವಿ ಸಿಇಎನ್ ಅಪರಾಧ ಠಾಣೆಯಲ್ಲಿ ಶನಿವಾರ ರಾತ್ರಿ ದೂರು ದಾಖಲಿಸಿದ್ದಾರೆ.

'ಇವೆರಡೂ ಖಾತೆಗಳಲ್ಲಿ 'ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಿದ್ದರಾಮಯ್ಯ ವಿರುದ್ಧ 37 ಶಾಸಕರಿಂದ ಸತೀಶ ಜಾರಕಿಹೊಳಿ ಸಹಿ ಸಂಗ್ರಹಿಸಿದ್ದಾರೆ' ಎಂದು ಆರೋಪಿಸಲಾಗಿದೆ. ಸುಳ್ಳು ಸುದ್ದಿ ಹರಡುವವರು ಹಾಗೂ ನಕಲಿ ಫೇಸ್‌ಬುಕ್ ಖಾತೆಗಳಲ್ಲಿ ಶಾಸಕರ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಅಪಘಾತ: ಇಬ್ಬರು ಬಾಲಕರ ಸಾವು

ಬೆಂಗಳೂರು: ಮೈಕೋ ಲೇಔಟ್ ಹಾಗೂ ಜೆ.ಬಿ.ನಗರದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಬಾಲಕರು ಮೃತಪಟ್ಟಿದ್ದಾರೆ.

ಜೆ.ಬಿ.ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಗ್ಯಾಂಗ್‌ಮನ್ ಕ್ವಾಟರ್ಸ್ ನಿವಾಸಿ ರಿಯಾನ್ (15) ಮೃತಪಟ್ಟಿದ್ದಾನೆ.

ಶನಿವಾರ ರಾತ್ರಿ 8.30ರಲ್ಲಿ ರಿಯಾನ್ ಹಳೇ ಮದ್ರಾಸ್ ರಸ್ತೆ ಕಡೆಯಿಂದ ಎಸ್.ಎಂ.ವಿ.ಟಿ. ರೈಲ್ವೆ ಸ್ಟೇಷನ್ ಕಡೆಗೆ ಬೈಕ್‌ನಲ್ಲಿ ಹೋಗುವಾಗ ಎದುರು ದಿಕ್ಕಿನಿಂದ ಬಂದ ಸ್ಕೂಟರ್ ಸವಾರ ಡಿಕ್ಕಿ ಹೊಡೆದ ಪರಿಣಾಮ ರಸ್ತೆ ಮೇಲೆ ಬಿದ್ದ ಬಾಲಕ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಸ್ಕೂಟರ್ ಸವಾರ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ವಿದ್ಯಾರ್ಥಿ ಸಾವು: ಬನ್ನೇರುಘಟ್ಟ ರಸ್ತೆ ಸಮೀಪದ ವಿಜಯ ಲೇಔಟ್‌ನ ಆರ್‌ಟಿಒ ರಸ್ತೆಯಲ್ಲಿ ಶನಿವಾರ ರಾತ್ರಿ ದ್ವಿಚಕ್ರ ವಾಹನ ಮತ್ತು ಟ್ರ್ಯಾಕ್ಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸೂರಜ್ ಕುಮಾರ್ (16) ಎಂಬ ಬಾಲಕ ಮೃತಪಟ್ಟಿದ್ದಾನೆ.

ಬನ್ನೇರುಘಟ್ಟ ರಸ್ತೆಯ ಸಾರ್ವಭೌಮ ನಗರ ನಿವಾಸಿ ಜಗದೀಶ್ ಕುಮಾರ್ ಎಂಬುವರ ಮಗನಾದ ಸೂರಜ್ ಕುಮಾರ್, 9ನೇ ತರಗತಿ ಓದುತ್ತಿದ್ದ. ಈತ ತನ್ನ ಸಹಪಾಠಿ ಪುಸ್ಕರ್‌ರಾಮ್ ಲೋಹರ್‌ನನ್ನು ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಹೋಗುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ ಎಂದು ಮೈಕೊ ಲೇಔಟ್ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸೂರಜ್ ಕುಮಾರ್, ಪರಿಚಿತರ ದ್ವಿಚಕ್ರ ವಾಹನ ತೆಗೆದುಕೊಂಡು ಹೋಗಿ ವಿಜಯ ಲೇಔಟ್ ಸರ್ಕಲ್‌ನ ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ಮನೆಗೆ ಹಿಂದಿರುಗುತ್ತಿದ್ದ. ಈ ವೇಳೆ ಟ್ರ್ಯಾಕ್ಟರ್ ಚಾಲಕ ಅತಿ ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಬಂದು ಹಿಂದಿನಿಂದ ಸೂರಜ್‌ಕುಮಾರ್‌ನ ದ್ವಿಚಕ್ರ ವಾಹನಕ್ಕೆ ಗುದ್ದಿಸಿದ್ದಾನೆ. ಆಗ ನಿಯಂತ್ರಣ ತಪ್ಪಿ ರಸ್ತೆಯ ಬಲ ಭಾಗಕ್ಕೆ ಬಿದ್ದ ಸೂರಜ್ ಕುಮಾರ್ ಮೇಲೆ ಟ್ರ್ಯಾಕ್ಟರ್ ಚಕ್ರ ಹರಿದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

'ಸೂರಜ್‌ಕುಮಾರ್ ಜತೆ ಹೋಗುತ್ತಿದ್ದ ಹಿಂಬದಿ ಸವಾರ ಪುಸ್ಕರ್ ರಾಮ್ ಲೋಹರ್ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಟ್ರ್ಯಾಕ್ಟರ್ ಚಾಲಕನ ಅತಿಯಾದ ವೇಗ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ. ಆತನನ್ನು ಬಂಧಿಸಿ ವಾಹನ ಜಪ್ತಿ ಮಾಡಲಾಗಿದೆ. ಸೂರಜ್‌ಕುಮಾರ್‌ಗೆ ದ್ವಿಚಕ್ರ ವಾಹನ ಕೊಟ್ಟಿರುವುದು ಮಾಲೀಕರ ತಪ್ಪು. ಹೀಗಾಗಿ, ದ್ವಿಚಕ್ರ ವಾಹನ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸುತ್ತೇವೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹಾಸನ: ನೇಣು ಹಾಕಿಕೊಂಡು ಉಪತಹಶೀಲ್ದಾರ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ತಿಮ್ಮಯ್ಯ

ಹಾಸನ: ಮೈಸೂರು ಜಿಲ್ಲೆಯ ಸಾಲಿಗ್ರಾಮದಲ್ಲಿ ಉಪ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ತಿಮ್ಮಯ್ಯ (52) ಅವರು ನಗರದ ಬಿ.ಎಂ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಶನಿವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೊಡಗು ಜಿಲ್ಲೆಯವರಾದ ತಿಮ್ಮಯ್ಯ ಅವರು ನಗರದ ಚನ್ನಪಟ್ಟಣ ಬಡಾವಣೆಯ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದರು. ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರು, ಪ್ರಸ್ತುತ ಸಾಲಿಗ್ರಾಮದಲ್ಲಿ ಉಪತಹಶೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದರು.

ಪೊಲೀಸರ ಮಾಹಿತಿ ಪ್ರಕಾರ, ತಿಮ್ಮಯ್ಯ ಅವರು ಶನಿವಾರ ಬೆಳಿಗ್ಗೆ 11.30ರ ಸುಮಾರಿಗೆ ಲಾಡ್ಜ್‌ನಲ್ಲಿ ಕೊಠಡಿ ಬಾಡಿಗೆಗೆ ಪಡೆದಿದ್ದರು. ಸಂಜೆಯಾದರೂ ಕೊಠಡಿ ಬಾಗಿಲು ತೆರೆಯದ ಕಾರಣದಿಂದ ಅನುಮಾನ ಗೊಂಡ ಲಾಡ್ಜ್ ಸಿಬ್ಬಂದಿ ರಾತ್ರಿ 8.30ರ ವೇಳೆಗೆ ಬೀಗ ಒಡೆದು ಒಳಗೆ ಪ್ರವೇಶಿಸಿದಾಗ ಅವರು ಆತ್ಮಹತ್ಯೆ ಮಾಡಿಕೊಂಡಿದ್ದು ಗೊತ್ತಾಗಿದೆ.

ಆತ್ಮಹತ್ಯೆಗೂ ಮುನ್ನ ತಿಮ್ಮಯ್ಯ ಅವರು ನಾಲ್ಕು ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದಾರೆ. ಡೆತ್ ನೋಟ್‌ನಲ್ಲಿರುವ ಮಾಹಿತಿಯ ಆಧಾರದ ಮೇಲೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿಕ್ರ...

ಜೈಲಿನಲ್ಲಿ ಮಾನಸಿಕ ಆರೋಗ್ಯ ...

ಪ್ರಜಾವಾಣಿ ವಾರ್ತೆ

ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ... ವಿಕ್ರಮ್ ನಾಥ್, ಹೈಕೋರ್ಟ್ ಮುಖ್ಯ ನ್ಯಾ... ಆಲೋಕ್ ಕುಮಾರ್ ಭೇಟಿ ನೀಡಿದರು

ಬೆಂಗಳೂರು: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹಾಗೂ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಕ್ಷರೂ ಆಗಿರುವ ವಿಕ್ರಮ್ ನಾಥ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳನ್ನು ಭಾನುವಾರ ಉದ್ಘಾಟಿಸಿದರು.

ಕಾರಾಗೃಹ ಇಲಾಖೆ ಮತ್ತು ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಮ್ಮಿಕೊಂಡಿದ್ದ ಕೈದಿಗಳ ಪುನರ್ವಸತಿ, ಕೌಶಲ ಅಭಿವೃದ್ಧಿ ಮತ್ತು ಮಾನಸಿಕ ಆರೋಗ್ಯ ಸೇವೆ ಸುಧಾರಣೆ ಸೇರಿ ಹಲವು ಯೋಜನೆಗಳಿಗೆ ವಿಕ್ರಮ್ ನಾಥ್ ಚಾಲನೆ ನೀಡಿದರು. ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

ವಿಕ್ರಮ್ ನಾಥ್ ಅವರು ಮೊದಲು ಕಾರಾಗೃಹದ ಕಾನೂನು ಸೇವಾ ಕೇಂದ್ರಕ್ಕೆ ಭೇಟಿ ನೀಡಿ, ಕೈದಿಗಳಿಗೆ ನೀಡಲಾಗುತ್ತಿರುವ ಕಾನೂನು ನೆರವು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಪರಿಶೀಲಿಸಿದರು.

ನಂತರ 'ಸೆಲ್ ಟು ಸ್ಕಿಲ್' ಕಾರ್ಯಕ್ರಮದಡಿ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ಸ್ಥಾಪಿಸಿರುವ ಕಂಪ್ಯೂಟರ್ ಪ್ರಯೋಗಾಲಯ ಉದ್ಘಾಟಿಸಿದರು. ಈ ಯೋಜನೆಯ ಉದ್ದೇಶ ಕೈದಿಗಳಿಗೆ ಡಿಜಿಟಲ್ ಮತ್ತು ವೃತ್ತಿಪರ ಕೌಶಲಗಳನ್ನು ಕಲಿಸಿ, ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಜೀವನ ಕಟ್ಟಿಕೊಳ್ಳಲು ಸಹಾಯ ಮಾಡುವುದಾಗಿದೆ.

ಬಳಿಕ ಕಾರಾಗೃಹ ಆಸ್ಪತ್ರೆಯ 'ವ್ಯಸನಮುಕ್ತಿ ಕೇಂದ್ರ'ಕ್ಕೂ ಭೇಟಿ ನೀಡಿ, ಅಲ್ಲಿನ ಸೌಲಭ್ಯಗಳ ಕುರಿತು ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ ಅವರು ಮಹಿಳಾ ಕೈದಿಗಳ ಬ್ಯಾರಕ್‌ಗಳಿಗೆ ಭೇಟಿ ನೀಡಿ, ದೇಶದಲ್ಲೇ ಮೊದಲ ಬಾರಿಗೆ ಕಾರಾಗೃಹದಲ್ಲಿ ನಿಮ್ಹಾನ್ಸ್‌ನ 'ಟೆಲಿ-ಮನಸ್' ಸಹಾಯವಾಣಿ ಉದ್ಘಾಟಿಸಿದರು. ಮನೋವೈದ್ಯಕೀಯ ತಜ್ಞರ ಜತೆಗೆ ಸಮಾಲೋಚನೆ ನಡೆಸಲು ಕೈದಿಗಳಿಗೆ ಈ ಸಹಾಯವಾಣಿ ನೆರವಾಗಲಿದೆ.

ನಂತರ ನ್ಯಾಯಮೂರ್ತಿಗಳು, ಕೈದಿಗಳ ಮಕ್ಕಳಿಗಾಗಿ ಇತ್ತೀಚೆಗೆ ಆರಂಭಿಸಿರುವ ಶಿಶುಪಾಲನಾ ಕೇಂದ್ರವನ್ನು ವೀಕ್ಷಿಸಿ, ಮಹಿಳಾ ಕೈದಿಗಳೊಂದಿಗೆ ಸಂವಾದ ನಡೆಸಿದರು.

ಕಾನೂನು ಸೇವಾ ಪ್ರಾಧಿಕಾರದಿಂದ

ದಾಂತಿ ಸ್ಮಾರಕ ಸಾಹಿತ್ಯ ಪುರಸ್ಕಾರಕ್ಕೆ ಕೃತಿ ಆಯ್ಕೆ

ಪ್ರಜಾವಾಣಿ ವಾರ್ತೆ

ಫ್ಲಾವಿಯಾ ಅಲ್ಬುಕರ್ಕ್

ಉಡುಪಿ: ಫ್ರಾನ್ಸಿಸ್ ದಾಂತಿ ಸ್ಮಾರಕ ಪ್ರತಿಷ್ಠಾನ ಮತ್ತು ಕಥೋಲಿಕ್ ಸಭಾ ಉಡುಪಿ ಪ್ರದೇಶದ ಆಶ್ರಯದಲ್ಲಿ ನೀಡಲಾಗುವ ರಾಜ್ಯ ಮಟ್ಟದ ದಿ. ಫ್ರಾನ್ಸಿಸ್ ದಾಂತಿ ಸ್ಮಾರಕ ಸಾಹಿತ್ಯ ಪುರಸ್ಕಾರ-2025ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಕವಯಿತ್ರಿ ಫ್ಲಾವಿಯಾ ಅಲ್ಬುಕರ್ಕ್ ಪುತ್ತೂರು ಅವರ 'ಸಖಿ ಸೂಸಿದ ಸೌಗಂಧ' ಕವನ ಸಂಕಲನ ಆಯ್ಕೆಯಾಗಿದೆ.

ಪ್ರಶಸ್ತಿಯು ₹25 ಸಾವಿರ ನಗದನ್ನು ಒಳಗೊಂಡಿದ್ದು, ಜೂನ್ 14ರಂದು ಬೆಳಿಗ್ಗೆ 10 ಗಂಟೆಗೆ ಶಿರ್ವ ಆರೋಗ್ಯ ಮಾತಾ ಚರ್ಚ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉಡುಪಿ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಲೆಸ್ಲಿ ಕ್ಲಿಫರ್ಡ್ ಡಿಸೋಜ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪುರಸ್ಕಾರ ಸಮಿತಿಯ ಆಲ್ಫೋನ್ಸ್ ಡಿಕೋಸ್ತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುದುರೆಮುಖ, ಗಂಗಡಿಕಲ್, ಕುರಿಂಜಾಲ್ ಬೆಟ್ಟಗಳಿಗೆ ಚಾರಣ ಇಂದಿನಿಂದ

ಕಾರ್ಕಳ: ಕುದುರೆಮುಖ, ಗಂಗಡಿಕಲ್, ನೇತ್ರಾವತಿ ಹಾಗೂ ಕುರಿಂಜಾಲ್ ಬೆಟ್ಟಗಳ ಚಾರಣಕ್ಕೆ ಅರಣ್ಯ ಇಲಾಖೆ ಜೂನ್ 1ರಿಂದ ಅನುಮತಿ ನೀಡಿದೆ.

'ಅರಣ್ಯ ಇಲಾಖೆಯ 'ಅರಣ್ಯ ವಿಹಾರ' ವೆಬ್‌ಸೈಟ್ ಮೂಲಕ ಆನ್‌ಲೈನ್ ಬುಕ್ಕಿಂಗ್ ಮಾಡುವುದು ಕಡ್ಡಾಯವಾಗಿದ್ದು, ಸರ್ಕಾರದ ಹೊಸ ಎಸ್‌ಒಪಿ ಪ್ರಕಾರವೇ ಚಾರಣ ವ್ಯವಸ್ಥೆ ಇರಲಿದೆ' ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಡಿಎಫ್‌ಒ ಶಿವರಾಮ್ ಬಾಬು ತಿಳಿಸಿದ್ದಾರೆ.

ಉಳಿದ ಪ್ರಮುಖ ಚಾರಣ ತಾಣಗಳು ಜೂನ್ 15ರ ಬಳಿಕ ಮುಕ್ತ ಆಗಲಿವೆ. ಚಾರಣಿಗರ ಸುರಕ್ಷತೆಗಾಗಿ ತರಬೇತಿ ಪಡೆದ 300 ಸ್ಥಳೀಯ ಗೈಡ್‌ಗಳನ್ನು ನಿಯೋಜಿಸಲಾಗಿದ್ದು, ಅವರಿಗೆ ವಾಕಿಟಾಕಿ, ಪ್ರಥಮ ಚಿಕಿತ್ಸಾ ಕಿಟ್ ಹಾಗೂ ಸುರಕ್ಷತಾ ಪರಿಕರಗಳನ್ನು ನೀಡಲಾಗಿದೆ. ಹಾದಿ ತಪ್ಪುವುದನ್ನು ತಡೆಯಲು ಚಾರಣದ ಮಾರ್ಗದುದ್ದಕ್ಕೂ ಸೈನ್ ಬೋರ್ಡ್ ಹಾಗೂ ವಿವರಣೆಗಳನ್ನೊಳಗೊಂಡ ಹ್ಯಾಂಡ್ ಬುಕ್ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಹೈಕೋರ್ಟ್ ತೀರ್ಪು ರದ್ದುಗೊಳಿಸಿದ ಸುಪ್ರೀಂ ಕೋರ್ಟ್

ಬೇರೊಬ್ಬನಿಗೆ ಲಂಚ ಪಡೆಯುವುದೂ ಅಪರಾಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ನೌಕರನು ತನಗೆ ಅಲ್ಲದಿದ್ದರೂ, ಅಧೀನ ನೌಕರ ಒಳಗೊಂಡಂತೆ ಇನ್ನೊಬ್ಬನಿಗಾಗಿ ಲಂಚಕ್ಕೆ ಬೇಡಿಕೆಯಿಟ್ಟರೆ ಅಥವಾ ಲಂಚ ಪಡೆಯಲು ಪ್ರಯತ್ನಿಸಿದರೆ ಆತನನ್ನು ಭ್ರಷ್ಟಾಚಾರ ತಡೆ ಕಾಯ್ದೆಯಡಿ ಅಪರಾಧಿಯಾಗಿ ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಸರ್ಕಾರಿ ನೌಕರನೊಬ್ಬ ಭ್ರಷ್ಟಾಚಾರ ತಡೆ ಕಾಯ್ದೆಯಡಿ ತಪ್ಪಿತಸ್ಥ ಎನಿಸಿಕೊಳ್ಳಲು ವೈಯಕ್ತಿಕವಾಗಿ ಲಂಚ ಪಡೆಯಬೇಕು ಎಂದೇನಿಲ್ಲ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್.ಕೋಟೀಶ್ವರ್ ಸಿಂಗ್ ಅವರ ಪೀಠ ಮೇ 26ರಂದು ನೀಡಿದ ತೀರ್ಪಿನಲ್ಲಿ ಹೇಳಿದೆ.

ಸರ್ಕಾರಿ ನೌಕರನು ಅಕ್ರಮವಾಗಿ ಬೇರೊಬ್ಬನಿಗೆ ಲಾಭ ತಂದುಕೊಡಲು ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವ ಕೃತ್ಯವು ಈ ಕಾಯ್ದೆಯ ಸೆಕ್ಷನ್ 7ರ ವ್ಯಾಪ್ತಿಗೆ ಬರುತ್ತದೆ ಎಂದು ಪೀಠ ತಿಳಿಸಿದೆ.

'ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 7ರ ಅಡಿಯಲ್ಲಿ ಲಂಚದ ಆರೋಪ ಹೊರಿಸಲು ನಿರ್ದಿಷ್ಟ ಸರ್ಕಾರಿ ನೌಕರನು ಲಂಚದ ಹಣವನ್ನು ತನಗಾಗಿ ಪಡೆಯಬೇಕು ಎಂಬುದು ಅನಿವಾರ್ಯವಲ್ಲ. ಮತ್ತೊಬ್ಬ ವ್ಯಕ್ತಿಗಾಗಿ ಲಂಚದ ಬೇಡಿಕೆ ಇಟ್ಟಂತಹ ಪ್ರಕರಣಗಳನ್ನೂ ಇದು ಒಳಗೊಳ್ಳುತ್ತದೆ' ಎಂಬುದನ್ನು ಪೀಠವು ಗಮನಿಸಿತು.

ಸರ್ಕಾರಿ ನೌಕರ ವೈಯಕ್ತಿಕ ಪ್ರಭಾವ ಬಳಸಿ ನೇರವಾಗಿ ಅಪರಾಧ ಮಾಡಬಹುದು ಅಥವಾ ಇನ್ನೊಬ್ಬ ನೌಕರನ ಮೂಲಕ ಆ ಅಪರಾಧವನ್ನು ನಡೆಸಲೂಬಹುದು ಎಂದು ಪೀಠವು ವಿವರಿಸಿತು. ತೆರೆಮರೆಯಲ್ಲಿ ನಿಂತು ಅಧೀನ ನೌಕರನ ಮೂಲಕ ಲಂಚಕ್ಕೆ ಬೇಡಿಕೆ ಇಟ್ಟರೆ ಆತನೂ ಆ ಕೃತ್ಯಕ್ಕೆ ಜವಾಬ್ದಾರನಾಗುತ್ತಾನೆ ಎಂದಿತು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಪಿಎಸ್‌ಐ ಕೆ.ರಂಗಯ್ಯ ವಿರುದ್ಧದ ಎಫ್‌ಐಆರ್ ಅನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸುವಾಗ ಪೀಠವು ಈ ತೀರ್ಪು ನೀಡಿದೆ. ರಂಗಯ್ಯ ನೇರವಾಗಿ ಲಂಚಕ್ಕೆ ಬೇಡಿಕೆ ಇಟ್ಟಿಲ್ಲ ಅಥವಾ ಲಂಚದ ಹಣವನ್ನು ವೈಯಕ್ತಿಕವಾಗಿ ಪಡೆದುಕೊಂಡಿಲ್ಲ ಎಂದು ಹೇಳಿದ್ದ ಹೈಕೋರ್ಟ್, 2023ರ ಜೂನ್‌ನಲ್ಲಿ ದಾಖಲಾಗಿದ್ದ ಎಫ್‌ಐಆರ್‌ಅನ್ನು ರದ್ದುಗೊಳಿಸಿತ್ತು.

ಹೈಕೋರ್ಟ್ ಆದೇಶವನ್ನು ರದ್ದುಗೊಳಿಸಿ ಎಫ್‌ಐಆರ್‌ಅನ್ನು ಮರುಸ್ಥಾಪಿಸಿದ ಸುಪ್ರೀಂ ಕೋರ್ಟ್ ಪೀಠ, ಕಾನೂನು ಪ್ರಕಾರ ಪ್ರಕರಣವನ್ನು ಮುಂದುವರಿಸುವಂತೆ ವಿಚಾರಣಾ ಕೋರ್ಟ್‌ಗೆ ಸೂಚಿಸಿತು.

ಬೆಸ್ಕಾಂ: ಅಂತಿಮ ಆಯ್ಕೆ ಪಟ್ಟಿ ಪ್ರ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) 906 ಕಿರಿಯ ಪವರ್ ಮ್ಯಾನ್ ಹುದ್ದೆಗಳ ಭರ್ತಿಗೆ ಸಂಬಂಧಿಸಿ ಕೂಡಲೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಬೇಕು ಎಂದು ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಖಾಲಿ ಇರುವ ಕಿರಿಯ ಪವರ್ ಮ್ಯಾನ್ ಹುದ್ದೆಗಳ ಭರ್ತಿಗೆ 2024ರ ಅಕ್ಟೋಬರ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಈ ವರ್ಷದ ಮಾರ್ಚ್‌ನಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದಾಗಿ ಸುಮಾರು ಮೂರು ತಿಂಗಳಾದರೂ ಅಂತಿಮ ಪಟ್ಟಿಯನ್ನು ಪ್ರಕಟಿಸಿಲ್ಲ ಎಂದು ಅಭ್ಯರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಬೇರೆ ಬೇರೆ ಕಂಪನಿಗಳಲ್ಲಿ ಈಗಾಗಲೇ ನೇಮಕಾತಿ ಪ್ರಕ್ರಿಯೆಯನ್ನು ಪೂ... ನಿಯುಕ್ತಿ ಮಾಡಲಾಗಿ... ಆಯ್ಕೆ ಪಟ್ಟಿಯನ್ನೇ ... ಪಡೆದವರು ಕೆಲಸ ... ವ್ಯಾಸಂಗಕ್ಕೂ ಹೋ... ಬೇಗ ಪಟ್ಟಿ ಪ್ರಕಟಿಸಿ... ಕೊಳ್ಳಲು ಅನುಕೂ... ಹೇಳಿದರು.

ತಾತ್ಕಾಲಿಕ ಪಟ್ಟಿ... ಅವಧಿಯೂ ಮುಗಿ... ವರ್ಷಗಳಿಂದ ಉದ್ಯೋ... ಪ್ರಕಟಿಸಿದರೆ ಕೆಲವರಿ... ಅಭ್ಯರ್ಥಿಗಳು 'ಪ್ರಜಾ...

ಸುದ್ದಿ 2 ನಿ...

'ಬಸವಣ್ಣನ ಹೆಸ... ಒಡೆಯುವ ಹುನ...

ಗದಗ: 'ಕಾರ್ಲ್‌ಮಾರ್ಕ್ಸ್‌ನ ಮರಿಗಳ... ಕಗ್ಗೊಲೆ ಮಾಡಿದರು. ಧರ್ಮ, ಸಂಸ್ಕೃ... ಬಸವಣ್ಣನ ಧ್ವಜದ ಕೆಳಗೆ ಬರಲು ಯ... ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇ...

ನಗರದಲ್ಲಿ ಹಿಂದೂ ಸರ್ವ ಸಮಾಜ... ಸಂಜೆ ನಡೆದ ಬಸವಾದಿ ಶಿವಶರಣರ ... ಮಾತನಾಡಿದರು.

'ಇತಿಹಾಸದಲ್ಲಿ ದೇಶಗಳನ್ನೇ ಭಿಕಾ... ಸಂಸ್ಕೃತಿ ಛಿದ್ರ ಮಾಡುವಂತಹ ಕೆಟ್ಟ ... ಎಲ್ಲರನ್ನೂ ಒಗ್ಗೂಡಿಸಿದವರು ಬಸವ... ಅತೃಪ್ತ ಆತ್ಮಗಳು ತಾರತಮ್ಯ ಮಾಡುತ್ತಿ...

'ಬಸವಣ್ಣನವರನ್ನು ಜಾತಿ, ಪ್ರದೇ... ಶುದ್ಧ ಹಿಂದೂ ಧರ್ಮ ನೀಡಿದವರು ... ಹೇಳಿಕೊಂಡು ದೇಶಕ್ಕೆ ಹಾನಿ ಮಾಡು... ಧರ್ಮ ಒಡೆಯುವ ಹುನ್ನಾರವಿದೆ' ಎ...



'ಬಸವ... ಹೊಟ್ಟೆ ... ಬೇರೆ... ಕ್ಷೇಣಗ... ಸಜ್ಜನ... ಎನ್ನು... ನೂರ...

ಹೃದಯದ ಕವ... ಟಿಎವಿಆರ್ ಸ...

ಬೆಂಗಳೂರು: ಹೃದಯದ ಕವಾಟ... 'ಅಯೋರ್ಟಿಕ್ ರಿಗರ್ಜಿಟೇಷನ್... ನಾರಾಯಣ ಹೆಲ್ತ್ ಸಿಟಿ ... (ಟ್ರಾನ್ಸ್‌ಕ್ಯಾಥೆಟರ್ ವಾಲ್ವ್ ರಿಪ್ಲೇಸ್... ಆಸ್ಪತ್ರೆಯ ಹೃದ್ರೋಗ ತಜ್ಞ ಡಾ... ಟಿಎವಿಆರ್ ಸಾಧನ ಅಳವಡಿಕೆ ಮೂ...

'ಅಯೋರ್ಟಿಕ್ ರಿಗರ್ಜಿಟೇಷ... 70 ವರ್ಷ ಮೇಲ್ಪಟ್ಟವರಲ್ಲಿ ಶೇ 2ಕ್ಕಿ... ಮಧ್ಯಮ ಅಥವಾ ತೀವ್ರ ಸ್ವರೂಪದ... ಕಳೆದೊಂದು ದಶಕದಲ್ಲಿ ವೈದ್ಯಕೀ... ಬದಲಾದರೂ, ಶಸ್ತ್ರಚಿಕಿತ್ಸೆ ನೀಡುವ... ಡಾ. ಸೂರಜ್ ನರಸಿಂಹನ್ ಹೇಳಿದ...

'80 ವರ್ಷ ಮತ್ತು 69 ವರ್ಷ... ತೀವ್ರತರದ ಅಯೋರ್ಟಿಕ್ ರಿಗ... ಅವರಿಗೆ ಟಿಎವಿಆರ್ ಸಾಧನ ... ನೀಡಲು ನಿರ್ಧರಿಸಲಾಯಿತು. ಈ ... ಶಸ್ತ್ರಚಿಕಿತ್ಸೆ ನಡೆಸದೆ, ರಕ್ತನಾಳದ ... ಬದಲಾಯಿಸಲಾಗುತ್ತದೆ' ಎಂದರು.

ಯಳಂದೂರು: ಮರ ...

ಯಳಂದೂರು (ಚಾಮರಾಜನಗರ ...): ಯರಗಂಬಳ್ಳಿ- ಗುಂಬಳ್ಳಿ ರಸ್ತೆಯಲ್ಲಿ ಭಾನ... ತೆರಳುತ್ತಿದ್ದ ಮಹಿಳೆ ಮೇಲೆ ಮರ ಬಿದ್ದು ಮೃ...

ಯರಗಂಬಳ್ಳಿ ಗ್ರಾಮದ ಸಿದ್ದಯ್ಯ ಅವ... (55) ಮೃತರು. ಅವರು ಮನೆಗೆ ತೆರಳುತ್ತಿ... ಸಂಭವಿಸಿದೆ. ಪೊಲೀಸರು ಸ್ಥಳಕ್ಕೆ ಭೇ... ಕೈಗೊಂಡಿದ್ದಾರೆ.

ಪ್ರತ್ಯೇಕ ಅವಘಡ: 11 ಮಂದಿ ಸಾವು

ಕೃಷಿ ಕೂಲಿ ಕೆಲಸ ಮುಗಿಸಿ ಆಟೊದಲ್ಲಿ ಮರಳುವಾಗ ಅಪಘಾತ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ / ರಾಯಚೂರು: ರಾಜ್ಯದಲ್ಲಿ ಸಂಭವಿಸಿದ ಪ್ರತ್ಯೇಕ ಅವಘಡಗಳಲ್ಲಿ 11 ಮಂದಿ ಮೃತಪಟ್ಟಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪಟ್ಟಣ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಅಗ್ನಿಶಾಮಕ ಠಾಣೆ ಬಳಿ ಭಾನುವಾರ ನಡೆದ ಸರಣಿ ಅಪಘಾತದಲ್ಲಿ ಆಟೊ ಚಾಲಕ ಹಾಗೂ ಐದು ಮಂದಿ ಕೂಲಿ ಕಾರ್ಮಿಕ ಮಹಿಳೆಯರು ಮೃತಪಟ್ಟಿದ್ದಾರೆ.

ಬಾಗೇಪಲ್ಲಿ ತಾಲ್ಲೂಕಿನ ಸದ್ದುಪಲ್ಲಿ ಗ್ರಾಮದ ಆಟೊ ಚಾಲಕ ಅಂಜಿನಪ್ಪ (50), ಕಾರ್ಮಿಕರಾದ ಬಾಗೇಪಲ್ಲಿ ಪಟ್ಟಣದ ಉಮಾದೇವಿ (55), ವಿಜಯಮ್ಮ (40), ಲಕ್ಷ್ಮಮ್ಮ (50), ಅರುಣಮ್ಮ (40), ವೆಂಕಟರಾಯನಪಲ್ಲಿ ಗ್ರಾಮದ ಸರೋಜಮ್ಮ (65) ಮೃತರು.

ಈ ಮಹಿಳೆಯರು ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕೃಷಿ ಕೂಲಿ ಕೆಲಸ ಮುಗಿಸಿ ಆಟೊದಲ್ಲಿ ಭಾನುವಾರ ಮನೆಗಳಿಗೆ ವಾಪಸಾಗುತ್ತಿದ್ದರು. ಈ ವೇಳೆ ಹಿಂದಿನಿಂದ ಬಂದ ಕಾರು, ಆಟೊಗೆ ಡಿಕ್ಕಿ ಹೊಡೆದಿದೆ. ಆಟೊ ಮುಂದೆ ನಿಂತಿದ್ದ ಕಂಟೇನರ್‌ಗೆ ಡಿಕ್ಕಿಯಾಗಿದೆ. ಕಾರು ಮತ್ತು ಕಂಟೇನರ್ ನಡುವೆ ಸಿಲುಕಿ ಆಟೊ ನಜ್ಜುಗುಜ್ಜಾಗಿದೆ. ಕೂಲಿ ಕಾರ್ಮಿಕರು ಹೆದ್ದಾರಿಗೆ ಬಿದ್ದು ಪ್ರಾಣ ಕಳೆದುಕೊಂಡಿದ್ದಾರೆ. ತೀವ್ರವಾಗಿ ಗಾಯಗೊಂಡ ನಾಲ್ವರು ಮಹಿಳೆಯರನ್ನು ಚಿಕ್ಕಬಳ್ಳಾಪುರ, ಬೆಂಗಳೂರು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ನೀರು ಪಾಲು: ರಾಯಚೂರು ಜಿಲ್ಲೆಯ ಗಡಿ ಪ್ರದೇಶವಾದ ಮಂತ್ರಾಲಯದ ಬಳಿ ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ ಆರು ಮಂದಿಯ ಪೈಕಿ ಐವರು ಮೃತಪಟ್ಟಿದ್ದಾರೆ. ಒಬ್ಬರು ಅಪಾಯದಿಂದ ಪಾರಾಗಿದ್ದಾರೆ.

ಮೃತರನ್ನು ತೆಲಂಗಾಣದ ಹೈದರಾಬಾದ್ ನಿವಾಸಿ ವಡ್ಲ ಸತೀಶ್ (35), ಅವರ ಪುತ್ರ ಯುವನ್ ಚಂದ್ರ (5), ಮಂತ್ರಾಲಯ ನಿವಾಸಿ ರಾಘವೇಂದ್ರ (28), ಕರ್ನೂಲ್‌ನ ಎಮ್ಮಿಗನೂರಿನ ವಡ್ಲ ಧನುಷ್ (23), ಅನಂತಪುರ ಜಿಲ್ಲೆಯ ಉರುವಕೊಂಡ ನಿವಾಸಿ ಸಂಧ್ಯಾ (22) ಎಂದು ಗುರುತಿಸಲಾಗಿದೆ. ಯುವತಿ ಅಪರ್ಣಾ ಅಪಾಯದಿಂದ ಪಾರಾಗಿದ್ದಾರೆ.

ಇವರೆಲ್ಲರೂ ಮಂತ್ರಾಲಯದಲ್ಲಿ ಸಂಬಂಧಿಕರ ಮನೆಯಲ್ಲಿ ಭಾನುವಾರ ಏರ್ಪಡಿಸಿದ್ದ ಸತ್ಯನಾರಾಯಣ ಪೂಜೆಗೆ ಬಂದಿದ್ದರು. ಶನಿವಾರ ಮಧ್ಯಾಹ್ನ ಸ್ನಾನಕ್ಕಾಗಿ ತುಂಗಭದ್ರಾ ನದಿಗೆ ಇಳಿದಿದ್ದರು. ಈ ವೇಳೆ ಬಾಲಕ ಯುವನ್ ಚಂದ್ರ ನೀರಿನಲ್ಲಿ ಮುಳುಗುತ್ತಿದ್ದ. ಆತನ ರಕ್ಷಣೆಗೆ ಧಾವಿಸಿದ ಐವರು ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ಯುವತಿ ಅಪರ್ಣಾ ಅದೋನಿ ಎಂಬವವರು ಅಪಾಯದಿಂದ ಪಾರಾಗಿದ್ದು, ತಕ್ಷಣ ಅವರು ಸ್ಥಳೀಯರು ಹಾಗೂ ಕುಟುಂಬದವರಿಗೆ ಘಟನೆ ಮಾಹಿತಿ ನೀಡಿದ್ದಾರೆ.

ಸ್ಥಳೀಯ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪರಿಣತ ಈಜುಗಾರರು ತೀವ್ರ ಶೋಧ ನಡೆಸಿ ಶನಿವಾರ ರಾತ್ರಿಯೇ ಧನುಷ್ ಅವರ ಮೃತದೇಹ ಪತ್ತೆ ಮಾಡಿದ್ದಾರೆ. ಭಾನುವಾರದ ಶೋಧ ಕಾರ್ಯಾಚರಣೆಯಲ್ಲಿ ಇನ್ನುಳಿದ ನಾಲ್ವರ ಮೃತದೇಹ ದೊರೆತಿವೆ ಎಂದು ಮೂಲಗಳು ಹೇಳಿವೆ. ಈ ನಡುವೆ, ನದಿಯಲ್ಲಿ ನೀರು ಪಾಲಾದವರ ಹುಡುಕಾಟದ ವೇಳೆ ಅಪರಿಚಿತ ವ್ಯಕ್ತಿಯ ಶವ ಕೂಡ ಪತ್ತೆಯಾಗಿದೆ.

ಯುವನ್ ಚಂದ್ರ

ಧನುಷ್

ಸತೀಶ್

ರಾಘವೇಂದ್ರ

ಸಂಧ್ಯಾ

ಸಿಡಿಲು ಬಡಿದು ದಂಪತಿಗೆ ಗಾಯ

ನರಸಿಂಹರಾಜಪುರ (ಚಿಕ್ಕಮಗಳೂರು): ತಾಲ್ಲೂಕಿನಲ್ಲಿ ಭಾನುವಾರ ಮಧ್ಯಾಹ್ನ ಗುಡುಗು ಸಹಿತ ಭಾರಿ ಮಳೆಯಾಗಿದ್ದು, ಬಸ್ ನಿಲ್ದಾಣದಲ್ಲಿ ನಿಂತಿದ್ದ ದಂಪತಿಗೆ ಸಿಡಿಲು ಬಡಿದು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹೊನ್ನೆಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ಯ ಗ್ರಾಮದ ಅಡ್ಡಹಟ್ಟಿ ನಿವಾಸಿಗಳಾದ ಮಂಜುನಾಥ್ ಮತ್ತು ಮಮತಾ ದಂಪತಿ ಗಾಯಗೊಂಡವರು. ಅವರು ಪಟ್ಟಣದಿಂದ ಬೈಕ್‌ನಲ್ಲಿ ಗ್ರಾಮಕ್ಕೆ ತೆರಳುತ್ತಿದ್ದಾಗ ಮಳೆ ಬರುತ್ತಿತ್ತು. ಶೀಗುವಾನಿ ಸರ್ಕಲ್ ಬಳಿಯಿರುವ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಬಸ್ ನಿಲ್ದಾಣದ ಪಕ್ಕದ ಮರಕ್ಕೆ ಸಿಡಿಲು ಬಡಿದಿದ್ದು, ಮಂಜುನಾಥ್ ಅವರ ಕಾಲಿಗೆ ಗಾಯಗಳಾಗಿವೆ. ಮಮತಾ ಅವರ ಮೂಗು, ಕಿವಿಯಿಂದ ರಕ್ತ ಸುರಿದು, ಕೂಡಲೇ ಅವರನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕ್ಕಮಗಳೂರು ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಸೋಮವಾರದಿಂದ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ ಹಾಗೂ ಹಾವೇರಿ ಜಿಲ್ಲೆ ಹೊರತುಪಡಿಸಿ ಉಳಿದ ಜಿಲ್ಲೆಗಳಿಗೆ ಸೋಮವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ದಾವಣಗೆರೆ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಶಿವಮೊಗ್ಗ, ಬಳ್ಳಾರಿ, ವಿಜಯನಗರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಕಲಬುರಗಿ, ಬಾಗಲಕೋಟೆ, ವಿಜಯಪುರ, ಬೀದರ್, ಯಾದಗಿರಿ, ರಾಯಚೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ

'ನ್ಯಾಟ್‌ಗ್ರಿಡ್'ಗೆ ಸಿಐಎಸ್‌ಎಫ್ ರಕ್ಷಣೆ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಗುಪ್ತಚರ ಸಂಪರ್ಕ ಜಾಲ (ನ್ಯಾಟ್‌ಗ್ರಿಡ್) ಕೇಂದ್ರದ ಭದ್ರತೆಗಾಗಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಸಿಬ್ಬಂದಿಯನ್ನು ನಿಯೋಜಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಕೇಂದ್ರದ ಭದ್ರತೆಗಾಗಿಯೇ ಗೃಹ ಸಚಿವಾಲಯವು 76 ಹುದ್ದೆಗಳನ್ನು ಮಂಜೂರು ಮಾಡಿದೆ ಎಂದು ಸಿಐಎಸ್‌ಎಫ್‌ನ ವಕ್ತಾರರು ಭಾನುವಾರ ತಿಳಿಸಿದ್ದಾರೆ.

ಬೆಂಗಳೂರಿನ ಯಲಹಂಕದಲ್ಲಿ ಕ್ಯಾಂಪಸ್ ಹೊಂದಿರುವ ನ್ಯಾಟ್‌ಗ್ರಿಡ್ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದಂತೆ ಕಾರ್ಯಾಚರಿಸುತ್ತಿರುವ ಪ್ರಮುಖ ಸಂಸ್ಥೆ. ಇದು ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳಿಗೆ ಸಂಬಂಧಪಟ್ಟ ಮಾಹಿತಿ ಒದಗಿಸಲಿದೆ ಎಂದಿದ್ದಾರೆ.

ಭಯೋತ್ಪಾದಕ ದಾಳಿ ಹಾಗೂ ವಿಧ್ವಂಸಕ ಕೃತ್ಯಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ದೆಹಲಿಯಲ್ಲಿರುವ ಪ್ರಧಾನ ಕಚೇರಿಗೂ ಸಿಐಎಸ್‌ಎಫ್ ಭದ್ರತೆ ಒದಗಿಸಿದೆ.

₹1.48 ಕೋಟಿ ದಾನ ಮಾಡಿದ ನಿವೃತ್ತ ಎಂಜಿನಿಯರ್ ಶಿವಕುಮಾರ್

ಓದಿದ ಶಾಲೆಗೆ ಭವ್ಯ ಕಟ್ಟಡದ ಕೊಡುಗೆ

• ಬಲ್ಲೇನಹಳ್ಳಿ ಮಂಜುನಾಥ್

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾವು ಕಲಿತ ಸರ್ಕಾರಿ ಶಾಲೆ ಮುಂದಿನ ತಲೆಮಾರಿಗೂ ಉಳಿಯಲೆಂದು ನಿವೃತ್ತ ಎಂಜಿನಿಯರೊಬ್ಬರು ₹1.48 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದಾರೆ.

ತಾಲ್ಲೂಕಿನ ಕತ್ತರಘಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿತು ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಆಗಿ ನಿವೃತ್ತರಾಗಿರುವ ಕೆ.ಪಿ. ಶಿವಕುಮಾರ್ ಸರ್ಕಾರಿ ಶಾಲೆಗೆ ಕೊಡುಗೆ ನೀಡಿದವರು.

ಗ್ರಾಮಸ್ಥರ ಬೆಂಬಲ ಪಡೆದು ಸ್ವಂತ ಹಣವನ್ನು ಕಟ್ಟಡಕ್ಕೆ ವಿನಿಯೋಗಿಸಿದ್ದಾರೆ. ಈ ಕಾರಣದಿಂದ, ಇಲ್ಲಿ 38 ಇದ್ದ ಮಕ್ಕಳ ದಾಖಲಾತಿಯು ಶತಕ (116) ದಾಟಿದೆ. ಖಾಸಗಿ ಶಾಲೆಗೆ ಹೋಗುತ್ತಿದ್ದ ಮಕ್ಕಳು ಇಲ್ಲಿ ಸೇರಿದ್ದಾರೆ. 'ಜಯಮ್ಮ ಪುಟ್ಟೇಗೌಡ ಸರ್ಕಾರಿ ಶಾಲೆ' ಎಂದು ನಾಮಕರಣಗೊಂಡಿದ್ದು, ಅವರ ಸೇವಾ ಕಾರ್ಯ ಗ್ರಾಮಸ್ಥರ ಮೆಚ್ಚುಗೆಗೆ ಕಾರಣವಾಗಿದೆ.

> ನಾನು ಓದಿದ್ದ ಶಾಲಾ ಕಟ್ಟಡ ಶಿಥಿಲಾವಸ್ಥೆ ತಲುಪಿತ್ತು. ಹೀಗಾಗಿ ಗ್ರಾಮಸ್ಥರ ಬೆಂಬಲದಿಂದ ಶಾಲೆ ಉಳಿಸುವ ಪ್ರಯತ್ನ ಮಾಡಿದ್ದೇನೆ
>
> **ಕೆ.ಪಿ. ಶಿವಕುಮಾರ್**
> ನಿವೃತ್ತ ಎಂಜಿನಿಯರ್, ಕತ್ತರಘಟ್ಟ

ಒಳ್ಳೆ ಸುದ್ದಿ

ಕತ್ತರಘಟ್ಟದಲ್ಲಿ 7ನೇ ತರಗತಿವರೆಗೆ ಇದ್ದ ಸರ್ಕಾರಿ ಶಾಲಾ ಕಟ್ಟಡ ಶಿಥಿಲಾವಸ್ಥೆಯಲ್ಲಿತ್ತು. ಶಿವಕುಮಾರ್ ಅವರ ತಂದೆಯೂ ಇದೇ ಶಾಲೆಯಲ್ಲಿ ಓದಿದ್ದರು. ಆರಂಭದಲ್ಲಿ ₹50 ಲಕ್ಷ ವೆಚ್ಚದಲ್ಲಿ ಕಟ್ಟಡ ಕಟ್ಟಿಸಿಕೊಡುವುದಾಗಿ ಶಿಕ್ಷಣ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡರು. ಆದರೆ, ನಿರ್ಮಾಣ ಪೂರ್ಣಗೊಳ್ಳುವ ವೇಳೆಗೆ ₹1.48 ಕೋಟಿ ವೆಚ್ಚವಾಗಿದೆ.

ಹೊಸದಾದ, ಬಹುಮಹಡಿ ಕಟ್ಟಡದಲ್ಲಿ ಪ್ರತಿ ತರಗತಿಗೆ ಒಂದು ಕೊಠಡಿ, ಗ್ರಂಥಾಲಯ, ವಿಶಾಲವಾದ ಸಭಾಂಗಣ, ವೇದಿಕೆ, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಬೋಧಕರ ಕೊಠಡಿ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲಾಗಿದೆ. ಡೆಸ್ಕ್ ಮತ್ತು ಪೀಠೋಪಕರಣ ಕೊಡಿಸಿದ್ದಾರೆ.

'ಶಿವಕುಮಾರ್ ಅವರು ಬೇಸಿಗೆ ರಜೆಯಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ 15 ದಿನಗಳವರೆಗೆ 'ಅಜ್ಜಿ ಮನೆ ಬೇಸಿಗೆ ಶಿಬಿರ' ನಡೆಸಿದ್ದಾರೆ. ಕತ್ತರಘಟ್ಟ ಮತ್ತು ಸುತ್ತಮುತ್ತಲ ಗ್ರಾಮಗಳ ಶಾಲಾ ಮಕ್ಕಳನ್ನು ಒಂದೆಡೆ ಸೇರಿಸಿ ರಂಗ ತರಬೇತಿ ಸೇರಿದಂತೆ ಚಿತ್ರಕಲೆ, ಪೇಪರ್ ಆರ್ಟ್, ನೃತ್ಯ, ಹಾಡು, ಸಂಗೀತ ಕಲಿಸುವ ಕೆಲಸ ನಡೆದಿದೆ. ವಿದ್ಯಾರ್ಥಿಗಳಿಗೆ ಒಂದು ದಿನ ಪ್ರವಾಸವನ್ನೂ ಮಾಡಿಸಿದ್ದಾರೆ' ಎಂದು ಶಾಲೆಯ ಮುಖ್ಯ ಶಿಕ್ಷಕಿ ಬೆಟ್ಟಮ್ಮ ಮಾಹಿತಿ ನೀಡಿದರು.

'ಕತ್ತರಘಟ್ಟ ಹೊಯ್ಸಳ ಅರಸರ ಕಾಲದಲ್ಲಿ ದಾನ-ಧರ್ಮಕ್ಕೆ ಹೆಸರಾಗಿತ್ತು. ಆ ದಾನ ಪರಂಪರೆಯು ಶಿವಕುಮಾರ್ ಅವರ ಮೂಲಕ ಮುಂದುವರಿದಿರುವುದು ನಿದರ್ಶನ' ಎನ್ನುತ್ತಾರೆ ತಾಲ್ಲೂಕು ಜಾನಪದ ಪರಿಷತ್ತಿನ ಅಧ್ಯಕ್ಷ ಕತ್ತರಘಟ್ಟ ವಾಸು.

ಕೆ.ಆರ್.ಪೇಟೆ ತಾಲ್ಲೂಕಿನ ಕತ್ತರಘಟ್ಟ ಗ್ರಾಮದಲ್ಲಿ ದಾನಿ ಶಿವಕುಮಾರ್ ಅವರಿಂದ ನೂತನವಾಗಿ ನಿರ್ಮಾಣವಾದ ಸರ್ಕಾರಿ ಶಾಲೆ ಕಟ್ಟಡ

ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟೀವ್
TUMKUR MERCHANTS CREDIT CO-OPERATIVE
(Multi State Co-Operative Society)
H.O.: J.C. Road, TUMKUR - 572 101, Karnataka.
Ph.: 0816-2260146 Toll Free No. : 1800 5700 370
Email : ho@tmccltd.com AI based website : https://mytmcc.in

TMCC
ISO 9001-2015 Certified

ಸಾರ್ವಜನಿಕ ತಿಳುವಳಿಕೆ

ಮೆ|| ರಾಂಚಿ ಆಗ್ರೋಸ್, ಫ್ಲಾಟ್ ನಂ.45, 46, 47, 1ನೇ ಫೇಸ್, ಅಂತರಸನಹಳ್ಳಿ ಇಂಡಸ್ಟ್ರೀಯಲ್ ಏರಿಯಾ, ಶಿರಾ ರಸ್ತೆ, ತುಮಕೂರು, **ಎಸ್.ಓ.ಡಿ ಖಾತೆ ಸಂಖ್ಯೆ: 100247,** ಇದರ **ಪಾಲುದಾರರಾದ ಶ್ರೀ. ಶಿವರಾಮು. ಬಿ.ಎನ್** ಬಿನ್ ಲೇಟ್. ನಾರಾಯಣಪ್ಪ. ಬಿ.ಎಮ್ ಮತ್ತು **ಶ್ರೀ.ದಯಾನಂದ. ಬಿ.ಎನ್** ಬಿನ್ ಲೇಟ್. ನಾರಾಯಣಪ್ಪ. ಬಿ.ಎಮ್ ಇವರುಗಳು **ಸಾಲಗಾರರಾಗಿ** ಹಾಗೂ **ಶ್ರೀ. ಶಿವರಾಮು. ಬಿ.ಎನ್, ಶ್ರೀ. ದಯಾನಂದ. ಬಿ.ಎನ್** ಮತ್ತು ಶ್ರೀ.ಶಿವರಾಮು.ಬಿ.ಎನ್ ರವರ ಕುಟುಂಬ ಸದಸ್ಯರಾದ **ಶ್ರೀ. ನವೀನ್. ಬಿ.ಎನ್, ಶ್ರೀಮತಿ. ಕೋಮಲ, ಶ್ರೀ. ರಘು. ಬಿ.ಎನ್** ಹಾಗೂ **ಶ್ರೀಮತಿ. ಜಯಮ್ಮ. ಬಿ.ಜಿ,** ವಾಸ: ಬಳ್ಳಗೆರೆ, ನಾಗವಲ್ಲಿ ಪೋಸ್ಟ್, ಹೆಬ್ಬೂರು ಹೋಬಳಿ, **ತುಮಕೂರು** ತಾಲ್ಲೂಕು, **ಶ್ರೀ. ಬಿ.ಎಮ್.ಕೆ ಗೌಡ, ಶ್ರೀಮತಿ. ಮಮತಾ, ಶ್ರೀ. ಶರತ್,** ವಾಸ: **ಮೈಸೂರು, ಶ್ರೀ. ಕೆ.ಜಿ. ಬೋರಯ್ಯ, ಶ್ರೀಮತಿ. ಬಿ.ಆರ್.ರತ್ನ, ಶ್ರೀ. ರವಿ ಕುಮಾರ್. ಕೆ.ಬಿ** ಹಾಗೂ **ಶ್ರೀಮತಿ. ಸ್ಮಿತಾ. ಬಿ.ಎನ್,** ವಾಸ: ನಂ.152, 7ನೇ 'ಸಿ' ಮೈನ್, 19ನೇ ಕ್ರಾಸ್, 3ನೇ ಬ್ಲಾಕ್, 4ನೇ ಸ್ಟೇಜ್, ಬಸವೇಶ್ವರ ನಗರ, **ಬೆಂಗಳೂರು** ಇವರುಗಳು **ಜಾಮೀನುದಾರರಾಗಿ** ಸಹಕಾರಿಯಿಂದ ಸಾಲ ಸೌಲಭ್ಯ ಪಡೆದಿದ್ದು, ಭದ್ರತೆಗಾಗಿ ತಮ್ಮ ಹೆಸರಿನಲ್ಲಿರುವ ಹಲವು ಆಸ್ತಿಗಳನ್ನು ಆಧಾರ ಮಾಡಿರುತ್ತಾರೆ. **ಇವರು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿದ್ದು ಸಾಲದ ಖಾತೆಯು NPA ಆಗಿರುತ್ತದೆ. ಸದರಿ ಆಸ್ತಿಗಳ ಮೇಲೆ ಕಾನೂನು ಕ್ರಮ ಕೈಗೊಂಡಿರುತ್ತದೆ.** ಇವರು ತಮ್ಮ ಆಸ್ತಿಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದು, ಯಾರಾದರೂ ವ್ಯವಹರಿಸಿದಲ್ಲಿ **ಕಾನೂನು ಬಾಹಿರವಾಗಿರುತ್ತದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.**

ದಿನಾಂಕ : 26-05-2026
ಸ್ಥಳ : ತುಮಕೂರು

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟೀವ್ ಲಿ.
ಪ್ರಧಾನ ಕಛೇರಿ : ಜೆ.ಸಿ. ರಸ್ತೆ, ತುಮಕೂರು.

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್) : L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ : +91 80 28520261 ಫ್ಯಾಕ್ಸ್ : +91 80 28520362
investors@infosys.com, www.infosys.com

45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಮತ್ತು ಇ-ಮತದಾನದ ಮಾಹಿತಿ ಸೂಚನೆ

ಈ ಕೆಳಕಂಡಂತೆ ಸೂಚಿಸಲಾಗಿದೆ:

1. ಇನ್‌ಫೋಸಿಸ್ ಲಿಮಿಟೆಡ್ ('ಕಂಪನಿ') ನ ಷೇರುದಾರರ 45ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ('ಎಜಿಎಂ') ಮಂಗಳವಾರ, ಜೂನ್ 23, 2026 ಭಾರತೀಯ ಕಾಲಮಾನ ಸಂಜೆ 4:00ಕ್ಕೆ ಸರಿಯಾಗಿ ವಿಡಿಯೋ ಕಾನ್ಫರೆನ್ಸ್ / ಇತರ ದೃಶ್ಯಶ್ರಾವ್ಯ ವಿಧಾನಗಳ ('ವಿಸಿ') ಮೂಲಕ ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025, ದಿನಾಂಕ ಸೆಪ್ಟೆಂಬರ್ 22, 2025 ರ ಅನ್ವಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳಿಗೆ (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಅನುಸಾರವಾಗಿ, ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಷೇರುದಾರರ ಭೌತಿಕ ಉಪಸ್ಥಿತಿಯಿಲ್ಲದೆ ವಿಸಿ ಮೂಲಕ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಅನುಮತಿಸಲಾಗಿದೆ. ಆದ್ದರಿಂದ, ಮೇ 28, 2026ರ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯಲ್ಲಿ ನಿಗದಿಪಡಿಸಿದಂತೆ ವ್ಯವಹಾರವನ್ನು ನಡೆಸಲು ಕಂಪನಿಯ ವಾರ್ಷಿಕ ಮಹಾಸಭೆಯನ್ನು ವಿಸಿ ಮೂಲಕ ನಡೆಸಲಾಗುತ್ತಿದೆ.
2. ಮೇಲ್ಕಾಣಿಸಿದ ಸುತ್ತೋಲೆಗಳಂತೆ, ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಹಾಗೂ ಸಂಯೋಜಿತ ವಾರ್ಷಿಕ ವರದಿ 2025–26 ಇವುಗಳನ್ನು ಯಾವ ಸದಸ್ಯರು ವಿದ್ಯುನ್ಮಾನ ಅಂಚೆ, ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು) (ಡಿಪಿ) ಇವರಲ್ಲಿ ನೋಂದಾಯಿತವಾಗಿದೆಯೋ ಆ ವಿದ್ಯುನ್ಮಾನ ಅಂಚೆಗಳಿಗೆ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಸದರಿ ದಸ್ತಾವೇಜುಗಳು ಕಂಪನಿಯ ಜಾಲತಾಣ www.infosys.com ದಲ್ಲಿಯೂ ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣಗಳಲ್ಲಿಯೂ ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್)ನ ಜಾಲತಾಣ https://www.evoting.nsdl.com. ಗಳಲ್ಲಿಯೂ ಲಭ್ಯವಿರುತ್ತದೆ. ವಿದ್ಯುನ್ಮಾನ ಅಂಚೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಕಳುಹಿಸುವ ಪ್ರಕ್ರಿಯೆ ದಿನಾಂಕ ಮೇ 30, 2026 ರಂದು ಪೂರ್ಣಗೊಳಿಸಲಾಗಿದೆ.
3. ಕಂಪನಿ ಅಥವಾ ಡೆಪಾಸಿಟರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ 2025–26ನೇ ಆರ್ಥಿಕ ವರ್ಷದ ಸಂಯೋಜಿತ ವಾರ್ಷಿಕ ವರದಿಯನ್ನು ಪ್ರವೇಶಿಸಲು ವೆಬ್‌ಲಿಂಕ್ ಮತ್ತು ಕ್ಯೂಆರ್ ಕೋಡ್ ಅನ್ನು ಒದಗಿಸುವ ಪತ್ರವನ್ನು ಮೇ 30, 2026 ರಂದು ಕಳುಹಿಸಲಾಗುವುದು.
4. ನಿರ್ಣಾಯಕ ದಿನಾಂಕದಂತೆ ಅಂದರೆ ಜೂನ್ 16, 2026 ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರುಗಳು ವಿದ್ಯುನ್ಮಾನ ರೂಪದಲ್ಲಿ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ಹೇಳಿದಂತೆ ಎನ್‌ಎಸ್‌ಡಿಎಲ್‌ನ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ (ರಿಮೋಟ್ ಇ-ವೋಟಿಂಗ್) ಮತಚಲಾಯಿಸಬಹುದಾಗಿರುತ್ತದೆ. ಷೇರುದಾರರ ಮತದಾನದ ಹಕ್ಕುಗಳು ಕಂಪನಿಯ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳಿಗೆ ಅನುಗುಣವಾಗಿರುತ್ತವೆ. ವಿಸಿ ಮೂಲಕ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಎಣಿಸಲಾಗುತ್ತದೆ.
5. ಎಲ್ಲ ಷೇರುದಾರರಿಗೆ ಈ ಕೆಳಕಂಡಂತೆ ಮಾಹಿತಿನೀಡಲಾಗಿರುತ್ತದೆ:
   i. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ತಿಳಿಸಿರುವಂತೆ ವ್ಯಾಪಾರ ವಹಿವಾಟುಗಳನ್ನು ಸದೂರ ವಿ-ಮತದಾನ ಅಥವಾ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ನಡೆಸಬಹುದಾಗಿರುತ್ತದೆ.
   ii. ಸದೂರ ವಿದ್ಯುನ್ಮಾನ ವಿಧಾನದಲ್ಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಮತ ಚಲಾಯಿಸುವ ಅರ್ಹತೆ ಗೊತ್ತುಪಡಿಸುವ ನಿರ್ಣಾಯಕ ದಿನಾಂಕ ಜೂನ್ 16, 2026 ಆಗಿರುತ್ತದೆ.
   iii. ಸದೂರ ವಿ-ಮತದಾನ (ರಿಮೋಟ್ ಇ-ವೋಟಿಂಗ್) ಗುರುವಾರ, ದಿನಾಂಕ ಜೂನ್ 18, 2026 (ಭಾರತೀಯ ಕಾಲಮಾನ ಬೆಳಿಗ್ಗೆ 9:00 ಗಂಟೆಗೆ)ರಂದು ಆರಂಭವಾಗುತ್ತದೆ.
   iv. ಸದೂರ ವಿ-ಮತದಾನ (ರಿಮೋಟ್ ಇ-ವೋಟಿಂಗ್) ಸೋಮವಾರ, ದಿನಾಂಕ ಜೂನ್ 22, 2026 (ಭಾರತೀಯ ಕಾಲಮಾನ ಸಂಜೆ 5:00 ಗಂಟೆಗೆ)ರಂದು ಮುಕ್ತಾಯವಾಗುತ್ತದೆ.
   v. ದಿನಾಂಕ ಜೂನ್ 22, 2026 ಭಾರತೀಯ ಕಾಲಮಾನ ಸಂಜೆ 5:00 ಗಂಟೆಯ ನಂತರ ವಿದ್ಯುನ್ಮಾನ ಕ್ರಮದಲ್ಲಿ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು.
   vi. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ ಮತ್ತು ಯಾವುದೇ ವ್ಯಕ್ತಿಗತವಲ್ಲದ ಷೇರುದಾರರು, ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಪಡೆದುಕೊಂಡು ಕಂಪನಿಯ ಷೇರುದಾರರಾಗುತ್ತಾರೋ ಮತ್ತು ಕಟ್-ಆಫ್ ದಿನಾಂಕ ಅಂದರೆ ಜೂನ್ 16, 2026 ರಂದು ಷೇರುಗಳನ್ನು ಹೊಂದಿರುವವರು, evoting@nsdl.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಬಹುದು. ಆದಾಗ್ಯೂ, ವ್ಯಕ್ತಿಯು ಈಗಾಗಲೇ ರಿಮೋಟ್ ಇ-ವೋಟಿಂಗ್‌ಗಾಗಿ NSDL ನಲ್ಲಿ ನೋಂದಾಯಿಸಿಕೊಂಡಿದ್ದರೆ, ಅವರು ಮತ ಚಲಾಯಿಸಲು ತಮ್ಮ ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಬಳಸಬಹುದು.
   vii. ಸದಸ್ಯರ ಗಮನಕ್ಕೆ:
      ಅ) ಒಮ್ಮೆ ಠರಾವಿನ ಮೇಲೆ ಷೇರುದಾರರು ಮತಚಲಾಯಿಸಿದ ನಂತರ ಷೇರುದಾರರು ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.
      ಆ) ಮತಚಲಾಯಿಸುವ ಸೌಲಭ್ಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುವ ಸ್ಥಳದಲ್ಲಿಯೂ ಲಭ್ಯವಿದ್ದು ವಿಡಿಯೋ ಕಾನ್ಫರೆನ್ಸ್ (ವಿಸಿ) ವ್ಯವಸ್ಥೆಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರು ಯಾರು ಠರಾವುಗಳ ಕುರಿತಾಗಿ ಸದೂರ ವಿದ್ಯುನ್ಮಾನ ಮತದಾನದ ಮೂಲಕ ಮತಚಲಾಯಿಸಿಲ್ಲವೋ ಹಾಗೂ ಮತದಾನ ಮಾಡದಂತೆ ನಿರ್ಬಂಧಿಸಿಲ್ಲವೋ ಅವರು ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತದಾನ ಮಾಡಬಹುದಾಗಿರುತ್ತದೆ.
      ಇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಮುಂಚಿತವಾಗಿ ಸದೂರ ವಿ-ಮತದಾನದ ಮೂಲಕ ಮತಚಲಾಯಿಸಿದವರು ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗಬಹುದು, ಆದರೆ ಮತ್ತೊಮ್ಮೆ ಮತಚಲಾಯಿಸುವ ಅವಕಾಶವಿರುವುದಿಲ್ಲ; ಮತ್ತು
      ಈ) ನಿರ್ಣಾಯಕ ದಿನಾಂಕದೊಳಗೆ ಷೇರುದಾರರು ವಹಿಯಲ್ಲಿ ದಾಖಲಾಗಿರುವ ಹೆಸರಿನ ಷೇರುದಾರರು ಅಥವಾ ಡೆಪಾಸಿಟರಿಸ್ ಅವರಲ್ಲಿನ ಲಾಭಹಕ್ಕುದಾರರ ವಹಿಯಲ್ಲಿ ದಾಖಲಾಗಿರುವ ಷೇರುದಾರರು ಮಾತ್ರ ಸದೂರ ವಿ-ಮತದಾನ ಅಥವಾ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿನ ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿರುತ್ತದೆ.
   viii. ಷೇರುಗಳನ್ನು ಭೌತಿಕ, ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಹಾಗೂ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸಿಲ್ಲದ ಷೇರುದಾರಿಗೆ ಸದೂರ ವಿ-ಮತದಾನದ ಕ್ರಮವನ್ನು ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಪತ್ರದಲ್ಲಿ ನೀಡಲಾಗಿದೆ. ಸದರಿ ವಿವರಗಳನ್ನು ಕಂಪನಿಯ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಷೇರುದಾರರು ವಿವರಗಳಿಗಾಗಿ www.infosys.com ಜಾಲತಾಣವನ್ನು ಸಂಪರ್ಕಿಸಬಹುದಾಗಿರುತ್ತದೆ.
   ix. ಷೇರುಗಳನ್ನು ಡಿಮ್ಯಾಟ್ ಮೋಡ್‌ನಲ್ಲಿ ಹೊಂದಿರುವ ಮತ್ತು ತಮ್ಮ KYC ವಿವರಗಳನ್ನು ನವೀಕರಿಸದ ಷೇರುದಾರರು ತಮ್ಮ ಇಮೇಲ್ ಐಡಿ ಮತ್ತು ಇತರ KYC ವಿವರಗಳನ್ನು ತಮ್ಮ ಡಿಪೋಸಿಟರಿ ಪಾರ್ಟಿಸಿಪೇನ್ಸ್ ರ ಮೂಲಕ ನೋಂದಾಯಿಸಲು ವಿನಂತಿಸಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಹಾಗೂ ತಮ್ಮ ಕೆವೈಸಿ ಮಾಹಿತಿಯನ್ನು ಒದಗಿಸಿಲ್ಲವೋ ಅವರು ನಮೂನೆ ಐಎಸ್‌ಆರ್-1 (ನಿಗದಿತ ನಮೂನೆಯು https://www.infosys.com/investors/shareholder-services/investors-service.html ಜಾಲತಾಣದಲ್ಲಿ ಲಭ್ಯ) ಅನ್ನು ತಮ್ಮ ವಿದ್ಯುನ್ಮಾನ ಅಂಚೆ, ಬ್ಯಾಂಕ್ ಖಾತೆ ವಿವರಗಳು ಮತ್ತು ಇತರ ಕೆವೈಸಿ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು (ಆರ್‌ಟಿಎ), ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಭರ್ತಿ ಮಾಡಿದ ನಮೂನೆಯನ್ನು einward.ris@kfintech.com ಇಲ್ಲಿಗೆ ವಿದ್ಯುನ್ಮಾನ ಅಂಚೆ ಮೂಲಕ ರವಾನಿಸಲು ಕೋರಲಾಗಿದೆ. ಇದು ಷೇರುದಾರರು 2025–26ನೇ ಸಾಲಿನ ಸಂಯೋಜಿತ ವಾರ್ಷಿಕ ವರದಿ, ಸೂಚನೆ, ಸದೂರ ವಿದ್ಯುನ್ಮಾನ ಮತದಾನಕ್ಕೆ ಸೂಚನೆಗಳು, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ವಿಸಿ ಮೂಲಕ ಭಾಗವಹಿಸಲು ಬೇಕಾದ ಸೂಚನೆ ಇವುಗಳನ್ನು ವಿದ್ಯುನ್ಮಾನ ರೂಪದಲ್ಲಿ ಪಡೆದುಕೊಳ್ಳಲು ಹಾಗೂ ಎಲೆಕ್ಟ್ರಾನಿಕ್ ರೂಪದಲ್ಲಿ ಲಾಭಾಂಶವನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ಲಾಭಾಂಶವನ್ನು ಸ್ವೀಕರಿಸಲು ಬ್ಯಾಂಕ್ ವಿವರಗಳನ್ನು ನೋಂದಾಯಿಸುವ ವಿಧಾನಗಳನ್ನು ಷೇರುದಾರರ ಉಲ್ಲೇಖಕ್ಕಾಗಿ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯಲ್ಲಿ ವಿವರಿಸಲಾಗಿದೆ.
   x. ಸದೂರ ವಿದ್ಯುನ್ಮಾನ ಮತದಾನ ಕುರಿತಾಗಿ ಸಂದೇಹಗಳಿದ್ದಲ್ಲಿ, ಷೇರುದಾರರು, ಷೇರುದಾರರ ಸಾಮಾನ್ಯ ಸಂದೇಹಗಳ ವಿಭಾಗವನ್ನು ಮತ್ತು ವಿ-ಮತದಾನ ಬಳಕೆದಾರ ಕೈಪಿಡಿಯನ್ನು www.evoting.nsdl.com ದಲ್ಲಿನ ಡೌನ್‌ಲೋಡ್ ವಿಭಾಗದಿಂದ ಇಳಿಸಿಕೊಂಡು ನೋಡಬಹುದು ಅಥವಾ ಉಚಿತ ಕರೆಸಂಖ್ಯೆ 022-4886 7000ಕ್ಕೆ ಕರೆಮಾಡಬಹುದು ಅಥವಾ evoting@nsdl.com ಗೆ ವಿನಂತಿಯನ್ನು ಕಳುಹಿಸಬಹುದು ಅಥವಾ ಅಮಿತ್ ವಿಶಾಲ್, ಉಪ ಉಪಾಧ್ಯಕ್ಷ– NSDL ವಿ-ಅಂಚೆ amitv@nsdl.com ಅಥವಾ ಪಲ್ಲವಿ ಮಾತ್ರೆ, ಹಿರಿಯ ವ್ಯವಸ್ಥಾಪಕಿ – pallavid@nsdl.com ನಲ್ಲಿ; ವಿಳಾಸ– 301 3ನೇ ಮಹಡಿ, ನಮನ್ ಚೇಂಬರ್ಸ್, ಪ್ಲಾಟ್ C 32, G–ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬೈ, ಮಹಾರಾಷ್ಟ್ರ – 400051, ಭಾರತ, ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲಿನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಮ್‌ಪಲ್ಲಿ ಮಂಡಲ್, ಹೈದರಾಬಾದ್–500032, ವಿ-ಅಂಚೆ einward.ris@kfintech.com. ಅಥವಾ ಶುಲ್ಕ ರಹಿತ ಸಂಖ್ಯೆ 1800 309 4001 ಅನ್ನು ಸಂಪರ್ಕಿಸಬಹುದು.
   xi. ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಬಳಸಿಕೊಂಡು ಸಭೆಯಲ್ಲಿ ಭಾಗವಹಿಸುವ ಕುರಿತಾಗಿ ತಾಂತ್ರಿಕ ಸಹಾಯ ಬೇಕಾದ ಷೇರುದಾರರು +91 80 4156 5555 / +91 80 4156 5777 ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಿ ಸಹಾಯವನ್ನು ಪಡೆದುಕೊಳ್ಳಬಹುದು.
   xii. ಸೂಚನೆಯೊಂದಿಗೆ ಸಂಯೋಜಿತ ವಾರ್ಷಿಕ ವರದಿಯು ಜಾಲತಾಣ https://www.infosys.com/investors/reports-filings.html#sec ನಲ್ಲಿ ಲಭ್ಯವಿದೆ
6. ಅಂತಿಮ ಲಾಭಾಂಶ ನೀಡಿಕೆಗೆ ನಿಗದಿಪಡಿಸಲಾಗಿರುವ ಅಧಿಕೃತ ದಿನಾಂಕವು ಜೂನ್ 10, 2026 ಆಗಿರುತ್ತದೆ. ಅಂತಿಮ ಹಾಗೂ 45ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಷೇರುದಾರರು ಅನುಮೋದಿಸಿದ ನಂತರ ಅಂತಿಮ ಲಾಭಾಂಶವನ್ನು ಜೂನ್ 25, 2026 ರಂದು ಪಾವತಿಸಲಾಗುತ್ತದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್.ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎ21918

ಬೆಂಗಳೂರು, ಭಾರತ
ಮೇ 30, 2026

ಶಿವಕುಮಾರ್ ಸಿ.ಎಂ; ದಳಪತಿಗಳಿಗೆ ಸವಾಲು

• ವೈ.ಗ.ಜಗದೀಶ

ಸುದ್ದಿ ವಿಶ್ಲೇಷಣೆ

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರಿಗಿರುವ ಒಕ್ಕಲಿಗರ ಪ್ರಶ್ನಾತೀತ ನಾಯಕರೆಂಬ ಪಟ್ಟವನ್ನು ಕಿತ್ತುಕೊಳ್ಳಲು ಡಿ.ಕೆ. ಶಿವಕುಮಾರ್ ಅವರು ಸೆಣಸುತ್ತಲೇ ಬಂದಿದ್ದಾರೆ. ಶಿವಕುಮಾರ್ ಮುಖ್ಯಮಂತ್ರಿ ಗಾದಿಗೆ ಏರುವುದರೊಂದಿಗೆ ಒಕ್ಕಲಿಗ ನಾಯಕತ್ವಕ್ಕಾಗಿ ನಡೆಯುತ್ತಿರುವ ಪೈಪೋಟಿ ಮತ್ತೊಂದು ಮಜಲಿಗೆ ಹೊರಳಲಿದೆ. ಒಕ್ಕಲಿಗರ ಮತಗಳ ಮೇಲೆ ತನಗಿರುವ ಹಿಡಿತವನ್ನು ಉಳಿಸಿಕೊಳ್ಳುವ ಸವಾಲೂ ದಳಪತಿಗಳಿಗೆ ಎದುರಾಗುವ ಸಾಧ್ಯತೆ ದಟ್ಟವಾಗಿದೆ.

ದೇವೇಗೌಡರ ಉತ್ತರಾಧಿಕಾರಿಯಾಗಿ ಕುಮಾರಸ್ವಾಮಿ ರೂಪುಗೊಂಡು, ಒಂದಷ್ಟರ ಮಟ್ಟಿಗೆ ಒಕ್ಕಲಿಗರ ನಾಯಕತ್ವವನ್ನು ತಮ್ಮ ಹೆಗಲಿಗೆ ಹಾಕಿಕೊಂಡರು. ಅಷ್ಟರ ಮಧ್ಯೆಯೇ ಶಿವಕುಮಾರ್ ಅವರು ರಾಜ್ಯ ರಾಜಕಾರಣವನ್ನು ಆವರಿಸಿಕೊಳ್ಳತೊಡಗಿದರು; ಜತೆಗೆ ಒಕ್ಕಲಿಗರ ಪಾರುಪತ್ಯಕ್ಕೆ ತಮ್ಮ ಟವಲ್ ಹಾಸಿದರು. ಶಿವಕುಮಾರ್ ಹಾಗೂ ಕುಮಾರಸ್ವಾಮಿ ಅವರ ನಡುವೆ ಶುರುವಾದ ಈ ಸ್ಪರ್ಧೆ, ಒಕ್ಕಲಿಗರ ಮತ ಒಲವುಗಳನ್ನು ಭಿನ್ನ ನೆಲೆಗೆ ದೂಡಿತು. ಇದರಿಂದಾಗಿ, 2023ರ ವಿಧಾನಸಭೆ ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿ ಒಕ್ಕಲಿಗರ ಮತ ಬಾಹುಳ್ಯವಿರುವ ಕ್ಷೇತ್ರಗಳಲ್ಲಿ ವಿಭಿನ್ನ ಫಲಿತಾಂಶ ಹೊರಬಿತ್ತು.

ಕಾಂಗ್ರೆಸ್‌ನಲ್ಲಿ ಎಸ್.ಎಂ. ಕೃಷ್ಣ ಇರುವವರೆಗೆ ಸಮುದಾಯದ ನಾಯಕತ್ವಕ್ಕಾಗಿ ದೇವೇಗೌಡರು ಮತ್ತು ಅವರ ನಡುವೆ ಸ್ಪರ್ಧೆ ಇತ್ತಾದರೂ, ಗೌಡರೇ ಮೇಲುಗೈ ಸಾಧಿಸುತ್ತಿದ್ದರು. ಕೃಷ್ಣ ಅವರು ಕಾಂಗ್ರೆಸ್ ತೊರೆದ ಬಳಿಕ, ಶಿವಕುಮಾರ್ ಕಾಂಗ್ರೆಸ್‌ನ ಒಕ್ಕಲಿಗ ನಾಯಕನಾಗುವತ್ತ ಮುನ್ನುಗ್ಗಿದರು. ಜೀವನದುದ್ದಕ್ಕೂ ಗೌಡರ ಕುಟುಂಬವನ್ನು ಎದುರು ಹಾಕಿಕೊಂಡೇ ರಾಜಕಾರಣ ಮಾಡುತ್ತಿರುವ ಶಿವಕುಮಾರ್, 2020ರಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಮೇಲೆ ಆಕ್ರಮಣಕಾರಿ ನಡೆಯತ್ತ ಸಾಗಿದರು.

2023ರ ಚುನಾವಣೆಯ ಲೆಕ್ಕ: ಚುನಾವಣೆ ಪೂರ್ವದಲ್ಲಿ ಹಲವು ಹೋರಾಟಗಳನ್ನು ಮುನ್ನಡೆಸಿದ ಶಿವಕುಮಾರ್, ಮೇಕೆದಾಟು ಪಾದಯಾತ್ರೆ, ರಾಹುಲ್ ಗಾಂಧಿಯವರ ಭಾರತ್ ಜೋಡೊ ಯಾತ್ರೆಯನ್ನು ಯಶಸ್ವಿಯಾಗಿ ನಿಭಾಯಿಸಿದರು. ಆ ಮೂಲಕ ಒಕ್ಕಲಿಗರ ನಾಯಕನಾಗುವತ್ತ ಹೆಜ್ಜೆ ಇಟ್ಟರು.

2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದರೆ ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಅಪೇಕ್ಷೆಯಲ್ಲಿ ಒಕ್ಕಲಿಗ ಸಮುದಾಯ ಅವರ ಬೆನ್ನಿಗೆ ನಿಂತಿತು. ಸಿದ್ದರಾಮಯ್ಯನವರ ವರ್ಚಸ್ಸು, ಅವರ ಜತೆಗಿದ್ದ ಅಹಿಂದ ಹಾಗೂ ಗ್ಯಾರಂಟಿಗಳ ಜತೆಗೆ, ಶಿವಕುಮಾರ್ ಬಗೆಗಿನ ಮಮತೆಯೂ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಲ ನೀಡಿತು.

ಮೈಸೂರು ಜಿಲ್ಲೆಯ 11 ಕ್ಷೇತ್ರಗಳ ಪೈಕಿ 8, ಚಾಮರಾಜನಗರದ 4 ಕ್ಷೇತ್ರಗಳ ಪೈಕಿ 3, ಮಂಡ್ಯದ 7 ಕ್ಷೇತ್ರಗಳಲ್ಲಿ 5 ಕಾಂಗ್ರೆಸ್ ಗೆದ್ದರೆ, ಕಾಂಗ್ರೆಸ್ ಬೆಂಬಲಿತ ಸರ್ವೋದಯ ಕರ್ನಾಟಕದ ಅಭ್ಯರ್ಥಿ ಒಂದರಲ್ಲಿ ಗೆದ್ದರು. ರಾಮನಗರದ 4 ಕ್ಷೇತ್ರಗಳಲ್ಲಿ 3 ಮತ್ತು ಉಪ ಚುನಾವಣೆಯಲ್ಲಿ 1, ತುಮಕೂರಿನ 11 ಕ್ಷೇತ್ರಗಳಲ್ಲಿ 7, ಬೆಂಗಳೂರು ಗ್ರಾಮಾಂತರದಲ್ಲಿ 4 ಕ್ಷೇತ್ರಗಳಲ್ಲಿ 3, ಚಿಕ್ಕಬಳ್ಳಾಪುರದ 5 ಕ್ಷೇತ್ರಗಳಲ್ಲಿ 3, ಚಿಕ್ಕಮಗಳೂರಿನಲ್ಲಿ 5 ಕ್ಷೇತ್ರಗಳಲ್ಲಿ 5ರಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿತು. ಕೋಲಾರದ 6 ಕ್ಷೇತ್ರಗಳಲ್ಲಿ 4 ಕಾಂಗ್ರೆಸ್ ಪಾಲಾದರೆ, ಒಂದು ಕಡೆ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಗೆದ್ದರು. ಚಿಕ್ಕಮಗಳೂರಿನಲ್ಲಿ ತರೀಕೆರೆ, ಕಡೂರು ಕ್ಷೇತ್ರಗಳಲ್ಲಿ ಒಕ್ಕಲಿಗರ ಮತಕ್ಕಿಂತ ಸಿದ್ದರಾಮಯ್ಯನವರ ಮತಗಳು ಗೆಲುವಿಗೆ ಕಾರಣವಾದವು. ಹಾಸನ ಜಿಲ್ಲೆ ಮಾತ್ರ ಶಿವಕುಮಾರ್ ಕೈಹಿಡಿಯಲಿಲ್ಲ.

2024ರ ಲೋಕಸಭೆ: ವಿಧಾನಸಭೆ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಿದ್ದ ಜೆಡಿಎಸ್, 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿತು. ಇದರಿಂದಾಗಿ, ಫಲಿತಾಂಶದ ಚಿತ್ರಣವೇ ಬದಲಾಗಿತ್ತು. 2023ರಲ್ಲಿ ‘ಕುಮಾರಸ್ವಾಮಿ ಅವರಿಗೆ ಅಧಿಕಾರ ತಪ್ಪಿಸಿದೆವು’ ಎಂಬಂತೆ ವರ್ತಿಸಿದ ಒಕ್ಕಲಿಗ ಮತದಾರರು, ಈಗ ಗೆದ್ದರೆ ಕುಮಾರಸ್ವಾಮಿ ಕೇಂದ್ರದಲ್ಲಿ ಮಂತ್ರಿಯಾಗುತ್ತಾರೆ ಎಂಬ ಕಾರಣಕ್ಕೆ ಕಾಂಗ್ರೆಸ್‌ನ ಮತ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿದರು. ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಚಿಕ್ಕಮಗಳೂರು-ಉಡುಪಿ, ಗ್ರಾಮಾಂತರ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದರೆ, ಮಂಡ್ಯ ಮತ್ತು ಕೋಲಾರದಲ್ಲಿ ಜೆಡಿಎಸ್ ಗೆಲುವು ಸಾಧಿಸಿತು. ಗ್ರಾಮಾಂತರ ಕ್ಷೇತ್ರದಲ್ಲಿ ದೇವೇಗೌಡರ ಅಳಿಯ ಸಿ.ಎನ್. ಮಂಜುನಾಥ್ ಅವರು ಬಿಜೆಪಿಯಿಂದ ಸ್ಪರ್ಧಿಸಿ, ಶಿವಕುಮಾರ್ ಸೋದರ ಡಿ.ಕೆ. ಸುರೇಶ್ ಅವರನ್ನು ಸೋಲಿಸಿದರು.

ಡಿಕೆಶಿಗೆ ಪಟ್ಟ: 2028ರಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಮತ್ತೊಮ್ಮೆ ರಾಜ್ಯದ ಚುಕ್ಕಾಣಿ ಹಿಡಿಯುವುದಾಗಿ ಕುಮಾರಸ್ವಾಮಿ ಹೇಳಿಕೊಂಡಿದ್ದಾರೆ. ಪಕ್ಷದ ಸಂಘಟನೆಯನ್ನು ಬಲಗೊಳಿಸಲು ಎರಡು ವರ್ಷಕ್ಕೆ ಮೊದಲೇ ಕಾರ್ಯತಂತ್ರ ಹೆಣೆದಿದ್ದು, ರಾಜ್ಯದ ಕಡೆ ಗಮನ ಹರಿಸಿದ್ದಾರೆ.

ಶಿವಕುಮಾರ್‌ಗೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡದಿದ್ದರೆ, ಕಾಂಗ್ರೆಸ್ ಪಕ್ಷ ಒಕ್ಕಲಿಗರಿಗೆ ಅಧಿಕಾರ ಕೊಡಲಿಲ್ಲ ಎಂಬ ಅಂಶವನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸುವ ಸನ್ನಾಹದಲ್ಲಿ ಜೆಡಿಎಸ್ ಇತ್ತು. ಅದಕ್ಕೆ ಭಿನ್ನವಾಗಿ ಕಾಂಗ್ರೆಸ್ ಹೈಕಮಾಂಡ್, ಹೊಸ ದಾಳವನ್ನೇ ಉರುಳಿಸಿದೆ.

ಇಡೀ ರಾಜ್ಯ ಓಡಾಡಿ ಪಕ್ಷ ಕಟ್ಟುವಷ್ಟು ಶ್ರಮಹಾಕಲು ದೇವೇಗೌಡರಿಗೆ ಅವರ ವಯಸ್ಸು ಸಹಕರಿಸುತ್ತಿಲ್ಲ. ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದು, ರಾಜ್ಯದಲ್ಲಿಯೇ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಲು ಸಮಯ ಸಿಗುತ್ತಿಲ್ಲ. ಜನರನ್ನು ಸೆಳೆದು, ಪಕ್ಷದ ಕಡೆಗೆ ಮತ ಪರಿವರ್ತಿಸಬಲ್ಲ ಮತ್ತೊಬ್ಬ ನಾಯಕ ಆ ಪಕ್ಷಕ್ಕೆ ಇಲ್ಲ.

ಶಿವಕುಮಾರ್ ಅವರು ಹಗಲು ರಾತ್ರಿ ಲೆಕ್ಕಿಸದೇ ಕೆಲಸ ಮಾಡುವ ಛಾತಿ ಹೊಂದಿದ್ದಾರೆ. ಮುಖ್ಯಮಂತ್ರಿಯಾಗಿ 2028ರಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವ ಮಹತ್ವದ ಹೊಣೆಗಾರಿಕೆ ಅವರ ಬೆನ್ನೇರಿದೆ. ಸಂಘಟನೆಗಾಗಿ ಎಂತಹ ಪಟ್ಟುಗಳನ್ನು ಹಾಕಬಲ್ಲ ಚಾಣಾಕ್ಷತೆ, ಹಣ ಬಲ, ಸರ್ಕಾರವೇ ಅವರ ಕೈಯಲ್ಲಿರುವುದರಿಂದ ಪಕ್ಷವನ್ನು ದುಡಿಸಿಕೊಳ್ಳಬಲ್ಲ ಶಕ್ತಿಯೂ ಅವರಿಗೆ ಸಹಜವಾಗಿಯೇ ಒದಗಲಿದೆ.

ಕುಮಾರಸ್ವಾಮಿ ಅವರಿಗೆ 2029ರವರೆಗೆ ಕೇಂದ್ರ ಸಚಿವರಾಗಿರುವ ಅವಕಾಶವೂ ಇದೆ. ‘ಅವರು ಕೇಂದ್ರದಲ್ಲಿದ್ದಾರೆ, ತಮಗೆ ಪೂರ್ಣಾವಧಿಗೆ ಅವಕಾಶ ಕೊಡಿ’ ಎಂದು ಶಿವಕುಮಾರ್ ಅವರು, ಒಕ್ಕಲಿಗ ಮತಬ್ಯಾಂಕ್ ಅನ್ನು ಸೆಳೆಯುವ ಸಾಧ್ಯತೆಯೂ ಇಲ್ಲದಿಲ್ಲ.

ರಾಜಕೀಯದಲ್ಲಿ ಇಂತಹ ಅನೇಕ ಸವಾಲುಗಳನ್ನು ಎದುರಿಸಿರುವ ದೇವೇಗೌಡರು, ಪ್ರತಿತಂತ್ರ ಹೆಣೆದು ಗೆದ್ದು ಬೀಗಿರುವ ನಿದರ್ಶನಗಳಿವೆ. ಅವರಿಗೆ ಮುಖಾಮುಖಿಯಾಗಿ ರಾಜಕೀಯದಲ್ಲಿ ಪಳಗುತ್ತಲೇ ಇರುವ ಶಿವಕುಮಾರ್, ಅದಕ್ಕೆ ಬೇಕಾದ ಕಾರ್ಯತಂತ್ರ ಹೊಸೆಯುವುದಿಲ್ಲ ಎಂದೂ ಹೇಳಲಾಗದು. ಇಂತಹ ಪರಿಸ್ಥಿತಿಯಲ್ಲಿ ಒಕ್ಕಲಿಗರ ಮತಗಳು ಎತ್ತ ಹೊರಳುತ್ತವೆ, ಈಗಿನ ಸವಾಲನ್ನು ಜೆಡಿಎಸ್ ಹೇಗೆ ನಿಭಾಯಿಸುತ್ತದೆ ಎಂಬುದು ಮಾತ್ರ ಸದ್ಯದ ಕುತೂಹಲ.

ಇಂದಿನಿಂದ ಶಾಲೆಗಳು ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ರಜೆ ಬಳಿಕ ಸೋಮವಾರದಿಂದ (ಜೂನ್ 1) ರಾಜ್ಯದಲ್ಲಿ ಶಾಲೆಗಳು ಪುನರಾರಂಭವಾಗಲಿದ್ದು, ಮಕ್ಕಳನ್ನು ಸ್ವಾಗತಿಸಲು ಶಾಲೆಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಹಾಗೂ ಶಿಕ್ಷಕರು ಸೇರಿ ಶಾಲೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಿದ್ದಾರೆ. ಎಲ್ಲ ಶಾಲೆಗಳಲ್ಲಿ ಮಕ್ಕಳಿಗೆ ಸಿಹಿ ನೀಡುವ ಮೂಲಕ ಅವರನ್ನು ಸ್ವಾಗತಿಸಲಾಗುತ್ತದೆ. ಪೋಷಕರು ಬಂದರೆ ಅವರಿಗೂ ಸಿಹಿ ನೀಡಲು ವ್ಯವಸ್ಥೆ ಮಾಡಲಾಗಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಿಂದ ಹಿಡಿದು ಕೆಳಹಂತದವರೆಗಿನ ಅಧಿಕಾರಿಗಳು ಸೋಮವಾರ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳನ್ನು ಸ್ವಾಗತಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಈ ಸಂಬಂಧ ಎಲ್ಲ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

‘ಅನಿರೀಕ್ಷಿತವಾಗಿ ಶಾಲೆಯೊಂದಕ್ಕೆ ಭೇಟಿ ನೀಡುತ್ತೇನೆ. ಇದು ಸೋಮವಾರಕ್ಕೆ ಅಷ್ಟೇ ಸೀಮಿತವಾಗುವುದಿಲ್ಲ. ಪ್ರತಿದಿನ ಕಚೇರಿಗೆ ತೆರಳುವ ಮೊದಲು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿ.ರಶ್ಮಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಕೆಪಿಎಸ್ ಶಾಲೆಗಳಲ್ಲಿ ಈ ಬಾರಿ ಶೇಕಡಾ 20ರಿಂದ 30ರಷ್ಟು ದಾಖಲಾತಿ ಹೆಚ್ಚಾಗುವ ನಿರೀಕ್ಷೆ ಇದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಗುಣಮಟ್ಟ ಹೆಚ್ಚಳಕ್ಕೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಶಿವಮೊಗ್ಗದಲ್ಲಿ ಕೆಪಿಎಸ್ ಶಾಲೆಯ ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯ ಕಾರಣ, ಸೋಮವಾರ ಈ ಕಾರ್ಯಕ್ರಮ ಇರುವುದಿಲ್ಲ. ಆದರೆ, ಎಲ್ಲ ಶಾಲೆಗಳಲ್ಲಿ ಮಕ್ಕಳನ್ನು ಸ್ವಾಗತಿಸುವ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಅವರು ತಿಳಿಸಿದರು.

‘ಅಧಿಕಾರ ಕೇಂದ್ರ’ವಾಗಿ ಬದಲಾದ ಡಿಕೆಶಿ ಮನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರದಲ್ಲಿರುವ ಡಿ.ಕೆ. ಶಿವಕುಮಾರ್ ಅವರ ಮನೆ ‘ಅಧಿಕಾರ ಕೇಂದ್ರ’ವಾಗಿ ಬದಲಾಗಿದೆ.

ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಹಲವು ಶಾಸಕರು, ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುತ್ತಲೇ ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ.

ಎಚ್.ಸಿ. ಮಹದೇವಪ್ಪ, ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ದಿನೇಶ್ ಗುಂಡೂರಾವ್, ಮಂಕಾಳ ವೈದ್ಯ, ಮಧು ಬಂಗಾರಪ್ಪ, ರಾಘವೇಂದ್ರ ಹಿಟ್ನಾಳ, ಬಿ.ಆರ್. ಪಾಟೀಲ, ತನ್ವೀರ್ ಸೇಠ್, ವಿಜಯಾನಂದ ಕಾಶಪ್ಪನವರ, ಅಜಯ್ ಸಿಂಗ್, ಪ್ರಕಾಶ್ ಕೋಳಿವಾಡ, ಭೀಮಣ್ಣ ನಾಯಕ್, ಭೀಮಸೇನ ಚಿಮ್ಮನಕಟ್ಟಿ, ಯತೀಂದ್ರ ಸಿದ್ದರಾಮಯ್ಯ, ಅನ್ನಪೂರ್ಣ ತುಕಾರಾಂ, ಸಂಸದರಾದ ತುಕಾರಾಂ, ಸುನಿಲ್ ಬೋಸ್, ಮತ್ತಿತರರು ಶಿವಕುಮಾರ್ ಅವರನ್ನು ಭಾನುವಾರ ಭೇಟಿ ಮಾಡಿ ಅಭಿನಂದಿಸಿದರು.

ಮನದಿಂಗಿತ ತೋಡಿಕೊಂಡ ಆಕಾಂಕ್ಷಿಗಳು: ಡಿ.ಕೆ. ಶಿವಕುಮಾರ್ ಅವರನ್ನು ಭಾನುವಾರ ಭೇಟಿಯಾದ ಕೆಲವು ಶಾಸಕರು ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

‘ಯಂಗ್‌ಸ್ಟರ್ ಮುಖ್ಯಮಂತ್ರಿ ಆಗುತ್ತಿದ್ದಾರೆ. ಒಳ್ಳೆಯ ಆಡಳಿತ ಕೊಡುತ್ತಾರೆ. ನಾವೆಲ್ಲಾ ಒಳ್ಳೆಯ ಸ್ನೇಹಿತರು, ಸಂಪುಟಕ್ಕೆ ಸೇರಿಸಿಕೊಳ್ಳುವ ವಿಶ್ವಾಸವಿದೆ. ಸೇರಿಸಿಕೊಳ್ಳದಿದ್ದರೂ ಕೆಲಸ ಮಾಡುತ್ತೇವೆ’ ಎಂದು ಅಶೋಕ ಪಟ್ಟಣ ಹೇಳಿದರು.

ಕಾಂಗ್ರೆಸ್ ಭವನ ನಿರ್ಮಾಣವಾಗಲಿರುವ ಸ್ಥಳವನ್ನು ಡಿ.ಕೆ. ಶಿವಕುಮಾರ್ ಅವರು ಭಾನುವಾರ ಪರಿಶೀಲಿಸಿದರು

‘ಈ ಬಾರಿಯ ಸಂಪುಟ ರಚನೆಯಲ್ಲಿ ಮೊದಲ, ಎರಡನೇ ಬಾರಿ ಗೆದ್ದ ಐವರಿಗೆ ಅವಕಾಶ ಕೊಡಬೇಕು. ಮೊದಲ ಬಾರಿಗೆ ಗೆದ್ದವರಿಗೆ ಅವಕಾಶ ಮಾಡಿಕೊಟ್ಟರೆ, ಯುವಕರಿಗೂ ಆದ್ಯತೆ ಕೊಟ್ಟಂತಾಗುತ್ತದೆ’ ಎಂದು ದರ್ಶನ್ ಧ್ರುವನಾರಾಯಣ್ ಹೇಳಿದರು.

‘ನಮ್ಮ ತಂದೆ ಧ್ರುವನಾರಾಯಣ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಪಕ್ಷಕ್ಕಾಗಿ ಜೀವ ಅರ್ಪಣೆ ಮಾಡಿದ್ದಾರೆ. ಅವರಿದ್ದಿದ್ದರೆ ಸಚಿವ ಸ್ಥಾನಕ್ಕೆ ಅರ್ಹವಾದ ವ್ಯಕ್ತಿ. ಅದನ್ನು ಶಿವಕುಮಾರ್ ಅವರೇ ಸದನದ ಒಳಗೆ ಹೇಳಿದ್ದಾರೆ’ ಎಂದರು.

‘ಸಂಪುಟ ಸೇರಬೇಕೆಂಬ ನಿರೀಕ್ಷೆ ಯಾರಿಗೆ ಇರುವುದಿಲ್ಲ. ನನಗೂ ಇದೆ. ಹೈಕಮಾಂಡ್ ಏನು ಹೇಳುತ್ತದೆಯೊ ಅದಕ್ಕೆ ನಾವು ಸರಿ ಎಂದು ಹೇಳುತ್ತೇವೆ. ಯಾರು ಸಚಿವ ಸಂಪುಟದಲ್ಲಿ ಇರುತ್ತಾರೆ ಎನ್ನುವುದು ಪಟ್ಟಿ ಬಂದಾಗಲೇ ಗೊತ್ತಾಗುವುದು’ ಎಂದು ಆರ್.ಬಿ. ತಿಮ್ಮಾಪುರ ಹೇಳಿದರು.

‘ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಇದೇ 3ಕ್ಕೆ’

ಬೆಂಗಳೂರು: ‘ಮುಖ್ಯಮಂತ್ರಿಯಾಗಿ ಜೂನ್ 3ರಂದು ಪ್ರಮಾಣ ವಚನ ಸ್ವೀಕರಿಸಿದ ನಂತರ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನಡೆಸುವ ಚಿಂತನೆಯಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, ‘ಈ ಕಾರ್ಯಕ್ರಮಕ್ಕೆ ಪಕ್ಷದ ಎಲ್ಲ ಬ್ಲಾಕ್ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರು, ಶಾಸಕರು, ಮಾಜಿ ಶಾಸಕರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು’ ಎಂದರು.

‘ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ’ ಎಂದರು.

‘ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಗಾಂಧಿ ಅವರಿಗೆ ಇನ್ನಷ್ಟೇ ನೀಡಬೇಕಿದೆ. ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಪಕ್ಷದ ಎಲ್ಲ ನಾಯಕರು ಹಾಗೂ ಪದಾಧಿಕಾರಿಗಳಿಗೆ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಸಾಧ್ಯವಾಗದ ಕಾರಣ, ಪಕ್ಷದ ಕಚೇರಿಯಲ್ಲಿ ಕಾರ್ಯಕ್ರಮ ವೀಕ್ಷಣೆಗೆ ಎಲ್‌ಇಡಿ ಪರದೆ ಅಳವಡಿಸಲಾಗುವುದು’ ಎಂದರು.

ನೂರು ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆ ಬಗ್ಗೆ ಕೇಳಿದಾಗ, ‘ಅದನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು’ ಎಂದರು.

ದೇವೇಗೌಡ ಹೆಸರು ಮುಂಚೂಣಿಗೆ

ರಾಜ್ಯಸಭೆ: ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗಾಗಿ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸಭೆ ಭಾನುವಾರ ನಡೆದಿದ್ದು, ಎರಡು–ಮೂರು ದಿನಗಳಲ್ಲಿ ಪಟ್ಟಿ ಪ್ರಕಟವಾಗಲಿದೆ.

‘ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಘಟಕದ ಬಿಜೆಪಿ ನಾಯಕರು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಇರಿಸಿದ್ದಾರೆ. ಎಚ್.ಡಿ. ದೇವೇಗೌಡ ಮತ್ತು ಡಿ.ವಿ. ಸದಾನಂದಗೌಡ ಅವರ ಹೆಸರನ್ನು ಪ್ರಸ್ತಾಪಿಸಿದ್ದಾರೆ’ ಎಂದು ಗೊತ್ತಾಗಿದೆ.

‘ಮೈತ್ರಿಯ ಕಾರಣಕ್ಕಾಗಿ ಜೆಡಿಎಸ್‌ನ ಎಚ್.ಡಿ.ದೇವೇಗೌಡ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸುವ ಬಗ್ಗೆ ಬಿಜೆಪಿ ವರಿಷ್ಠರು ಒಲವು ತೋರಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ದೇವೇಗೌಡ ಅವರನ್ನು ಕರ್ನಾಟಕದಿಂದ ಚುನಾಯಿಸುವ ಬಗ್ಗೆ ಬಿಜೆಪಿ ರಾಜ್ಯ ಘಟಕದ ನಾಯಕರು ಆಕ್ಷೇಪ ಎತ್ತಿದ್ದರು. ಅವರನ್ನು ಮಹಾರಾಷ್ಟ್ರದಿಂದ ಕಣಕ್ಕೆ ಇಳಿಸಿ ಎಂಬ ಪ್ರಸ್ತಾವವನ್ನು ರಾಜ್ಯ ನಾಯಕರು ವರಿಷ್ಠರ ಮುಂದೆ ಇರಿಸಿದ್ದರು. ಈ ಬಗ್ಗೆ ದೇವೇಗೌಡರ ಜತೆಗೂ ವರಿಷ್ಠರು ಚರ್ಚಿಸಿದ್ದು, ಮಹಾರಾಷ್ಟ್ರದಿಂದ ಕಣಕ್ಕೆ ಇಳಿಯಲು ಅವರು ನಿರಾಕರಿಸಿದ್ದಾರೆ. ಈ ವಿಷಯವೂ ಸಭೆಯಲ್ಲಿ ಚರ್ಚೆಯಾಗಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಎಚ್.ಡಿ ದೇವೇಗೌಡ

ಸದಾನಂದ ಗೌಡ

‘ದೇವೇಗೌಡ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿಸುವ ಬಗ್ಗೆ ಡಿ.ವಿ. ಸದಾನಂದಗೌಡ ಅವರು ಆಕ್ಷೇಪ ಎತ್ತಿದ್ದು, ರಾಜ್ಯದಿಂದ ತಮ್ಮನ್ನೇ ಚುನಾಯಿಸಬೇಕು ಎಂದು ಒತ್ತಾಯಿಸಿದ್ದಾರೆ. ಬೆಂಗಳೂರಿನಲ್ಲಿ ಹಿಂದಿನ ವಾರ ನಡೆದ ಪಕ್ಷದ ಪ್ರಮುಖರ ಸಮಿತಿ ಸಭೆಯಲ್ಲೂ ಸದಾನಂದಗೌಡ ಅವರು ಇದನ್ನೇ ಪ್ರತಿಪಾದಿಸಿದ್ದರು. ರಾಜ್ಯ ನಾಯಕರು ಈ ಎಲ್ಲ ಅಂಶವನ್ನು ವರಿಷ್ಠರ ಗಮನಕ್ಕೆ ತಂದಿದ್ದಾರೆ. ಚುನಾವಣೆಗೆ ಅಧಿಸೂಚನೆ ಪ್ರಕಟವಾದ ನಂತರ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ’ ಎಂದು ಖಚಿತಪಡಿಸಿವೆ.

ಪರಿಷತ್ತು: ಎಂಟು ಜನರ ಹೆಸರು

ರಾಜ್ಯ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಆಯ್ಕೆಯಾಗುವುದು ಖಚಿತ. ಆದರೆ, ರಾಜ್ಯ ನಾಯಕರು ಎಂಟು ಜನರ ಹೆಸರನ್ನು ಪರಿಗಣಿಸುವಂತೆ ವರಿಷ್ಠರಿಗೆ ಪಟ್ಟಿ ಸಲ್ಲಿಸಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಇಬ್ಬರು ಮಹಿಳೆಯರು ಮತ್ತು ಲಿಂಗಾಯತ, ಒಕ್ಕಲಿಗ ಸಮುದಾಯದ ನಾಯಕರೂ ಸೇರಿ ಜಾತಿ ಸಮೀಕರಣದ ಆಧಾರದಲ್ಲಿ ಆರು ಅಭ್ಯರ್ಥಿಗಳ ಪಟ್ಟಿಯನ್ನು ನೀಡಿದ್ದಾರೆ. ಅವುಗಳಲ್ಲಿ ಎರಡು ಹೆಸರನ್ನು ವರಿಷ್ಠರು ಅಂತಿಮಗೊಳಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಲಪಾಡ್‌ಗೆ ಇ.ಡಿ ಸಮನ್ಸ್

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮ ವಹಿವಾಟು ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಯುವ ನಾಯಕ ಮೊಹಮ್ಮದ್ ನಲಪಾಡ್ ಅವರಿಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸಮನ್ಸ್ ನೀಡಿದ್ದಾರೆ.

ಮೊಹಮ್ಮದ್ ನಲಪಾಡ್

ಈ ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ, ಮೊಹಮ್ಮದ್ ನಲಪಾಡ್ ಮತ್ತು ಇತರರ ಮನೆಗಳಲ್ಲಿ ಈಚೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ನಡೆಸಿದ್ದರು. ಇಬ್ಬರ ಮಧ್ಯೆಯೂ ದೀರ್ಘಕಾಲದಿಂದ ಹಣಕಾಸು ವ್ಯವಹಾರ ಇದ್ದದ್ದು ಶೋಧದ ವೇಳೆ ಪತ್ತೆಯಾಗಿತ್ತು.

ಶ್ರೀಕಿಯನ್ನು ಈಚೆಗೆ ಬಂಧಿಸಿ, ಕಸ್ಟಡಿಗೆ ಪಡೆದಿದ್ದರು. ಮೇ 29ರ ಶುಕ್ರವಾರವೇ ವಿಚಾರಣೆಗೆ ಬರುವಂತೆ ಮೊಹಮ್ಮದ್ ಅವರಿಗೆ ಸಮನ್ಸ್ ನೀಡಲಾಗಿತ್ತು. ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳ ಕಾರಣಕ್ಕೆ ಮೊಹಮ್ಮದ್ ಅವರು ತುಸು ಸಮಯ ಕೇಳಿದ್ದರು. ಹೀಗಾಗಿ ಸೋಮವಾರ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜೂನ್ 3ಕ್ಕೆ 10 ಸಚಿವರ ಪ್ರಮಾಣವಚನ ಸಂಭವ

ಸಚಿವಗಿರಿಗೆ ಮಾನದಂಡವೇನು?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪಕ್ಷ ನಿಷ್ಠ ಹೊಸ ಮುಖಗಳಿಗೆ ಮಣೆ
- ಯತೀಂದ್ರ ಸಂಪುಟ ಸೇರುವುದು ಬಹುತೇಕ ಖಚಿತ

ಬೆಂಗಳೂರು: ಡಿ.ಕೆ. ಶಿವಕುಮಾರ್ ನೇತೃತ್ವದ ನೂತನ ಕಾಂಗ್ರೆಸ್ ಸರ್ಕಾರದಲ್ಲಿ 60ರ ವಯಸ್ಸಿನ ಒಳಗಿನ ಪಕ್ಷ ನಿಷ್ಠರಿಗೆ ಹೆಚ್ಚಿನ ಅವಕಾಶ ಸಿಗುವ ಸಂಭವ ಇದೆ.

ಮುಂದಿನ ಎರಡು ವರ್ಷ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿಯಲಿರುವ ಶಿವಕುಮಾರ್, ಲೋಕಭವನದಲ್ಲಿ ಜೂನ್ 3ರಂದು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅವರ ಜೊತೆಗೆ 8 ರಿಂದ 10 ಶಾಸಕರು ಸಚಿವರಾಗಿ ಪ್ರಮಾಣವಚನ ತೆಗೆದುಕೊಳ್ಳುವ ಸಾಧ್ಯತೆಯಿದೆ. ಈಗ ಮತ್ತು ಮುಂದಿನ ದಿನಗಳಲ್ಲಿ ನಡೆಯುವ ವಿಸ್ತರಣೆಯೂ ಸೇರಿ, ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸುಮಾರು 13-14 ಸಚಿವರು ಹೊಸ ಸಂಪುಟದಲ್ಲಿ ಸ್ಥಾನ ಪಡೆಯಬಹುದು. ಈ ಪೈಕಿ, ಕೆಲವರು ಸಿದ್ದರಾಮಯ್ಯ ಕೋಟಾದಡಿ, ಇನ್ನೂ ಕೆಲವರು ಹೈಕಮಾಂಡ್ ಕೋಟಾದಡಿ ಮರಳಿ ಸಂಪುಟ ಸೇರಬಹುದು ಎಂದು ಹೇಳಲಾಗುತ್ತಿದೆ. ಉಳಿದಂತೆ, ನಿಗದಿಪಡಿಸಿದ ಮಾನದಂಡಗಳನ್ನು ಪರಿಗಣಿಸಿ ಹೊಸ ಮುಖಗಳಿಗೆ ಹೈಕಮಾಂಡ್ ಮಣೆ ಹಾಕಬಹುದೆಂಬ ಚರ್ಚೆ ನಡೆಯುತ್ತಿದೆ.

ಎರಡಕ್ಕೂ ಹೆಚ್ಚು ಬಾರಿ ಆಯ್ಕೆಯಾದ, 60ರ ವಯಸ್ಸಿನ ಒಳಗಿನ, ಪಕ್ಷ ನಿಷ್ಠ ಹಾಗೂ 2028ರ ಚುನಾವಣೆಗೆ ಸಂಘಟನೆಯನ್ನು ಹುರಿಗೊಳಿಸಬಲ್ಲ ಹೊಸಬರಿಗೆ ನೂತನ ಸಂಪುಟದಲ್ಲಿ ಅವಕಾಶ ತೆರೆದುಕೊಳ್ಳುವ ಸಂಭವ ಇದೆ.

ಆಕಾಂಕ್ಷಿ ಹೊಸಬರ ಪಟ್ಟಿ ದೊಡ್ಡದಿದ್ದು, ತೀವ್ರ ಪೈಪೋಟಿ ಏರ್ಪಟ್ಟಿದೆ. ಚರ್ಚೆಯಲ್ಲಿರುವ ಹೊಸ ಮುಖಗಳಲ್ಲಿ ಹೆಚ್ಚಿನವರು ಶಿವಕುಮಾರ್ ಬಣದವರು ಎಂದು ಹೇಳಲಾಗುತ್ತಿದೆ. ಕೆಲವರು ಹೈಕಮಾಂಡ್ ಮಟ್ಟದಲ್ಲಿ, ಮತ್ತೆ ಕೆಲವರು ಸಿದ್ದರಾಮಯ್ಯ ಮಟ್ಟದಲ್ಲಿ ಲಾಬಿ ನಡೆಸುತ್ತಿದ್ದಾರೆ. ಆದರೆ, ಸಿದ್ದರಾಮಯ್ಯ ಸಂಪುಟದಲ್ಲಿ ಕಳಪೆ ಸಾಧನೆ ತೋರಿಸಿದ ಸಚಿವರಿಗೆ ಸ್ಥಾನ ಕೈ ತಪ್ಪುವುದು ಬಹುತೇಕ ಖಚಿತ ಎಂಬ ಮಾತು ಕಾಂಗ್ರೆಸ್ ಪಾಳಯದಲ್ಲಿ ಇದೆ. ಉತ್ತಮ ಸಾಧನೆ, ಜಾತಿವಾರು, ಪ್ರದೇಶವಾರು ಅಂಶಗಳನ್ನು ಪರಿಗಣಿಸಿ ಕೆಲವು ಮಾಜಿಗಳಿಗೆ ಮತ್ತೆ ಸ್ಥಾನ ಸಿಗಬಹುದು ಎನ್ನಲಾಗಿದೆ.

ಜಿ. ಪರಮೇಶ್ವರ, ಎಂ.ಬಿ. ಪಾಟೀಲ, ಜಮೀರ್ ಅಹಮದ್ ಖಾನ್, ಕೃಷ್ಣ ಬೈರೇಗೌಡ, ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಎಚ್.ಕೆ. ಪಾಟೀಲ, ಸತೀಶ ಜಾರಕಿಹೊಳಿ, ಶಿವರಾಜ್ ತಂಗಡಗಿ, ರಾಮಲಿಂಗಾ ರೆಡ್ಡಿ, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್, ಎಂ. ಸಿ. ಸುಧಾಕರ್, ಬೈರತಿ ಸುರೇಶ್ ಈ ಪೈಕಿ ಕೆಲವರಿಗೆ ಶಿವಕುಮಾರ್ ಸಂಪುಟದಲ್ಲಿ ಸ್ಥಾನ ಸಿಗುವುದು ಬಹುತೇಕ ಖಚಿತ.

ಹೊಸಬರ ಪೈಕಿ ವಿಧಾನ ಪರಿಷತ್ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ ಸಂಪುಟ ಸೇರುವುದು ಬಹುತೇಕ ನಿರ್ಧರಿತ. ಉಳಿದಂತೆ, ಪರಿಷತ್‌ನಿಂದ ಸಲೀಂ ಅಹಮದ್, ಶಾಸಕರಾದ ಟಿ.ಬಿ. ಜಯಚಂದ್ರ, ಯು.ಟಿ. ಖಾದರ್, ಲಕ್ಷ್ಮಣ್ ಸವದಿ, ಎನ್.ಎ. ಹ್ಯಾರಿಸ್, ಮಾಗಡಿ ಬಾಲಕೃಷ್ಣ, ಕೆ. ಷಡಕ್ಷರಿ, ಗುಬ್ಬಿ ಶ್ರೀನಿವಾಸ್, ರಾಘವೇಂದ್ರ ಹಿಟ್ನಾಳ್, ಅಶೋಕ್ ಪಟ್ಟಣ, ತನ್ವೀರ್ ಸೇಠ್, ಪಿ.ಎಂ. ನರೇಂದ್ರ ಸ್ವಾಮಿ, ರೂಪಾ ಶಶಿಧರ್, ಬೇಳೂರು ಗೋಪಾಲಕೃಷ್ಣ ಪೈಕಿ ಕೆಲವು ಹೊಸ ಮುಖಗಳು ಸಂಪುಟದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ.

ಬೆಳ್ತಂಗಡಿಯ 'ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್' ಲೋಕಾರ್ಪಣೆಗೊಳಿಸಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

‘ಮತಾಂತರ ಇರುವಲ್ಲಿ ಸಾಮರಸ್ಯಕ್ಕೆ ಅವಕಾಶ ಇಲ್ಲ’

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ‘ಮತಾಂತರ ಸಂಘರ್ಷವನ್ನು ಸೃಷ್ಟಿಸುತ್ತದೆ. ಮತಾಂತರ ಇರುವಲ್ಲಿ ಸಾಮರಸ್ಯಕ್ಕೆ ಅವಕಾಶ ಇಲ್ಲ. ಧರ್ಮಗಳ ನಡುವೆ ಸಾಮರಸ್ಯ ಕಾಪಾಡಬೇಕಾದರೆ ಧಾರ್ಮಿಕ ಮತಾಂತರಕ್ಕೆ ಪೂರ್ಣ ವಿರಾಮ ಹಾಕಬೇಕು’ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಶ್ರೀಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ ಬೆಳ್ತಂಗಡಿಯಲ್ಲಿ ನಿರ್ಮಿಸಿರುವ ‘ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್’ ಅನ್ನು ಭಾನುವಾರ ಧರ್ಮಸ್ಥಳದಲ್ಲಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್’ ಲೋಕಾರ್ಪಣೆ ಸಲುವಾಗಿ ಧರ್ಮಸ್ಥಳದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸಿರಿ ಕೈಪಿಡಿಯನ್ನು ಬಿಡುಗಡೆ ಮಾಡಿದರು ಚಿತ್ರ: ಫಕ್ರುದ್ದೀನ್ ಎಚ್

‘ಹಿಂದೂಗಳು ಬೇರೆ ಧರ್ಮವನ್ನು ದ್ವೇಷಿಸುವುದನ್ನು ನೋಡಿಲ್ಲ. ನಾವು ಎಲ್ಲ ಧರ್ಮಗಳನ್ನು ಗೌರವದಿಂದ ಕಾಣುತ್ತೇವೆ. ಆದರೆ, ಮತಾಂತರವನ್ನು ವಿರೋಧಿಸುತ್ತೇವೆ. 21ನೇ ಶತಮಾನದಲ್ಲೂ ಮತಾಂತರದ ಔಚಿತ್ಯ ಇದೆಯೇ ಎಂದು ಯೋಚಿಸಬೇಕು’ ಎಂದರು.

‘ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ವಿ. ಹೆಗ್ಗಡೆಯವರ ಸಾಮಾಜಿಕ ಕಳಕಳಿಯಿಂದ ಗ್ರಾಮೀಣ ಮಹಿಳೆಯರ ಸಬಲೀಕರಣ ಸಾಧ್ಯವಾಗಿದೆ. ಮಹಿಳಾ ಸ್ವಾವಲಂಬನೆ ಮತ್ತು ಆತ್ಮಗೌರವದ ಪ್ರತೀಕವಾದ ಲಾಭರಹಿತ ಸಂಸ್ಥೆ ‘ಸಿರಿ’ ಸಮೃದ್ಧಿಯ ಸಂಕೇತ’ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಸಂಸದ ಕ್ಯಾ.ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ‘ಸಿರಿ’ಯ ಸಂಸ್ಥಾಪಕಿ ಹೇಮಾವತಿ ವಿ. ಹೆಗ್ಗಡೆ, ಎಸ್‌ಡಿಎಂ ಸೊಸೈಟಿ ಉಪಾಧ್ಯಕ್ಷ ಸುರೇಂದ್ರ ಕುಮಾರ್, ‘ಸಿರಿ’ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಜನಾರ್ದನ ಭಾಗವಹಿಸಿದ್ದರು.

7 ಎಕರೆಯಲ್ಲಿ ಕೈಗಾರಿಕಾ ಪಾರ್ಕ್

ಬೆಳ್ತಂಗಡಿಯ ರೆಂಕೆದಗುತ್ತುವಿನ 7 ಎಕರೆ ಪ್ರದೇಶದ 1.5 ಲಕ್ಷ ಚದರ ಅಡಿ ಜಾಗದಲ್ಲಿ ₹71 ಕೋಟಿ ಮೊತ್ತದಲ್ಲಿ ಸುಸಜ್ಜಿತ ಸಿರಿ ಮಾತೃಶ್ರೀ ಕೈಗಾರಿಕಾ ಪಾರ್ಕ್ ನಿರ್ಮಾಣವಾಗಿದೆ.

‘ವಿವಿಧ ಆಹಾರೋತ್ಪನ್ನ, ಸಿರಿಧಾನ್ಯ ಉತ್ಪನ್ನ, ಜವಳಿ, ಅಗರಬತ್ತಿ, ರೆಕ್ಸಿನ್ ಪರಿಕರ ಮತ್ತಿತರ ಸಾಮಗ್ರಿಗಳು ಇಲ್ಲಿ ತಯಾರಾಗುತ್ತವೆ. ಗುಣಮಟ್ಟಕ್ಕೆ, ಸ್ವಚ್ಛತೆಗೆ ಆದ್ಯತೆ ನೀಡಲು ಆಧುನಿಕ ಉಪಕರಣ ಅಳವಡಿಸಲಾಗಿದೆ’ ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಶೇ 63.98ರಷ್ಟು ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಶನಿವಾರ ಪ್ರಕಟಿಸಿದ್ದು, ಶೇ 62.98ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಪರೀಕ್ಷೆ–1ರಲ್ಲಿ ಶೇ 94.10ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ವರ್ಷ ಪರೀಕ್ಷೆ–1 ಮತ್ತು ಪರೀಕ್ಷೆ–2ರಲ್ಲಿ ಒಟ್ಟಾರೆ ಶೇ 98.08ರಷ್ಟು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕ್ರೋಢೀಕೃತ ಉತ್ತೀರ್ಣ ಪ್ರಮಾಣ ಶೇ 18.04ರಷ್ಟು ಹೆಚ್ಚಾಗಿದೆ. ಕಳೆದ ವರ್ಷ ಒಟ್ಟಾರೆ ಫಲಿತಾಂಶ ಶೇ 80.04ರಷ್ಟು ಇತ್ತು.

ಪರೀಕ್ಷೆ–2ಕ್ಕೆ 49,351 ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪೈಕಿ 31,080 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಇನ್ನಷ್ಟು ಉತ್ತಮ ಫಲಿತಾಂಶ ಪಡೆಯುವ ಉದ್ದೇಶದಿಂದ 11,854 ರೆಗ್ಯೂಲರ್ ವಿದ್ಯಾರ್ಥಿಗಳು ಹಾಗೂ 38 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ–2ಕ್ಕೆ ಹಾಜರಾಗಿದ್ದರು. ಈ ಪೈಕಿ 8,393 ವಿದ್ಯಾರ್ಥಿಗಳ (ಶೇ 70.57) ಫಲಿತಾಂಶದಲ್ಲಿ ಸುಧಾರಣೆ ಕಂಡುಬಂದಿದೆ.

ಐವರು ವಿದ್ಯಾರ್ಥಿಗಳು ಶೇ 100ರಷ್ಟು ಅಂಕ ಪಡೆದಿದ್ದಾರೆ. ಇದರಲ್ಲಿ ಒಬ್ಬರು ಸರ್ಕಾರಿ ಶಾಲೆಯ ವಿದ್ಯಾರ್ಥಿಯಾಗಿದ್ದು, ಉಳಿದ ನಾಲ್ವರು ಖಾಸಗಿ ಶಾಲೆಯ ವಿದ್ಯಾರ್ಥಿಗಳಾಗಿದ್ದಾರೆ. 136 ವಿದ್ಯಾರ್ಥಿಗಳು ಪ್ರಥಮ ಭಾಷೆಯಲ್ಲಿ, 76 ವಿದ್ಯಾರ್ಥಿಗಳು ದ್ವಿತೀಯ ಭಾಷೆಯಲ್ಲಿ ಹಾಗೂ 144 ವಿದ್ಯಾರ್ಥಿಗಳು ತೃತೀಯ ಭಾಷೆಯಲ್ಲಿ ಶೇ 100ರಷ್ಟು ಅಂಕ ಪಡೆದಿದ್ದಾರೆ. ಇದಲ್ಲದೆ ಗಣಿತದಲ್ಲಿ 52 ವಿದ್ಯಾರ್ಥಿಗಳು, ವಿಜ್ಞಾನದಲ್ಲಿ 126 ಹಾಗೂ ಸಮಾಜ ವಿಜ್ಞಾನದಲ್ಲಿ 68 ವಿದ್ಯಾರ್ಥಿಗಳು ಶೇ 100ರಷ್ಟು ಅಂಕಗಳನ್ನು ಪಡೆದಿದ್ದಾರೆ.

ಹಾಜರಾತಿ ಕೊರತೆಯಿಂದ ಪರೀಕ್ಷೆ–1ಕ್ಕೆ ಹಾಜರಾಗಲು ಸಾಧ್ಯವಾಗದ 7,649 ವಿದ್ಯಾರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆ–2ಕ್ಕೆ ಹಾಜರಾಗಿದ್ದರು. ಈ ಪೈಕಿ 603 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಸೋಮವಾರ • ಜೂನ್ 1, 20
ಪ್ರಜಾವಾಣಿ

ನದಿಗೆ ತ

ವಾಹನಗಳ ಮಾ
ಭೂ ಮಾಲೀಕರ ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯದ ಕಾಡುಗೋಡಿಯಲ್ಲಿ ಘನತ್ಯಾಜ್ಯವನ್ನು ಅಕ್ರಮವಾಗಿ ಸಾಗಿಸಿ ಖಾಲಿ ಜಾಗಗಳಲ್ಲಿ ಸುರಿಯುತ್ತಿದ್ದ 6 ವಾಹನಗಳನ್ನು ಪಾಲಿಕೆ ಅಧಿಕಾರಿಗಳು ವಶಪಡಿಸಿಕೊಂಡಿದ್ದು ಎಫ್‌ಐಆರ್ ದಾಖಲಿಸಿದ್ದಾರೆ.

ಕಾಡುಗೋಡಿ ವ್ಯಾಪ್ತಿಯ ಸಿದ್ಧಾರ್ಥ ಲೇಔಟ್ ಸಮೀಪದ ಸರ್ವೆ ನಂ.130, 131 ಹಾಗೂ 142ಕ್ಕೆ ಹೊಂದಿಕೊಂಡಿರುವ ದಕ್ಷಿಣ ಪಿನಾಕಿನಿ ನದಿಗೆ ತ್ಯಾಜ್ಯ ಸುರಿಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿತ್ತು. ಈ ಬಗ್ಗೆ ನಿಗಾ ಇಟ್ಟ ಅಧಿಕಾರಿಗಳು ಮೇ 29ರಂದು ಐದು ವಾಹನಗಳನ್ನು ಹಾಗೂ ಮೇ 30ರಂದು ಒಂದು ವಾಹನವನ್ನು ವಶಕ್ಕೆ ಪಡೆದರು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಮಾಹಿತಿ ನೀಡಿದರು.

ವಿವಿಧ ಪ್ರದೇಶಗಳ ವಾಣಿಜ್ಯ ಮತ್ತು

ಅಂತರರಾಷ್ಟ್ರೀಯ ಫೋಟೊ, ವಿಡಿಯೊ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಡಿಯೊ ಮತ್ತು ಫೋಟೊ ಅಸೋಸಿಯೇಷನ್ ವತಿಯಿಂದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಜೂನ್ 12ರಿಂದ ಮೂರು ದಿನ ಅಂತರರಾಷ್ಟ್ರೀಯ ಮಟ್ಟದ ಫೋಟೊ ಮತ್ತು ವಿಡಿಯೊ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ.

‘ಕ್ಯಾಮೆರಾ ಆಲ್ಬಮ್, ಸಾಫ್ಟ್‌ವೇರ್ ಪ್ರಿಂಟರ್ ಪ್ರೇಮ್, ಲ್ಯಾಮಿನೇಶನ್ ಸೇರಿದಂತೆ ಛಾಯಾಗ್ರಹಣ ಕ್ಷೇತ್ರದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ 150ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. 5,000ಕ್ಕೂ ಹೆಚ್ಚು ಛಾಯಾಗ್ರಹಣ ಉಪಕರಣಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ’ ಎಂದು ಸಂಘದ ಅಧ್ಯಕ್ಷ ಹೆಚ್.ವಿ.ಕೃಷ್ಣಪ್ಪ, ಕಾರ್ಯದರ್ಶಿ ಎ.ಜಗದೀಶ್ ತಿಳಿಸಿದ್ದಾರೆ.

ವಸ್ತು ಪ್ರದರ್ಶನದಲ್ಲಿ ಉಚಿತ ಕ್ಯಾಮೆರಾ ಸರ್ವೀಸ್, ಕಾರ್ಯಾಗಾರ, ಕಣ್ಣಿನ ತಪಾಸಣೆ, ಮಾಡೆಲಿಂಗ್ ಫೋಟೊಗ್ರಫಿ ಹಾಗೂ ಫ್ಯಾಶನ್ ಶೋ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಶಾಲೆ ಶುರುವಾಗಿದೆ. ಕನಸುಕಂಗಳ ಕಂದಮ್ಮಗಳ ಅರಿವಿನ ಬಂಡಿ ಎಳೆಯುವಲ್ಲಿ ಪೋಷಕರ ಪಾತ್ರವನ್ನು ಮನಗಾಣಿಸುತ್ತದೆ ಶಿಕ್ಷಕರೊಬ್ಬರ ಈ ಬಹಿರಂಗ ಪತ್ರ.

ಮಗುವಿನ ಕಲಿಕೆಗೆ ಸಂಬಂಧಿಸಿದಂತೆ ಶಿಕ್ಷಕರನ್ನು ಪ್ರಶ್ನಿಸುವ ಹಕ್ಕು ಪೋಷಕರಿಗೆ ಇದೆ. ಅವರ ಸಲಹೆಗಳನ್ನೂ ಶಿಕ್ಷಕರು ಎದುರು ನೋಡುತ್ತಿರುತ್ತಾರೆ.

ಪ್ರಿಯ ಪೋಷಕರೆ, ಗಮನಿಸಿ

• ಸದಾಶಿವ ಸೊರಟೂರು

ನಮಸ್ತೆ,

ನಿಮ್ಮ ಮಗು ಬೇಸಿಗೆ ರಜೆ ಮುಗಿಸಿ ಬಂದು ಅಥವಾ ಪುಟ್ಟ ಮಗುವಾಗಿದ್ದರೆ ಇದೇ ಮೊದಲ ಬಾರಿ ಶಾಲೆಯ ತರಗತಿಯಲ್ಲಿ ಕೂತಿದೆ. ಸಣ್ಣ ಮಟ್ಟದ ಗಾಬರಿ, ಭಯದಿಂದ ಮುದುಡಿದೆ. ಕಣ್ಣುಗಳಲ್ಲಿ ಹೊಸ ಜಗತ್ತೊಂದು ಅಂಬೆಗಾಲಿಡುತ್ತಿದೆ. ಅದರ ಪಾಲಿಗೆ ಇನ್ನುಮುಂದೆ ಎರಡು ಜಗತ್ತು. ಒಂದು ಮನೆ, ಇನ್ನೊಂದು ಶಾಲೆ. ಒಂದರಲ್ಲಿ ನೀವು ಇರುತ್ತೀರಿ, ಇನ್ನೊಂದರಲ್ಲಿ ನಾವು. ಇಬ್ಬರೂ ಸೇರಿ ಎಳೆಯಬೇಕು ಮಗುವಿನ ಬದುಕಿನ ತೇರು.

ಮಗು ಶಾಲೆಗೆ ಹೊರಟಾಯಿತು, ಅಲ್ಲಿಗೆ ನನ್ನ ಜವಾಬ್ದಾರಿ ಮುಗಿಯಿತು ಎಂದು ನೀವು ಭಾವಿಸಬಾರದು. ಅಸಲಿಗೆ ನಿಮ್ಮ ಜವಾಬ್ದಾರಿ ಇಂದಿನಿಂದ ಹೆಚ್ಚಾಗಿದೆ. ನಿಮ್ಮ ಮಗು ಈಗ ಸಮಾಜಕ್ಕೆ ತೆರೆದುಕೊಂಡಿದೆ. ಸಮಾಜವು ಒಡ್ಡುವ ಎಲ್ಲಾ ಸವಾಲುಗಳನ್ನು ಅದು ಎದುರಿಸಬೇಕಾಗಿದೆ. ಅದಕ್ಕಾಗಿ ನೀವು, ನಾವು ಇಬ್ಬರೂ ಅದರ ಜೊತೆಯಿರಬೇಕು.

ನಿಮ್ಮ ಮಗುವಿನಲ್ಲಿ ಕನಸು ಬಿತ್ತಿ. ಆದರೆ ಅದನ್ನೇ ನೆಪವಾಗಿಟ್ಟು ಮಗುವಿನ ಮೇಲೆ ಒತ್ತಡ ಹೇರಬೇಡಿ, ಅಂಕಗಳ ಹುಚ್ಚು ಹಿಡಿಸಬೇಡಿ. ನಮ್ಮ ಪುಸ್ತಕದೊಳಗಿನ ಪಾಠಗಳು ಬದುಕು ಮುಖ್ಯ ಎಂದು ಹೇಳುತ್ತವೆ, ನೀವು ಅಂಕ ಮುಖ್ಯ ಅನ್ನುತ್ತೀರಿ. ಕೊನೆಯವರೆಗೂ ಮಗು ಈ ದ್ವಂದ್ವದಲ್ಲೇ ಒದ್ದಾಡುತ್ತದೆ. ನಿಮ್ಮ ಮಕ್ಕಳ ಗುರಿಯನ್ನು ನೀವೇ ನಿರ್ಧರಿಸಬೇಡಿ. ಹರಿಯುವ ನೀರು ತನ್ನ ದಾರಿ ಹುಡುಕಿಕೊಳ್ಳುವಂತೆ ಅವರು ಬೆಳೆಯುತ್ತಾ ತಮ್ಮ ಗುರಿಯನ್ನು ತಾವೇ ಕಂಡುಕೊಳ್ಳುತ್ತಾರೆ. ನೀವು ಪ್ರೋತ್ಸಾಹಿಸಿ. ಶಿಕ್ಷಕರೂ ಆ ದಿಸೆಯಲ್ಲೇ ದಾರಿ ತೋರಿಸುತ್ತಾರೆ, ಅವರನ್ನು ಗೌರವಿಸಿ. ನಿಮ್ಮ ಕಪಟತನ ಮಕ್ಕಳನ್ನು ಖಂಡಿತ ದಾರಿ ತಪ್ಪಿಸುತ್ತದೆ. ಮಕ್ಕಳು ಹೇಗಿರಬೇಕು ಎಂದು ಬಯಸುವಿರೋ ನೀವೂ ಹಾಗೆಯೇ ಇರಿ.

ನೆನಪಿರಲಿ, ಮಕ್ಕಳಷ್ಟೇ ಬೆಳೆಯುವುದಿಲ್ಲ, ಅದರೊಂದಿಗೆ ತಂದೆ-ತಾಯಿ ಕೂಡ. ನಿಮ್ಮ ಬೆಳವಣಿಗೆ ನಿಂತ ದಿನ ಅವರಾದರೂ ಹೇಗೆ ಬೆಳೆದಾರು? ನೀವು ಮಗುವಿಗೆ ಕೊಡುವ ಮತ್ತು ಕೊಡಿಸುವ ಶಿಕ್ಷಣ ಎಂತಹದ್ದು ಅನ್ನುವುದರ ಮೇಲೆ ಅದರ ಬಾಳು ನಿರ್ಧಾರವಾಗುತ್ತದೆ.

ನಿಮ್ಮ ಮಗುವಿನ ಗೆಳೆಯರ ಕೂಟದ ಬಗ್ಗೆ ಒಂದು ಕಣ್ಣಿರಲಿ. ಅಂದಿನ ಓದನ್ನು ಅಂದೇ ಮುಗಿಸುವಂತೆ ನೋಡಿಕೊಳ್ಳಿ. ಸಮಗ್ರ ವ್ಯಕ್ತಿತ್ವ ರೂಪಿಸುವಿಕೆಗೆ ಬೇಕಾದ ಶಾಲಾ ಚಟುವಟಿಕೆಗಳಲ್ಲಿ ಮಗು ಭಾಗವಹಿಸುವಂತಾಗಲು ನಿಮ್ಮ ಸಹಕಾರ ಅಗತ್ಯ.

ನಾವೀಗ ಗುರುಗಳಲ್ಲ ಬರೀ ಮೇಷ್ಟ್ರುಗಳು. ನಾವು ಒಂದು ಮಿತಿಯಲ್ಲಿ ಬೋಧಿಸಬೇಕಿದೆ. ದಿನೇದಿನೇ ಸಮಾಜದಲ್ಲಿ ಆಗುತ್ತಿರುವ ನೈತಿಕ ಅಧಃಪತನದಿಂದ ಮಗುವನ್ನು ರಕ್ಷಿಸುವುದು ನಮಗೂ ಕಷ್ಟವಾಗಿದೆ. ಒಂದೇ ಕಂಬದ ಮೇಲೆ ಮಹಲು ಎಂದೂ ನಿಲ್ಲುವುದಿಲ್ಲ. ಈಗಿನ ಸಂದರ್ಭದಲ್ಲಿ ಶಿಕ್ಷಕನೊಬ್ಬನೇ ಎಲ್ಲವನ್ನೂ ಸರಿ ಮಾಡಬಲ್ಲ ಎಂಬ ನಿರೀಕ್ಷೆ ಸಾಧುವಲ್ಲ ಎಂಬುದು ನಿಮ್ಮ ಗಮನದಲ್ಲಿರಲಿ.

ನಾಳೆ ನಿಮ್ಮ ಮಗು ಏನಾದರೂ ಸಾಧಿಸಿದರೆ 'ಯಾರ ಮಗ/ಮಗಳು?' ಎಂದು ಕೇಳುತ್ತಾರೆ. ಸೋತರೆ 'ಯಾರು ಕಲಿಸಿದ್ದು?' ಅನ್ನುತ್ತಾರೆ. ಇರಲಿ, ಮಗುವಿನ ಸೋಲುಗಳೆಲ್ಲಾ ಶಿಕ್ಷಕರ ಖಾತೆಗೆ ಜಮೆಯಾಗಲಿ. ಜಗತ್ತಿನ ಎಲ್ಲಾ ಮಕ್ಕಳು 'ಇವರು ಯಾರ ಮಗ/ಮಗಳು?' ಅನ್ನುವಂತೆ ಬೆಳೆಯಲಿ ಎಂಬ ಆಶಯದೊಂದಿಗೆ.

ಇಂತಿ,
ನಿಮ್ಮ ಮಗುವಿನ ಮೇಷ್ಟ್ರು

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು.......
2) 17ನೇ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು ....ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
3) ಮೊದಲನೇ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು .... ರ ನಡುವೆ ನಡೆಯಿತು.
4) ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ....
5) ಪ್ಲಾಸಿ ಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವ ವಹಿಸಿದ್ದವನು..................

ಉತ್ತರ:– 1) ರಾಬರ್ಟ್ ಕ್ಲೈವ್ 2) ಇಟಲಿ 3) ಫ್ರೆಂಚ್ 4) ಸರ್ ಐರ್‌ಕೂಟ್ 5) ರಾಬರ್ಟ್ ಕ್ಲೈವ್

1) ಕಾಲಾನುಕ್ರಮದಲ್ಲಿ ಜೋಡಿಸಿ

1) ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು
2) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.
3) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು
4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಕಾಲಾನುಕ್ರಮದಲ್ಲಿ ಜೋಡಿಸಿ

ಉತ್ತರ:– 1) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು
2) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು
3) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.
4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

2) ಕಾಲಾನುಕ್ರಮದಲ್ಲಿ ಜೋಡಿಸಿ

1) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.
2) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.
3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು
4) ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು

ಉತ್ತರ:–

1) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು
2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು. (1664)
3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು (1746)
4) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು

ಬಹುಆಯ್ಕೆ ಪ್ರಶ್ನೆಗಳು

1) ....ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ 'ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.
ಎ) ಕಾನ್‌ಸ್ಟಾಂಟಿನೋಪಲ್ ಬಿ) ಲಂಡನ್
ಸಿ) ಪ್ಯಾರಿಸ್ ಡಿ) ಬರ್ಲಿನ್
ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

2) ....ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ 'ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.
ಎ) ಕಾನ್‌ಸ್ಟಾಂಟಿನೋಪಲ್ ಬಿ) ಲಂಡನ್
ಸಿ) ಪ್ಯಾರಿಸ್ ಡಿ) ಬರ್ಲಿನ್
ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

2) 1729 ರಿಂದ 1758ರ ವರೆಗೆ ವೈನಾಡನ್ನು ಆಳಿದ ಮಾರ್ತಾಂಡ ವರ್ಮ ತನ್ನ ಸುತ್ತಮುತ್ತಲಿನ ಸಂಸ್ಥಾನಗಳನ್ನು ಯಾರಿಂದ ರಕ್ಷಿಸಿದ್ದ?
ಎ) ಡಚ್ಚರು ಬಿ) ಇಂಗ್ಲಿಷರು
ಸಿ) ಫ್ರೆಂಚ್‌ರು ಡಿ) ಸ್ಪೇನ್
ಉತ್ತರ:– (ಎ) ಡಚ್ಚರು

3) ಬ್ರಿಟಿಷ್ ಭಾರತದ ಸೃಷ್ಟಿಗೆ ಕಾರಣನಾದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ....ನಾಗಿ ಸೇವೆಗೆ ಸೇರಿದ್ದನು.
ಎ) ಸೇನಾಧಿಕಾರಿಯಾಗಿ ,ಬಿ) ಕಾರುಕೂನ
ಸಿ) ದಿವಾನ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಬಿ) ಕಾರುಕೂನ

4) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್ ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?
ಎ) 1734 ಬಿ) 1526
ಸಿ) 1764 ಡಿ) 1943
ಉತ್ತರ:–(ಸಿ) 1764

5) ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ....ನಡುವಿನ ಸಂಘರ್ಷವು 1754ರವರೆಗೆ ನಡೆಯಿತು.
ಎ) ಡಚ್ಚರ ,ಬಿ) ಬ್ರಿಟಿಷರ
ಸಿ) ಪೋರ್ಚುಗೀಸರ ಡಿ) ಡ್ಯಾನಿಷರು
ಉತ್ತರ: (ಬಿ) ಬ್ರಿಟಿಷರ

7) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು.
ಎ) ವೆನ್ನಿಸ್ ಬಿ) ವ್ಯಾಟಿಕನ್
,ಸಿ) ಕಾನ್‌ಸ್ಟಾಂಟಿನೋಪಲ್ ಡಿ) ಕಾಬೂಲ್
ಉತ್ತರ:–(ಸಿ) ಕಾನ್‌ಸ್ಟಾಂಟಿನೋಪಲ್

8) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಎಲ್ಲಿಗೆ ಬಂದು ತಲುಪಿದನು.?
ಎ) ತಿರುವನಂತಪುರ ಬಿ) ಕಾಪ್ಪಡ್
ಸಿ) ಕೊಚ್ಚಿನ್ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಬಿ) ಕಾಪ್ಪಡ್

9) ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಯಾರು ಜಾರಿಗೆ ತಂದನು?
ಎ) ವಾಸ್ಕೊಡಗಾಮ ಬಿ) ಆಲ್ಫೋನ್ಸೊ–ಡಿ–ಅಲ್ಬುಕರ್ಕ್
ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ
ಉತ್ತರ:– (ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ

(ಮುಂದುವರಿಯುವುದು)

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್

ಅಥ್ಲೆಟಿಕ್ವೆಸ್ಟ್ ಎಲ್ಎಲ್‌ಪಿ: ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಭ್ಯರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಬರೆಯುವ ಮತ್ತು ಮಾತನಾಡುವ ಕೌಶಲ, ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್, ನೆಟ್‌ವರ್ಕಿಂಗ್ ಹಾಗೂ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರಬೇಕು. ಅರ್ಜಿ ಸಲ್ಲಿಕೆಗೆ ಜೂನ್ 21 ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 6,000–10,000. ಸಂಪರ್ಕ: internshala.com/i/024370.

ವಿದ್ಯಾರ್ಥಿ ವೇತನ ಕೈಪಿಡಿ

ನರ್ಸಿಂಗ್ ಸ್ಕಾಲರ್‌ಷಿಪ್

ಸಸಕಾವಾ- ಭಾರತ ಕುಷ್ಠರೋಗ ಪ್ರತಿಷ್ಠಾನ (ಎಸ್–ಐಎಲ್‌ಎಫ್) ನೀಡುವ ವಿದ್ಯಾರ್ಥಿವೇತನ ಇದು.

ಅರ್ಹತೆ: ಕನಿಷ್ಠ 17 ವರ್ಷ ವಯಸ್ಸಿನವರಾಗಿರಬೇಕು. ಅರ್ಜಿದಾರರು ಸ್ವತಃ ಕುಷ್ಠರೋಗದಿಂದ ಬಳಲಿರುವವರಾಗಿರಬೇಕು ಅಥವಾ ಅವರ ಪೋಷಕರಲ್ಲಿ ಕನಿಷ್ಠ ಒಬ್ಬರು ಈ ರೋಗದಿಂದ ಬಳಲುತ್ತಿರುವವರಾಗಿರಬೇಕು. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಬಿಎಸ್‌ಸಿ ನರ್ಸಿಂಗ್ (ಬೇಸಿಕ್) ಅಥವಾ ಜಿಎನ್‌ಎಂ ಪದವಿ ಕೋರ್ಸ್‌ನ ಮೊದಲ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವವರಾಗಿರಬೇಕು.

ಅರ್ಜಿ ಸಲ್ಲಿಸಲು ಕೊನೇ ದಿನ: 30-06-2026 **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್. **ಮಾಹಿತಿಗೆ:** Short Url: www.b4s.in/

ಪಿಯುಸಿ ದಿಕ್ಸೂಚಿ

PHYSICS

Chapter – 1

ELECTRIC CHARGES AND FIELDS

5. A pendulum bob of mass 80 mg and carrying charge of 2×10^{-8} C is at rest at a certain angle with the vertical in a horizontal uniform electric field of 20,000 Vm^{-1}. Find the tension in thread of the pendulum and the angle, it makes with the vertical.

Soln:- (......Contd)

$$\therefore \tan\theta = \frac{2\times10^{-8}\times 20,000}{8\times10^{-5}\times 9.8} = 0.5102$$

$$\Rightarrow \theta = \tan^{-1}(0.5102) = 27.02^{\circ}$$

STEP - 3 Find Tension T

From eqn. (ii),

$$T = \frac{qE}{\sin\theta} = \frac{2\times10^{-8}\times 20,000}{\sin 27.02^{\circ}} = 8.8\times10^{-4}\ N.$$

6. Infinite number of identical charges each of charge q are placed along the x-axis at a distance a, 2a, 3a, 4a, ... from the origin. Calculate the magnitude of the electric field at the origin due to this distribution of charges.

Soln:- Various charges placed along x-axis are shown in figure.



According to superposition principle, electric field at O due to the given distribution of charges is given by

$$E_1 = E_2 + E_3 + E_4 + \ldots\ldots$$

$$= \frac{1}{4\pi\epsilon_0}\frac{q}{a^2} + \frac{1}{4\pi\epsilon_0}\frac{q}{4a^2} + \frac{1}{4\pi\epsilon_0}\frac{q}{9a^2} + \frac{1}{4\pi\epsilon_0}\frac{q}{16a^2} + \ldots\ldots$$

$$= \frac{1}{4\pi\epsilon_0}\frac{q}{a^2}\left[1+\frac{1}{4}+\frac{1}{9}+\frac{1}{16}+\ldots\ldots\right]$$

$$= \frac{1}{4\pi\epsilon_0}\frac{q}{a^2}\left[1+\frac{1}{2^2}+\frac{1}{3^2}+\frac{1}{4^2}+\ldots\ldots\right]$$

$$\text{But}\left[1+\frac{1}{2^2}+\frac{1}{3^2}+\frac{1}{4^2}+\ldots\ldots\right] = \frac{\pi^2}{6}$$

$$\therefore E = \frac{1}{4\pi\epsilon_0}\frac{q}{a^2}\times\frac{\pi^2}{6} = \frac{1}{4\pi\epsilon_0}\left[\frac{\pi^2 q}{6a^2}\right]$$

Answer the following :-

1. A small metallic ball is suspended through an insulating thread in a uniform electric field. If high energy X-ray beam falls on the ball, what will happen to the ball?

Ans:- Falling of high energy X-ray beam on the metal ball will result into emission of electrons from it. Thus the ball acquires positive charge and is deflected by the uniform electric field.

2. What is the role of electric field in microwave cooking?

Ans:- Foods that contain water can be cooked better in a microwave oven because water molecules are electric dipoles which oscillate due to the electric field of microwaves generated in the oven. The bonded molecules of water are broken because of these oscillations, thus transferring their energy into thermal, thus transferring their energy into thermal energy. This thermal energy cooks the food in a microwave oven.

3. Let two charged particles have similar curved paths in a uniform electrostatic field. Then pick the false statements

(1) They have same specific charge i.e., $\frac{e}{m}$ ratio
(2) Their masses must be same
(3) Their charges are of same sign
(4) Magnitudes of their charges must be same.

Ans:- (2) and (4) are false statements because in these cases their $\frac{e}{m}$ ratios will be same and the charges will be of same sign.

4. Give a rough plot of field lines in the electric field around two charges +3 unit and -1 unit.

Ans:- Field lines are directly proportional to the magnitude of electric field. On the other hand, electric field is directly proportional to the magnitude of charge. Thus, the field lines starting or ending on a charge are proportional to the magnitude of charge. It means, field lines starting from a large charge are more than starting from a small charge. The plot is given as ahead:



5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.



Soln:- Let the pendulum be at an angle θ with the vertical.

Net force acting on the bob = $(mg - qE)$.

(Contd...)

KARNATAKA STATE OPEN UNIVERSITY
MUKTHAGANGOTHRI, MYSURU - 570006, KARNATAKA
Helpline for ODL (Offline) Programmes : 8800335638, 8690544544,
email : techsupport@ksouportal.com
For Online Programmes : 9141181241, email : onlinesupport@ksouportal.com
(Accredited with A+ by NAAC & having 2nd Rank in NIRF(
Website : www.ksoumysuru.ac.in, https:\\ksou\onlinestudy.com\
A+ NAAC
nirf 2nd Rank 2025 KSOU
KSOU is the only State University in Karnataka to offer Open Distance Learning (ODL) Programmes
GOLDEN OPPORTUNITY for Students can study two Academic programs Simultaneously
Higher Education to Every Everywhere
ADMISSIONS will be made twice in an year through online for July & January Session
Programmes are recognized by the University Grants Commission, New Delhi
Vide Notification : F.No.: 30-30/2023 (DEB III)
Dated : 11-09-2023, 17-08-2023 & 02-11-2023
As per Government Gazette Notification No.: DPAL 35 SHASANA 2020, Bengaluru Dated 30-12-2020, KSOU is the only University in the State to offer higher education through ODL mode. Applications are invited for admission to the following programmes through Online.
ACADEMIC PROGRAMMES OFFERED
2026-27 JULY CYCLE ADMISSION WILL STARTS FROM JUNE / JULY 2026
UNDER GRADUATE (UG)
* B.A. * B.Com. * B.Lib. I.Sc. * B.Sc. - General wtih 5 Combinations * B.Sc. Information Technology * B.S.W. * B.B.A. * B.C.A. - Computer Applications
POST GRADUATE (PG)
* M.A. - Kannada, English, Hindi, Urdu, Sanskrit, Telugu, History, Political Science, Economics, Public Administration, Sociology, Education, Ancient History & Archeology and Journalism & Mass Communication.
* M.Com. with Dual Specialisation: Accounting & Finance / HRM, Marketing & HRM /Finance
* M.B.A. Specialisation: HR, Marketing, Finance, IT, Operations, Corporate Law, Tourism, Hospital and Healthcare Management
* M.Sc. Botany, Zoology, Chemistry, Environmental Science, Computer Science, Geography, Information Technology, Mathematics, Physics, Data Science, Earth Science & Life Science.
* M.Lib. I.Sc * M.S.W. * M.C.A.
PG CERTIFICATE PROGRAMS
* English, Communicative English, Financial Management, Journalism & Mass Communication, Kuvempu Sahitya, Human Resource Management, Business Law, Business Administration, Marketing Management, Ambedkar Studies, Information Technology, Computer Application, Linguistics.
* Diploma Programmes: Kannada, Journalism, Information Technology. Computer Application, Early Child Care & Education, Translation Studies, Predictive Astrology, Mundane Astrology, Vastu Shastra.
* Certificate Programmes: Panchayath Raj, Information Communication Technology (ICT), Translation Studies, Jyothir Vignana
ONLINE PROGRAMMES :
* B.A. * B.Com. * M.A. - Kannada, Hindi, Sankrit, Economics, English * M.Com., * M.B.A. * M.Sc. - Mathematics
* Fee concession for BPL Card Holders (Women) and Ex Servicemen / Defence Students
* Auto / Cab Drivers and their family / KSRTC / BMTC / NWKRTC / KKRTC Staff
* Free admissions for Blind students (Except B.Ed. & MBA), Transgenders and Covid affected (demised) parents children
AS PER UNIVERSITY NORMS
For details of Regional Center & Admission Process Scan here

For Admissions : Visit Head Quarters OR KSOU Regional Centres
For more details visit : www.ksoumysuru.ac.in for ODL (Offline) programmes https:\\ksouonlinestudy.com for Online programmes

RAJYA VOKKALIGARA SANGHA (R)
BANGALORE INSTITUTE OF TECHNOLOGY
An Autonomous Institution Under Visvesvaraya Technological University
K.R Road, V.V Pura, Bengaluru - 560 004 | www.bit-bangalore.edu.in
Recognised By All India Council for Technical Education (AICTE), New Delhi | Affiliated to Visvesvaraya Technological University (VTU), Belagavi | Accredited by National Board of Accreditation UG Programs (6) | Accredited by National Assessment and Accreditation Council (NAAC)



Programmes Offered
Bachelor of Engineering (B.E)
• Computer Science and Engineering
• Information Science and Engineering
• Artificial Intelligence and Machine Learning
• Computer Science and Engineering (Data Science)
• Computer Science and Engineering (IOT and Cyber Security including Blockchain Technology)
• Electronics and Communication Engineering
• Electronic Engineering (VLSI Design and Technology)
• Electronics and Telecommunication Engineering
• Electrical and Electronics Engineering
• Electronics and Instrumentation Engineering
• Mechanical Engineering
• Robotics and Artificial Intelligence
• Civil Engineering
Post Graduate Programmes
Master of Computer Applications (MCA)
Master of Business Administration (MBA)
Master of Technology (M.Tech)
• Civil, Structural Engineering
• VLSI Design and Embedded Systems
• Computer Science and Engineering
Ph.D Programs and M.Sc Engineering (By Research) 15 VTU approved Research Centers
ADMISSIONS 2026-27
13 Gold Medals in the year 2024
VTU RANKS
Year	Ranks
2024 - 2025	21
2023 - 2024	26
2022 - 2023	25
10 Gold Medals in the year 2025
Placements
650+ offers during 2025
580+ offers during 2026 Placements in progress
Highest Salary of ₹46 LPA
THE WEEK-HANSA SURVEY 2025
53 India's Best College
Best Private Engineering College
28 All India | 14 South India | 6 Karnataka | 4 Bengaluru
CET Code : E008 Comed-K : E019
PGCET Code - MBA : B131
MCA : C411 M.Tech : T812
PRINCIPAL AND MANAGEMENT
For Admission Contact +91 9448512954, 94485 12984
Email : admissionsection@bit-bangalore.edu.in

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮುನ್ನಡೆ ಸಾಧಿಸಿದರೆ ಸಾಲದು, ಮೇಲ್ನಡೆ ಸಾಧಿಸುವುದು ಮನುಷ್ಯನ ಗುರಿಯಾಗಬೇಕು.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಹೊಸ ಕನಸುಗಳ ಶೈಕ್ಷಣಿಕ ವರ್ಷ ಗುಣಮಟ್ಟದ ಕಲಿಕೆಯ ಸವಾಲು

'ಉತ್ತಮ ಕಲಿಕೆ ಉಜ್ವಲ ಭವಿಷ್ಯ' ಎನ್ನುವ ಘೋಷವಾಕ್ಯದೊಂದಿಗೆ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 2026–27ನೇ ಸಾಲಿನ ಶೈಕ್ಷಣಿಕ ವರ್ಷ ಇಂದಿನಿಂದ (ಜೂನ್ 1) ಅಧಿಕೃತವಾಗಿ ಆರಂಭಗೊಂಡಿದೆ. ಬೇಸಿಗೆ ರಜೆಯ ಅವಧಿಯಲ್ಲಿ ಮಕ್ಕಳಿಲ್ಲದೆ ಮೌನ ಆವರಿಸಿಕೊಂಡಿದ್ದ ಶಾಲಾ ಪರಿಸರ, ಲಕ್ಷಾಂತರ ಮಕ್ಕಳ ಕಲರವ, ಕನಸುಗಳೊಂದಿಗೆ ಜೀವ ಪಡೆದುಕೊಳ್ಳಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ದಾಖಲೆಯ ಫಲಿತಾಂಶ ಸಾಧಿಸಿದ ಸಂಭ್ರಮದಲ್ಲಿರುವ ಇಲಾಖೆ, ಆ ಯಶಸ್ಸನ್ನು ಮುಂದುವರಿಸುವ ಹುಮ್ಮಸ್ಸಿನಲ್ಲಿದೆ. 'ಕರ್ನಾಟಕ ಪಬ್ಲಿಕ್ ಸ್ಕೂಲ್'ಗಳು ಸೇರಿದಂತೆ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಸರ್ಕಾರಿ ಶಾಲೆಗಳಿಗೆ ಹೊಸ ಸ್ವರೂಪ ನೀಡಲು ಇಲಾಖೆ ಪ್ರಯತ್ನಿಸುತ್ತಿದೆ. ಶೈಕ್ಷಣಿಕ ವರ್ಷದ ಆರಂಭದಲ್ಲೇ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆ ಎದುರಾಗದಂತೆ ಇತ್ತೀಚಿನ ವರ್ಷಗಳಲ್ಲಿ ಎಚ್ಚರ ವಹಿಸಲಾಗುತ್ತಿದೆ. ಈ ಬಾರಿ ಶಾಲೆ ಆರಂಭಗೊಳ್ಳುವುದಕ್ಕೂ ಮೊದಲೇ ಶಾಲೆಗಳಲ್ಲಿನ ಮೂಲಸೌಕರ್ಯ ಮತ್ತು ಸುರಕ್ಷತಾ ಸ್ಥಿತಿಯ ಕುರಿತು ಪರಿಶೀಲನೆ ನಡೆಸಲು ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿತ್ತು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಶಾಲಾ ಕಟ್ಟಡಗಳ ಸುರಕ್ಷತೆ, ಕುಡಿಯುವ ನೀರು, ಶೌಚಾಲಯಗಳು ಹಾಗೂ ಇತರ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಆದೇಶಿಸಲಾಗಿತ್ತು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ತಕ್ಷಣವೇ ದುರಸ್ತಿಗೊಳಿಸಲು ಇಲ್ಲವೇ ಬಳಕೆಯಿಂದ ದೂರವಿಡಲು ತಿಳಿಸಲಾಗಿತ್ತು. ಈ ಉಪಕ್ರಮಗಳಿಂದಾಗಿ ಮಕ್ಕಳ ಹೊಸ ಶೈಕ್ಷಣಿಕ ವರ್ಷದ ಕಲಿಕೆ ಸುರಕ್ಷಿತ ಪರಿಸರದಲ್ಲಿ ಸಾಗುತ್ತದೆಂದು ಆಶಿಸಬಹುದಾಗಿದೆ. ಪಠ್ಯಪುಸ್ತಕಗಳು ಸಕಾಲದಲ್ಲಿ ದೊರೆಯದಿರುವುದು ಪ್ರತಿ ಶೈಕ್ಷಣಿಕ ವರ್ಷದ ದೂರು. ಶಾಲೆಯ ಮೊದಲ ದಿನವೇ ಮಕ್ಕಳಿಗೆ ಪಠ್ಯಪುಸ್ತಕ ದೊರೆಯುವಂತೆ ಮಾಡುವ ಮೂಲಕ ಬೋಧನೆ ಹಾಗೂ ಕಲಿಕೆ ಸುಸೂತ್ರವಾಗಿ ಸಾಗುವಂತಾಗಬೇಕು. ಸಮವಸ್ತ್ರ ವಿತರಣೆಯೂ ವಿಳಂಬವಿಲ್ಲದೆ ನಡೆಯಬೇಕು. ಸರ್ಕಾರಿ ಶಾಲೆಗಳ ವರ್ಚಸ್ಸು ಹೆಚ್ಚಾಗುವಲ್ಲಿ ಶಿಸ್ತಿನ ಪಾಲನೆ ಮುಖ್ಯವಾದುದು.

ಶಿಕ್ಷಕರ ಪೂರ್ಣ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ವಿನಿಯೋಗ ಆಗದೆ ಹೋದರೆ, ಬೋಧನಾ ಪ್ರಕ್ರಿಯೆ ಅಪೂರ್ಣವಾಗುತ್ತದೆ; 'ಉತ್ತಮ ಕಲಿಕೆ'ಯ ಆಶಯ ದುರ್ಬಲಗೊಳ್ಳುತ್ತದೆ.

ಗುಣಮಟ್ಟದ ಕಲಿಕೆಗೂ ಉತ್ತಮ ಭವಿಷ್ಯಕ್ಕೂ ಇರುವ ಸಂಬಂಧವನ್ನು ಶಿಕ್ಷಣ ಇಲಾಖೆ ಸರಿಯಾಗಿಯೇ ಗುರ್ತಿಸಿದೆ. ಈ ನಿಟ್ಟಿನಲ್ಲಿ ಮೂಲಸೌಕರ್ಯಗಳನ್ನು ಉತ್ತಮಗೊಳಿಸುವ ಪ್ರಯತ್ನಗಳನ್ನೂ ನಡೆಸಿದೆ. ಆದರೆ, ಶಿಕ್ಷಕರ ಪೂರ್ಣ ಸಾಮರ್ಥ್ಯ ಶಾಲೆಗೆ ಮತ್ತು ಮಕ್ಕಳಿಗೆ ದೊರೆಯದೆ ಹೋದರೆ ಉತ್ತಮ ಕಲಿಕೆಯ ಆಶಯ ಘೋಷಣೆಯಾಗಿಯಷ್ಟೇ ಉಳಿಯುತ್ತದೆ. ಶಾಲಾರಂಭದ ಸಮಯದಲ್ಲಿಯೇ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯ ಹೊಣೆ ಶಿಕ್ಷಕರ ಹೆಗಲಿಗೇರಿದೆ. 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ಪಾಲಿಕೆಗಳಿಗೆ ನಡೆಯಬೇಕಾದ ಚುನಾವಣೆಗಳು ಸೇರಿದಂತೆ ಶಾಲಾ ಚಟುವಟಿಕೆಗಳಿಗೆ ಹೊರತಾದ ಮಹತ್ವದ ಕಾರ್ಯಭಾರಗಳನ್ನು ಶಿಕ್ಷಕರು ಅನಿವಾರ್ಯವಾಗಿ ನಿರ್ವಹಿಸಬೇಕಾಗಿದೆ. ಕಳೆದ ಕೆಲವು ವರ್ಷಗಳಿಂದಂತೂ, ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಉತ್ತರದಾಯಿ ಆಗಿರಬೇಕಾದ ಶಿಕ್ಷಕರ ಮೇಲೆ, ಬೇರೆ ಇಲಾಖೆಯ ಅಧಿಕಾರಿಗಳೇ ಹೆಚ್ಚಿನ ಅಧಿಕಾರ ಚಲಾಯಿಸುತ್ತಿರುವ ಸಂದರ್ಭ ಸೃಷ್ಟಿಯಾಗಿದೆ. ಶಿಕ್ಷಣೇತರ ಕಡ್ಡಾಯ ಕರ್ತವ್ಯಗಳ ನಡುವೆ ಸಿಲುಕಿಕೊಂಡಿರುವ ಶಿಕ್ಷಕರನ್ನು ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ದೊರಕಿಸಿ ಕೊಡಲು ಸಾಧ್ಯವಾಗದಿರುವುದು ಸರ್ಕಾರಿ ಶಾಲೆಗಳಲ್ಲಿನ ಬೋಧನಾ ಚಟುವಟಿಕೆಗಳ ಹಿನ್ನಡೆಗೆ ಮುಖ್ಯ ಕಾರಣಗಳಲ್ಲೊಂದಾಗಿದೆ. ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಶಿಕ್ಷಕರಿಗೂ ಸುರಕ್ಷಿತ ಹಾಗೂ ಉಲ್ಲಾಸದಾಯಕ ಶೈಕ್ಷಣಿಕ ವಾತಾವರಣ ಅಗತ್ಯ. ಅನಗತ್ಯ ಒತ್ತಡಗಳಿಂದ ಶಿಕ್ಷಕರು ಮುಕ್ತರಾಗುವುದು 'ಉತ್ತಮ ಕಲಿಕೆ' ಆಶಯ ಸಾಕಾರಗೊಳ್ಳುವುದಕ್ಕೆ ಅಗತ್ಯ. ವಿದ್ಯಾರ್ಥಿಗಳ ಕಲಿಕಾಮಟ್ಟದ ಕುಸಿತಕ್ಕೂ ಶಿಕ್ಷಕರ ಮೇಲಿನ ಹೊರೆಗಳಿಗೂ ನೇರ ಸಂಬಂಧವಿದೆ.

ಕೊರೊನಾ ಸಾಂಕ್ರಾಮಿಕದ ನಂತರ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿಲ್ಲ. ಆ ಸಮಸ್ಯೆ ಈ ಬಾರಿಯೂ ಮುಂದುವರಿಯಬಹುದು. ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ನಿರೀಕ್ಷೆಯಂತೆ ಇರುವುದಿಲ್ಲ ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಮಳೆಯ ಕೊರತೆ ಎದುರಾದಾಗ, ಉದ್ಯೋಗಗಳನ್ನು ಹುಡುಕಿಕೊಂಡು ವಲಸೆ ಹೋಗುವವರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಲಿದೆ ಹಾಗೂ ಗಣನೀಯ ಸಂಖ್ಯೆಯ ಮಕ್ಕಳು ಶಾಲೆಯಿಂದ ಹೊರಗುಳಿಯುವ ಸಾಧ್ಯತೆಯಿದೆ. ವಲಸೆ ಕಾರ್ಮಿಕರ ಮಕ್ಕಳನ್ನು ಗುರ್ತಿಸಿ, ಅವರು ಸಮೀಪದ ಶಾಲೆಗಳಲ್ಲಿ ಕಲಿಯಲು ಅವಕಾಶ ಕಲ್ಪಿಸುವ ಪ್ರಕ್ರಿಯೆಯನ್ನು ಶಿಕ್ಷಣ ಇಲಾಖೆ ಆಂದೋಲನದ ರೀತಿಯಲ್ಲಿ ನಡೆಸಬೇಕಾಗಿದೆ. ಮಕ್ಕಳ ವ್ಯಕ್ತಿತ್ವ ಮತ್ತು ಸಾಮರ್ಥ್ಯವನ್ನು ವೃದ್ಧಿಸುವ ಹಾಗೂ ಸಮಾನ ಅವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಣವನ್ನು ಬಲಗೊಳಿಸುವ ಸಂಕಲ್ಪ, ಇಚ್ಛಾಶಕ್ತಿ ಸರ್ಕಾರಕ್ಕೆ ಬೇಕು.

ಟ್ವಿಶಾ: 'ಮಾಧ್ಯಮ ನ್ಯಾಯ'ದ ಯಶಸ್ಸು

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಟ್ವಿಶಾ ಸಾವಿನ ಪ್ರಕರಣವನ್ನು ಮಧ್ಯಪ್ರದೇಶ ಸರ್ಕಾರ, ಭೋಪಾಲ್ ಪೊಲೀಸರು ನಿರ್ವಹಣೆ ಮಾಡಿದ ಬಗೆ ಹಾಗೂ ಆ ರಾಜ್ಯದ ನ್ಯಾಯಾಂಗದ ಅಧಿಕಾರಿಗಳ ವರ್ತನೆಯು ಅಲ್ಲಿ ಪ್ರಭುತ್ವದ ಎಲ್ಲ ಅಂಗಗಳು– ಅಂದರೆ ಚುನಾಯಿತ ಸರ್ಕಾರ, ಪೊಲೀಸರು ಮತ್ತು ಕೆಳಹಂತದ ನ್ಯಾಯಾಂಗ ವ್ಯವಸ್ಥೆ– ಸಂಪೂರ್ಣವಾಗಿ ಕುಸಿದುಬಿದ್ದಿರುವುದನ್ನು ಸೂಚಿಸುತ್ತಿವೆ. ಮಾಧ್ಯಮಗಳು ಇಲ್ಲದೇ ಹೋಗಿದ್ದರೆ, ಈ ಎಲ್ಲ ಅಂಗಗಳ ನಡುವಿನ ಒಳಮೈತ್ರಿಯು ನ್ಯಾಯದಾನ ವ್ಯವಸ್ಥೆಯ ಮೇಲೆ ಸಾರ್ವಜನಿಕರು ಇರಿಸಿರುವ ನಂಬಿಕೆಯನ್ನು ನಾಶ ಮಾಡಿಬಿಡುತ್ತಿತ್ತು.

ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷಗಳು ಕಳೆದ ನಂತರದಲ್ಲಿಯೂ ವ್ಯವಸ್ಥೆಯು ಕುಸಿದುಬಿದ್ದಿರುವುದನ್ನು ನೋಡಬೇಕಾದ ಸ್ಥಿತಿ ಇರುವುದು ನಿಜಕ್ಕೂ ನಾಚಿಕೆ ಮೂಡಿಸುವಂತಹ ಸಂಗತಿ. ನಿವೃತ್ತ ನ್ಯಾಯಾಧೀಶೆಯ ಸೊಸೆ, ವಕೀಲರೊಬ್ಬರ ಪತ್ನಿ ಟ್ವಿಶಾ ಅವರು ಮೇ 12ರಂದು ಭೋಪಾಲ್‌ನಲ್ಲಿ ಅನುಮಾನಕ್ಕೆ ಆಸ್ಪದ ಮಾಡಿಕೊಡುವಂತಹ ಸನ್ನಿವೇಶದಲ್ಲಿ ಮೃತಪಟ್ಟರು. ಆದರೆ, ಮದುವೆಯಾದ ಏಳು ವರ್ಷಗಳ ಒಳಗೆ ಗಂಡನ ಮನೆಯಲ್ಲಿ ಕ್ರೌರ್ಯಕ್ಕೆ ಗುರಿಯಾಗಿ ಪತ್ನಿ ಈ ರೀತಿ ಮೃತಪಟ್ಟಾಗ, ಅಂತಹ ಪ್ರಕರಣಗಳನ್ನು ನಿಭಾಯಿಸಲು ಕಾನೂನಿನಲ್ಲಿ ಸ್ಪಷ್ಟವಾದ ಅವಕಾಶಗಳು ಇದ್ದರೂ, ಪೊಲೀಸರು ಮೇ 15ರವರೆಗೆ ಎಫ್‌ಐಆರ್ ದಾಖಲು ಮಾಡಲಿಲ್ಲ. ಈ ನಡುವೆ ನ್ಯಾಯಾಧೀಶರೊಬ್ಬರು ನಿವೃತ್ತ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದರು. ಅಪರಾಧ ನಡೆದ ಸ್ಥಳಕ್ಕೆ ತೆರಳಲು ಅವರಿಗೆ ಮುಕ್ತ ಅವಕಾಶ ದೊರೆಯಿತು.

ನಿವೃತ್ತ ನ್ಯಾಯಾಧೀಶೆಗೆ ಸಿಕ್ಕ ಸ್ವಾತಂತ್ರ್ಯ ಅದೆಷ್ಟಿತ್ತೆಂದರೆ, ಅವರು ತಮ್ಮ ಮನೆಯ ಸಿಸಿಟಿವಿ ಕ್ಯಾಮೆರಾಗಳಲ್ಲಿ ಏನೇನು ದಾಖಲಾಗಿದೆ ಎಂಬುದನ್ನು ಪರಿಶೀಲಿಸಲು ಹಾಗೂ ಅಪರಾಧ ನಡೆದ ಸ್ಥಳವನ್ನು ಪರಿಶೀಲಿಸಲು ಪರಿಣತರನ್ನು ಕರೆಸಿದರು, ಸಾವಿಗೂ ಕೆಲವು ತಾಸುಗಳ ಮೊದಲು ಟ್ವಿಶಾ ಅವರು ಭೇಟಿ ನೀಡಿದ್ದ ಬ್ಯೂಟಿ ಪಾರ್ಲರ್‌ನ ಸಿಸಿಟಿವಿ ದೃಶ್ಯಾವಳಿಗಳನ್ನು ತರಲು ವಕೀಲರನ್ನು ಕಳುಹಿಸಿದರು. ಅಷ್ಟೇ ಅಲ್ಲ, ಅವರು ಪೊಲೀಸ್ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ಲೋಕಾಯುಕ್ತ ಸಂಸ್ಥೆಯಲ್ಲಿನ ಮುಖ್ಯ ವ್ಯಕ್ತಿಗಳಿಗೆ, ಡಿಜಿ ಶ್ರೇಣಿಯ ಪೊಲೀಸ್ ಅಧಿಕಾರಿ ಹಾಗೂ ಜಿಲ್ಲಾ ನ್ಯಾಯಾಧೀಶರೊಬ್ಬರಿಗೆ ತಮ್ಮ ಫೋನ್‌ನಿಂದ 46 ಕರೆಗಳನ್ನು ಮಾಡಿದರು. ಆರೋಪಿ ಆಗಬಹುದಾದ ವ್ಯಕ್ತಿಯೊಬ್ಬರಿಗೆ ಸಾಕ್ಷ್ಯಗಳನ್ನು ತಿರುಚಲು ನ್ಯಾಯಾಧೀಶರೊಬ್ಬರು ಇಷ್ಟೊಂದು ಮುಕ್ತವಾದ ಸ್ವಾತಂತ್ರ್ಯ ನೀಡಿದ ಇನ್ನೊಂದು ನಿದರ್ಶನ ಕಾಣಲಿಕ್ಕಿಲ್ಲ. ಈ ನಡುವೆ, ಟ್ವಿಶಾ ಅವರ ಪತಿ (ಇವರೂ ವಕೀಲಿಕೆ ಮಾಡುತ್ತಿದ್ದಾರೆ) ಸಮರ್ಥ್ ಸಿಂಗ್ ಅವರು ನಾಪತ್ತೆಯಾಗಿ, ಹತ್ತು ದಿನ ಭೂಗತರಾದರು. ಸಮರ್ಥ್ ಎಲ್ಲಿದ್ದಾರೆ ಎಂಬುದು ತಮಗೆ ತಿಳಿದಿಲ್ಲ ಎಂದು ಅವರ ತಾಯಿ (ನಿವೃತ್ತ ನ್ಯಾಯಾಧೀಶೆ) ಮಾಧ್ಯಮಗಳಿಗೆ ಮತ್ತೆ ಮತ್ತೆ ಹೇಳುತ್ತಿದ್ದರು.

ಕಾನೂನು ಮತ್ತು ನ್ಯಾಯದ ಈ ಅಣಕವನ್ನು ಕಂಡು ನೊಂದ ಟ್ವಿಶಾ ಅವರ ಪಾಲಕರು, ಮಧ್ಯಪ್ರದೇಶದ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಲು ಮೇ 17ರಂದು ಪ್ರಯತ್ನಿಸಿದರು, ಅವರ ಮನೆಯ ಮುಂದೆ ಧರಣಿ ನಡೆಸಿದರು. ಆದರೆ ಅವರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಮುಂದಾಗಲಿಲ್ಲ. ಹಲವಾರು ಮಾಧ್ಯಮ ಸಂಸ್ಥೆಗಳು ಈ ಸಾವಿನ ವಿಚಾರವಾಗಿ ಗದ್ದಲ ಸೃಷ್ಟಿಸಿದಾಗ ಟ್ವಿಶಾ ಪಾಲಕರನ್ನು ಮುಖ್ಯಮಂತ್ರಿ ಮೇ 20ರಂದು ಭೇಟಿ ಮಾಡಿದರು. ಕೇಂದ್ರ ಗೃಹ ಸಚಿವಾಲಯ ಸೂಚನೆ ನೀಡಿದ್ದುದು ಭೇಟಿಗೆ ಕಾರಣ ಎಂಬುದು ಸ್ಪಷ್ಟ. ನಂತರ ಅವರು ಪ್ರಕರಣವನ್ನು ಸಿಬಿಐಗೆ ವರ್ಗಾವಣೆ ಮಾಡಲು ಒಪ್ಪಿದರು. ಆದರೆ ವರ್ಗಾವಣೆ ಆಗಿದ್ದು ಮೇ 25ರಂದು. ಮೃತದೇಹವನ್ನು ಎರಡನೆಯ ಬಾರಿಗೆ ಮರಣೋತ್ತರ ಪರೀಕ್ಷೆಗೆ ಒಳಪಡಿಸಲು ಕೂಡ ಸರ್ಕಾರ ಒಪ್ಪಿತು. ಅದು ನಡೆದಿದ್ದು ಮೇ 24ರಂದು, ಟ್ವಿಶಾ ಮೃತಪಟ್ಟ 12 ದಿನಗಳ ನಂತರ ಎನ್ನುವುದು ಗಮನಾರ್ಹ.

> ಮಾಧ್ಯಮಗಳು ನ್ಯಾಯನಿರ್ಣಯ ಮಾಡುವಂತೆ ವರ್ತಿಸುವುದನ್ನು ಬಹುತೇಕ ಸಂದರ್ಭಗಳಲ್ಲಿ ಒಪ್ಪುವುದು ಕಷ್ಟ. ಆದರೆ. ಟ್ವಿಶಾ ಅವರ ಸಾವಿನ ಸಂದರ್ಭದಲ್ಲಿ 'ಮಾಧ್ಯಮ ವಿಚಾರಣೆ' ಇಲ್ಲದೆ ಹೋಗಿದ್ದರೆ ಸತ್ಯ ಹುದುಗಿಹೋಗುವ ಸಾಧ್ಯತೆ ಹೆಚ್ಚಾಗಿತ್ತು. ಮಧ್ಯಪ್ರದೇಶ ಸರ್ಕಾರ ಹಾಗೂ ಭೋಪಾಲ್ ಪೊಲೀಸರ ಹೊಣೆಗೇಡಿತನವನ್ನು ಬಯಲು ಮಾಡುವಲ್ಲಿ ಹಾಗೂ ಸತ್ಯವನ್ನು ಮುನ್ನೆಲೆಗೆ ತರುವಲ್ಲಿ ಮಾಧ್ಯಮಗಳದು ಮಹತ್ವದ ಪಾತ್ರ.

ಟ್ವಿಶಾ ಪ್ರಕರಣದಲ್ಲಿ ಪೊಲೀಸರು ನಿರ್ಲಕ್ಷ್ಯ ತೋರಿದರು ಹಾಗೂ ಆಕೆಯ ಅತ್ತೆಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಯಿತು. ಮದುವೆ ಆಗಿ ಏಳು ವರ್ಷಗಳು ತುಂಬುವ ಮೊದಲು, ಪತಿಯ ಮನೆಯಲ್ಲಿ ಪತ್ನಿಯು ಹಿಂಸೆಗೆ ಗುರಿಯಾದರೆ ಮತ್ತು ವರದಕ್ಷಿಣೆ ಕಿರುಕುಳಕ್ಕೆ ಒಳಗಾದರೆ ಅದಕ್ಕೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 117ರಲ್ಲಿ (ಹಿಂದೆ ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 113ಎ) ಏನು ಹೇಳಲಾಗಿದೆ ಎಂಬುದನ್ನು ತಿಳಿದ ಯಾವುದೇ ವ್ಯಕ್ತಿಯ ಆತ್ಮಸಾಕ್ಷಿಗೆ ಇದು ಆಘಾತ ಉಂಟುಮಾಡುವಂಥದ್ದು. ಸೆಕ್ಷನ್ 117 ಹೀಗೆ ಹೇಳುತ್ತದೆ: ವಿವಾಹಿತ ಮಹಿಳೆಯರ ಆತ್ಮಹತ್ಯೆಗೆ ಪ್ರಚೋದನೆ ವಿಚಾರದಲ್ಲಿ ಪೂರ್ವ ನಂಬಿಕೆ – ಮಹಿಳೆಯು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಆಕೆಯ ಪತಿ ಅಥವಾ ಪತಿಯ ಯಾವುದೇ ಸಂಬಂಧಿ ಪ್ರಚೋದನೆ ನೀಡಿದ್ದರೇ ಎಂಬ ಪ್ರಶ್ನೆ ಇದ್ದಾಗ, ಮದುವೆ ಆದ ದಿನಾಂಕದಿಂದ ಏಳು ವರ್ಷಗಳ ಒಳಗೆ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದನ್ನು ತೋರಿಸಿದಲ್ಲಿ, ಆಕೆಯ ಪತಿ ಅಥವಾ ಪತಿಯ ಸಂಬಂಧಿಕರು ಆಕೆಯನ್ನು ಕ್ರೂರವಾಗಿ ನಡೆಸಿಕೊಂಡಿದ್ದರೆ, ಪ್ರಕರಣದ ಇತರ ಎಲ್ಲ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡು, ಆತ್ಮಹತ್ಯೆಗೆ ಆಕೆಯ ಪತಿ ಅಥವಾ ಪತಿಯ ಸಂಬಂಧಿಕರು ಪ್ರಚೋದನೆ ನೀಡಿದ್ದರು ಎಂದು ನ್ಯಾಯಾಲಯವು ಪೂರ್ವನಂಬಿಕೆಯನ್ನು ಬೆಳೆಸಿಕೊಳ್ಳಬಹುದು.

ಭಾರತೀಯ ಸಾಕ್ಷ್ಯ ಅಧಿನಿಯಮದ ಸೆಕ್ಷನ್ 118 ಇನ್ನೂ ಹೆಚ್ಚು ಸ್ಪಷ್ಟವಾಗಿದೆ: ವ್ಯಕ್ತಿಯೊಬ್ಬರು ವರದಕ್ಷಿಣೆಯ ಕಾರಣಕ್ಕೆ ಮಹಿಳೆಯ ಸಾವಿಗೆ ಕಾರಣರಾಗಿದ್ದಾರೆಯೇ ಎಂಬ ಪ್ರಶ್ನೆ ಇದ್ದಾಗ, ಸಾವಿಗೆ ಮೊದಲು ಆ ಮಹಿಳೆಯು ಆ ವ್ಯಕ್ತಿಯಿಂದ ವರದಕ್ಷಿಣೆಗಾಗಿ ಅಥವಾ ವರದಕ್ಷಿಣೆಗೆ ಸಂಬಂಧಿಸಿದ ಕ್ರೌರ್ಯಕ್ಕೆ ಅಥವಾ ಕಿರುಕುಳಕ್ಕೆ ಗುರಿಯಾಗಿದ್ದಲ್ಲಿ, ಆ ವ್ಯಕ್ತಿಯು ವರದಕ್ಷಿಣೆಗೆ ಸಂಬಂಧಿಸಿದ ಸಾವಿಗೆ ಕಾರಣರಾಗಿದ್ದಾರೆ ಎಂದು ನ್ಯಾಯಾಲಯವು ಪೂರ್ವನಂಬಿಕೆ ಹೊಂದಬಹುದು ಎಂದು ಈ ಸೆಕ್ಷನ್ ಹೇಳುತ್ತದೆ.

ವರದಕ್ಷಿಣೆ ಕಿರುಕುಳದಿಂದಾಗಿ ಆಗುವ ಸಾವುಗಳಿಗೆ ಸಂಬಂಧಿಸಿದ ಕಾನೂನನ್ನು 1980ರ ದಶಕದಲ್ಲಿ ಇನ್ನಷ್ಟು ಬಿಗಿಗೊಳಿಸಲಾಯಿತು. ಇದನ್ನು ಭಾರತೀಯ ನ್ಯಾಯ ಸಂಹಿತೆಯೂ (ಬಿಎನ್‌ಎಸ್) ಒಳಗೊಂಡಿದೆ. ಮಹಿಳೆಯನ್ನು ಗುರಿಯಾಗಿಸಿ ಕ್ರೌರ್ಯ ಎಸಗುವ ಪತಿಗೆ ಅಥವಾ ಪತಿಯ ಸಂಬಂಧಿಕರಿಗೆ ಗರಿಷ್ಠ ಮೂರು ವರ್ಷ ಜೈಲು ಶಿಕ್ಷೆ ವಿಧಿಸಬಹುದು ಎಂದು ಬಿಎನ್‌ಎಸ್‌ನ ಸೆಕ್ಷನ್ 85ರಲ್ಲಿ ಹೇಳಲಾಗಿದೆ.

ಸೆಕ್ಷನ್ 86 'ಕ್ರೌರ್ಯ'ವನ್ನು ವ್ಯಾಖ್ಯಾನಿಸಿದೆ. ಮಹಿಳೆಯು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಸೃಷ್ಟಿಸುವ ಉದ್ದೇಶಪೂರ್ವಕ ನಡೆ, ಗಂಭೀರವಾದ ಗಾಯ ಆಗುವಂತೆ ಮಾಡುವುದು, ಆರೋಗ್ಯಕ್ಕೆ (ಮಾನಸಿಕ ಅಥವಾ ದೈಹಿಕ) ಅಪಾಯ ಉಂಟುಮಾಡುವುದು ಅಥವಾ ವರದಕ್ಷಿಣೆ ಕೊಡಬೇಕು ಎಂದು ಕಿರುಕುಳ ನೀಡುವುದು ಕ್ರೌರ್ಯ ಎಂದು ಅದರಲ್ಲಿ ಹೇಳಲಾಗಿದೆ. ಇಂತಹ ಪರಿಸ್ಥಿತಿಗಳಲ್ಲಿ ಶಿಕ್ಷೆಯು ಏಳು ವರ್ಷಗಳಿಗಿಂತ ಕಡಿಮೆ ಇಲ್ಲದ ಜೈಲುವಾಸ ಎಂದು ಬಿಎನ್‌ಎಸ್‌ನ ಸೆಕ್ಷನ್ 80(1)ರಲ್ಲಿ ಹೇಳಲಾಗಿದೆ. ಜೀವಾವಧಿ ಜೈಲುಶಿಕ್ಷೆಯನ್ನೂ ವಿಧಿಸಲು ಅವಕಾಶವಿದೆ.

ಈ ಪ್ರಕರಣದಲ್ಲಿ ಅತ್ತೆಯು ಮಾಧ್ಯಮಗಳಿಗೆ ಸಂದರ್ಶನ ನೀಡುವ ಮೂಲಕ, ಟ್ವಿಶಾ ಅವರು ಹಲವು ಮಂದಿಯ ಜೊತೆ ಸಂಬಂಧ ಹೊಂದಿದ್ದರು ಎನ್ನುವ ಮೂಲಕ, ಮರಿಜುವಾನಾ ಮತ್ತು ಅಂತಹ ಇತರ ಮಾದಕವಸ್ತುಗಳನ್ನು ಸೇವಿಸುತ್ತಿದ್ದರು ಎನ್ನುವ ಮೂಲಕ, ಮಾನಸಿಕ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು ಎನ್ನುವ ಮೂಲಕ, ಕುಟುಂಬದಲ್ಲಿ ಸರಿಯಾಗಿ ಹೊಂದಿಕೊಳ್ಳುತ್ತಿರಲಿಲ್ಲ ಎನ್ನುವ ಮೂಲಕ ತಮ್ಮ ತಪ್ಪನ್ನು ತಾವೇ ಮತ್ತೆ ಮತ್ತೆ ತೋರಿಸಿಕೊಂಡಿದ್ದಾರೆ. ಗಿರಿಬಾಲಾ ಸಿಂಗ್ ಅವರಿಗೆ ತಕ್ಷಣವೇ ಜಾಮೀನು ಮಂಜೂರು ಮಾಡಿದ ನ್ಯಾಯಾಧೀಶರಿಗೆ ಹಾಗೂ ಭೋಪಾಲ್ ಪೊಲೀಸರಿಗೆ ಕ್ರೌರ್ಯ ತಡೆಯುವ ಮತ್ತು ವರದಕ್ಷಿಣೆ ಕಿರುಕುಳವನ್ನು ತಡೆಯುವ ಉದ್ದೇಶದ ಕಾನೂನುಗಳ ಬಗ್ಗೆ ಅರಿವು ಇರಲಿಲ್ಲವೇ?

ಒಂದು ಸಂಕಥನವನ್ನು ಸೃಷ್ಟಿಸಬೇಡಿ ಎಂದು, ತಾವೇ ವಿಚಾರಣೆ ನಡೆಸಬಾರದು ಎಂದು ಮಾಧ್ಯಮಗಳನ್ನು ಉದ್ದೇಶಿಸಿ ಸುಪ್ರೀಂ ಕೋರ್ಟ್ ಆಡಿದ ಮಾತುಗಳು ಕೂಡ ನಿರಾಸೆ ಮೂಡಿಸುವಂತೆ ಇದ್ದವು. ನಿವೃತ್ತ ನ್ಯಾಯಾಧೀಶೆ ಗಿರಿಬಾಲಾ ಸಿಂಗ್ ಬಗ್ಗೆ, ಭೋಪಾಲ್ ಪೊಲೀಸರ ಬಗ್ಗೆ ಅಥವಾ ಹತ್ತು ದಿನಗಳ ಕಾಲ ತಲೆಮರೆಸಿಕೊಂಡಿದ್ದ ವಕೀಲನ (ಟ್ವಿಶಾ ಪತಿ) ಬಗ್ಗೆ ಯಾವುದೇ ಮಾತನ್ನು ಅದು ಆಡಿಲ್ಲ.

ಈ ಪ್ರಕರಣ ಹಾಗೂ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ವ್ಯವಸ್ಥೆಯ ಈ ಸೋಲು 'ಮಾಧ್ಯಮ ವಿಚಾರಣೆ' ಬಗ್ಗೆ ಮಾತನಾಡುವವರ ಬಾಯಿ ಮುಚ್ಚಿಸಬೇಕು. ಈ ಪ್ರಕರಣವನ್ನು ಮಾಧ್ಯಮಗಳು ಕೈಗೆತ್ತಿಕೊಳ್ಳದೆ ಇರುತ್ತಿದ್ದರೆ ನಾವು ಎಲ್ಲಿರುತ್ತಿದ್ದೆವು? ಮಾಧ್ಯಮಗಳು ಮುಂದಡಿ ಇರಿಸದೆ ಇದ್ದಿದ್ದರೆ ಪ್ರಕರಣವನ್ನು ನಾಚಿಕೆಬಿಟ್ಟು ಮುಚ್ಚಿಹಾಕಲು ಯತ್ನಿಸಿದ್ದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಗೊತ್ತಾಗುತ್ತಿತ್ತೇ? ಹೀಗಾಗಿ, ಕನಿಷ್ಠಪಕ್ಷ ಈ ಪ್ರಕರಣದಲ್ಲಿಯಾದರೂ ನಾವು 'ಮಾಧ್ಯಮಗಳೇ ನಡೆಸುವ ವಿಚಾರಣೆಗೆ ಜಯವಾಗಲಿ' ಎಂದು ಹೇಳಬೇಕು.



ವಾಚಕರ ವಾಣಿ

ವಿಧಾನಸೌಧವು 'ಯಜ್ಞಕುಂಡ' ಆಗದಿರಲಿ

ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಪಡೆಯಲು ಆವೇಶಕ್ಕೆ ಒಳಗಾಗಲಿಲ್ಲ. ತಾಳ್ಮೆಯಿಂದ ವರ್ತಿಸಿದ್ದರಿಂದ ಗೆಲುವು ಸಂದಿದೆ. ಸಿದ್ದರಾಮಯ್ಯನವರಿಗೂ ಗೌರವಯುತ ವಿದಾಯ ಸಿಕ್ಕಿದೆ. ಹೈಡ್ರಾಮಾ ಇಲ್ಲದೆ ಅಧಿಕಾರದ ತ್ಯಾಗ ಆಗಿದೆ. ಹೈಕಮಾಂಡ್ ಹೇಳಿದಂತೆ ಎಲ್ಲರೂ ನಡೆದುಕೊಂಡಿದ್ದಾರೆ. ಡಿಕೆಶಿಗೆ ರಾಜಕೀಯ, ಸಂಘಟನೆ, ಸಚಿವರಾಗಿ ಅಧಿಕಾರ ನಿಭಾಯಿಸಿರುವ ಅನುಭವವಿದೆ. ಆದರೆ, ಅವರ ನಂಬಿಕೆಗಳು ಸರ್ಕಾರದ ನೀತಿಗೆ ಅಡ್ಡಿಬಾರದಿದ್ದರೆ ಸಾಕು. ಬೇರೊಬ್ಬರು ಅವರ ನಂಬಿಕೆಗಳನ್ನು ವಿಜೃಂಭಿಸಿ ಅವರ ಘನತೆಗೆ ಚ್ಯುತಿ ತಾರದಿರಲಿ. ಈಗಾಗಲೇ ಪುರೋಹಿತರು, ಜ್ಯೋತಿಷಿಗಳು ಕುಂಕುಮಧಾರಿಗಳಾಗಿ ಹೊಸ ಶಾಲು ಹೊದ್ದುಕೊಂಡು ಪೂಜೆ, ಯಜ್ಞಯಾಗಾದಿಗೆ ಸಿದ್ಧರಾಗಿದ್ದಾರೆ. ವಿಧಾನಸೌಧವನ್ನು 'ಯಜ್ಞಕುಂಡ' ಮಾಡಬೇಡಿ; ಸರ್ಕಾರಿ ಕಚೇರಿಯಲ್ಲಿ ಮೌಢ್ಯ ಬೇಡ. ಸಂವಿಧಾನವೇ ನಿಮ್ಮ ದೇವರಾಗಲಿ. ಸರ್ವರ ಒಳಿತಿಗೆ ಪ್ರಜಾಪ್ರಭುತ್ವ ಉಸಿರಾಗಲಿ.

ಆರ್.ಜಿ. ಹಳ್ಳಿ ನಾಗರಾಜ, ಬೆಂಗಳೂರು

ಜನತಂತ್ರಕ್ಕೆ 'ಪುತ್ರ ವ್ಯಾಮೋಹ'ದ ಮೈಲಿಗೆ

ಸಿದ್ದರಾಮಯ್ಯನವರು ತಮ್ಮ ಪುತ್ರ ಯತೀಂದ್ರರ 'ರಾಜಕೀಯ ಪದೋನ್ನತಿ'ಗಾಗಿ ಹೈಕಮಾಂಡ್ ಬೆಂಬಲ ಕೋರಿದ್ದಾರೆ. ಇದು ಅವರ ಘನತೆಗೆ ತಕ್ಕುದಲ್ಲದ ನಡೆ. ಸುದೀರ್ಘವಾಗಿ ರಾಜಕೀಯದಲ್ಲಿದ್ದರೂ ಮಗನಿಗಾಗಿ ಲಾಬಿ ಮಾಡಿದರು ಎಂಬ ಸುದ್ದಿಯು ಅವರ ಅಭಿಮಾನಿಗಳಿಗೆ ಕಸಿವಿಸಿ ಉಂಟುಮಾಡಿದೆ. ಕಳೆದ ಮೂರ್ನಾಲ್ಕು ದಶಕಗಳಿಂದ ರಾಜ್ಯ ರಾಜಕಾರಣದಲ್ಲಿ ಪ್ರಭಾವ ಬೀರಿದ ಪ್ರಮುಖರೆಂದರೆ ಎಚ್.ಡಿ. ದೇವೇಗೌಡ, ಬಿ.ಎಸ್. ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ. ದೇವೇಗೌಡರ ಕುಟುಂಬ ಪ್ರೀತಿ ಜನಜನಿತ; ಯಡಿಯೂರಪ್ಪನವರು ಮಕ್ಕಳ ಕೈಗೊಂಬೆಯಾದರು. ಇವರಿಬ್ಬರಿಗೆ ಹೋಲಿಸಿದರೆ ಸಿದ್ದರಾಮಯ್ಯನವರು ಪುತ್ರ ಪ್ರೇಮದ ವಿಷಯದಲ್ಲಿ ಅವರಿಬ್ಬರಷ್ಟು ಟೀಕೆಗೆ ಗುರಿಯಾಗಿರಲಿಲ್ಲ. ಈಗ ಅವರದು 'ಕಡಿಮೆ ಕುಟುಂಬ ಪ್ರೀತಿ' ಎಂದು ಜನತೆ ಸಮಾಧಾನಪಡುವ ಸ್ಥಿತಿ ಬಂದಿದೆ.

ಟಿ. ಜಯರಾಂ, ಕೋಲಾರ

ರಾಜಕೀಯದ ಆಟ: ಜನಹಿತ ಗೌಣ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗಿದ್ದಾರೆ. ರಾಜ್ಯದಲ್ಲಿರುವ ಹಲವಾರು ಸಮಸ್ಯೆಗಳ ನಡುವೆ ಈಗ 'ಕೈ' ನಾಯಕರ ಹೊಸ ಆಟವೂ ಶುರುವಾಗಿದೆ. ಎಲ್ಲಾ ಸಮುದಾಯದವರು ತಮ್ಮ ನಾಯಕರಿಗೆ ಸಚಿವ ಸ್ಥಾನ, ಡಿಸಿಎಂ ಹುದ್ದೆ, ಕೆಪಿಸಿಸಿ ಅಧ್ಯಕ್ಷಗಿರಿ ಹೀಗೆ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಆದರೆ, ಸಮಸ್ಯೆಗಳ ಬಗ್ಗೆ ಯಾರೊಬ್ಬರೂ ಮಾತನಾಡುತ್ತಿಲ್ಲ. ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣ ವ್ಯವಸ್ಥೆಯು ಹಳ್ಳ ಹಿಡಿದಿದೆ. ಶಿಕ್ಷಕರ ಕೊರತೆ ಹೆಚ್ಚಾಗಿದೆ. ಈ ಬಗ್ಗೆ ಯಾರೊಬ್ಬರು ಧ್ವನಿ ಎತ್ತದಿರುವುದು ದುರಂತ.

ದುರಗಪ್ಪ ಬಂಡೇಭಾವಿ, ಲಿಂಗಸುಗೂರು

ಕೋರ್ಸ್ ರದ್ದು: ಖಾಸಗಿ ಕಾಲೇಜಿಗೆ ವರ

ಆರ್ಥಿಕ ಹೊರೆ ತಗ್ಗಿಸಲು ಕಾಲೇಜು ಶಿಕ್ಷಣ ಇಲಾಖೆಯು ಸರ್ಕಾರಿ ಪದವಿ ಕಾಲೇಜುಗಳಲ್ಲಿ 458 ಕೋರ್ಸ್ ರದ್ದುಪಡಿಸಿದೆ. ಇದು ಖಾಸಗಿ ಕಾಲೇಜುಗಳಿಗೆ ವರದಾನವಾಗಲಿದೆ. ಮತ್ತೊಂದೆಡೆ ಬಡ, ಮಧ್ಯಮವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಲಿದೆ. ಏಕಾಏಕಿ ರದ್ದು ಮಾಡದೆ ವಿದ್ಯಾರ್ಥಿಗಳು ಸೇರಿಕೊಂಡ ಕಾಲೇಜುಗಳಲ್ಲಿ ಆ ಕೋರ್ಸ್ ನಡೆಯುವಂತೆ ನೋಡಿಕೊಳ್ಳುವ ಅಥವಾ ಲಭ್ಯ ವಿದ್ಯಾರ್ಥಿಗಳು ಇಲ್ಲದಿದ್ದರೆ ಹತ್ತಿರದ ಕಾಲೇಜುಗಳಿಗೆ ವರ್ಗಾಯಿಸುವ ಜವಾಬ್ದಾರಿಯನ್ನು ಇಲಾಖೆಯೇ ಹೊರಬೇಕಿದೆ. ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆ ಆಗುತ್ತಿರುವುದಕ್ಕೆ ಪೂರ್ಣಾವಧಿ ಅಧ್ಯಾಪಕರಿಗೆ ಆಗಿ ಉಳಿಯುವ ಬೋಧನಾ ಕಾರ್ಯಕ್ಕೆ ಅತಿಥಿ ಉಪನ್ಯಾಸಕರನ್ನು ಸಕಾಲದಲ್ಲಿ ನೇಮಿಸಿಕೊಳ್ಳದಿರುವುದೇ ಕಾರಣ. ಜೊತೆಗೆ, ಶೈಕ್ಷಣಿಕ ಅವಧಿ ಮುಗಿಯುವ ಮೊದಲೇ ಅವರನ್ನು ಕೆಲಸದಿಂದ ಕೈಬಿಟ್ಟು ಆ ಹೊರೆಯನ್ನು ಪೂರ್ಣಾವಧಿ ಅಧ್ಯಾಪಕರಿಗೆ ಹೊರಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ದಲಿತ ಸಿ.ಎಂ ಪಟ್ಟ: ಗಾಳ ನುಂಗಿದ ಮೀನು

'ರಾಜಕಾರಣದಲ್ಲಿಯೂ ಅಸ್ಪೃಶ್ಯತೆ!' ಲೇಖನವು (ಲೇ: ರವೀಂದ್ರ ಭಟ್ಟ, ಪ್ರ.ವಾ., ಮೇ 29) ಸಕಾಲಿಕವಾಗಿದೆ. ಭಾರತದ ರಾಜಕಾರಣಿಗಳ ಆತ್ಮಸಾಕ್ಷಿಯನ್ನು ಈ ಬರಹ ಕೆಣಕುವಂತಿದೆ. ಈ ದೇಶದ ಪಕ್ಷ ರಾಜಕಾರಣದ ಧುರೀಣರು ಅನಿಸಿಕೊಂಡವರಿಗೆ ಇದನ್ನು ಓದಿ ಒಂದಿಷ್ಟಾದರೂ ಮುಜುಗರವಾಗಬೇಕು.

ಭಾರತ ಈ ಹೊತ್ತಿಗೂ ಸ್ಪೃಶ್ಯ ಭಾರತ, ಅಸ್ಪೃಶ್ಯ ಭಾರತವೇ ಆಗಿದೆ. ಕಾಂಗ್ರೆಸ್‌ನಲ್ಲಿ ನೆಹರೂ ಕಾಲದಿಂದ ಕೇಳಲಿ ಬಿಡಲಿ ಆ ಪಕ್ಷಕ್ಕೆ ದಲಿತರು ನಿಷ್ಠೆಯಿಂದ ನಡೆದುಕೊಂಡು ಬಂದಿದ್ದಾರೆ. ಆದರೆ, ಎಂಟು ದಶಕ ಕಳೆದರೂ ಕರ್ನಾಟಕಕ್ಕೆ ದಲಿತ ಸಮುದಾಯದಿಂದ ಒಬ್ಬರನ್ನೂ ಮುಖ್ಯಮಂತ್ರಿ ಮಾಡಲಿಲ್ಲ ಎನ್ನುವುದು ಪ್ರಜಾಪ್ರಭುತ್ವದ ಸೌಂದರ್ಯಕ್ಕೆ ಕಪ್ಪುಚುಕ್ಕೆಯೋ ಊನವೋ ಧಕ್ಕೆಯೋ ಎನ್ನುವುದನ್ನು ವಿವೇಕವಂತರು ತಿಳಿಯಬೇಕು. ಸ್ವಾತಂತ್ರ್ಯಾನಂತರ ಸಂವಿಧಾನ ಎನ್ನುವುದು ಈ ದೇಶದ ಜನಸಾಮಾನ್ಯರು ಅದರಲ್ಲೂ ಶೋಷಿತರು, ಅಸ್ಪೃಶ್ಯರಿಗೆ ಉಸಿರಾಡುವ ಉಸಿರೇ ಆಗಿದೆ. ಅಂಬೇಡ್ಕರ್ ಎಂಬ ಅಸಮಾನ್ಯ ಅರಿವಿನ ಅಂತಃಕರಣದ ಮನುಷ್ಯರೊಬ್ಬರೂ, ಈ ದೇಶದ ಜನ ತನ್ನಂತೆ ಇರುವವರನ್ನು ಕಣ್ಣುಬಿಟ್ಟು ನೋಡುತ್ತಾರೆ ಅನ್ನಿಸಿತ್ತು. ಆದರೆ, ಈ ಹೊತ್ತಿಗೂ ಇವರ ಕಣ್ಣುಗಳಲ್ಲೇ ಅಸ್ಪೃಶ್ಯತೆ ಎದ್ದು ಕಾಣಿಸುತ್ತಿದೆ ಎನ್ನುವುದನ್ನು ಲೇಖನ ತೆರೆದಿಟ್ಟಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಆಗಲಿ ಆ ಪಕ್ಷದ ಪಂಚಾಂಗದಲ್ಲಿ ಸಂವಿಧಾನದ ಮಕ್ಕಳಿಗೆ ಅರ್ಥಾತ್ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಇಲ್ಲ ಎಂದು ವಿಧಾನಸೌಧದ ಮುಂದೆ ದೊಡ್ಡದಾಗಿ ಅಂಬೇಡ್ಕರ್‌ಗೆ ಕಾಣಿಸುವಂತೆ ಬರೆದು ಹಾಕಿದರೆ ನಾವು ಕಾಯುವಂತೆಯೂ ಇಲ್ಲ; ನೋಯುವಂತೆಯೂ ಇಲ್ಲ.

ಸುಬ್ಬು ಹೊಲೆಯಾರ್, ಬೆಂಗಳೂರು

ಚಾವಟಿ

ಪುಸ್ತಕ ಸಂಸ್ಕೃತಿಗೆ ಸಂಕಷ್ಟ

ಪುಸ್ತಕ ಖರೀದಿಗೆ ಸರ್ಕಾರ ರೂಪಿಸಿದ ಹಲವು ಯೋಜನೆಗಳು ನಿಂತುಹೋಗಿವೆ. ಏಳು ಕೋಟಿ ಜನಸಂಖ್ಯೆಯ ರಾಜ್ಯದಲ್ಲಿ ಇಂದು ಒಬ್ಬ ಲೇಖಕ–ಪ್ರಕಾಶಕ ಪುಸ್ತಕವೊಂದರ ಸಾವಿರ ಪ್ರತಿಗಳನ್ನು ಮಾರಲೂ ಹೆಣಗಾಡುತ್ತಿರುವುದು ವಿಪರ್ಯಾಸವೇ ಸರಿ.

ಸೃಷ್ಟಿ ನಾಗೇಶ್, ಪ್ರಕಾಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ದೇಶದ ಷೇರುಪೇಟೆಗಳಿಂದ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂಪಡೆಯುತ್ತಿದ್ದಾರೆ. ಚಿಲ್ಲರೆ ಹೂಡಿಕೆದಾರರೂ ನಿರ್ಗಮಿಸುತ್ತಿದ್ದಾರೆ. ಕಿರಾಣಿ ಅಂಗಡಿಯಿಂದ ಹಿಡಿದು ಪೆಟ್ರೋಲ್ ಬಂಕ್, ಷೇರುಪೇಟೆವರೆಗೂ ದೇಶದ ಜನರು ಹಣ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಹೊಣೆ ಯಾರು?

ಪ್ರಿಯಾಂಕ್ ಖರ್ಗೆ, ಮಾಜಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 1-6-2001

• **ಪ್ರಾಥಮಿಕ ಶಿಕ್ಷಣ 8 ವರ್ಷ**

ಬೆಂಗಳೂರು, ಮೇ 31– ಅಖಿಲ ಭಾರತ ಮಾದರಿಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ 5 + 3 + 2 ವರ್ಷಗಳ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣ ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೆ ತರಲು ಇಂದು ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿತು.

ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ, ಆರರಿಂದ ಎಂಟನೇ ತರಗತಿವರೆಗೆ ಮಾಧ್ಯಮಿಕ, ಒಂಬತ್ತು ಹಾಗೂ 10ನೇ ತರಗತಿಗಳನ್ನು ಪ್ರೌಢಶಿಕ್ಷಣ ಎಂದು ಪರಿಗಣಿಸಲಾಗುತ್ತದೆ.

'ವಿಜ್ಞಾನಿ ಡಾ. ರಾಜಾರಾಮಣ್ಣ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಶಿಕ್ಷಣ ಕಾರ್ಯಪಡೆ ರಾಜ್ಯದಲ್ಲಿ ಈಗಿರುವ 4 + 3 + 3 ಬದಲಿಗೆ ಈ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಸಲಹೆ ಮಾಡಿತ್ತು' ಎಂದು ವಾರ್ತಾ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 1-6-1951

• **ರಾಜ್ಯಾಂಗ ತಿದ್ದುಪಡಿ ಚರ್ಚೆಗೆ ಪೂರ್ಣ ಒಪ್ಪಿಗೆ**

ನವದೆಹಲಿ, ಮೇ 31– ಭಾರತ ರಾಜ್ಯಾಂಗವನ್ನು ತಿದ್ದುಪಡಿ ಮಾಡಲು ಮಹಾ ಪ್ರಧಾನಿ ಪಂಡಿತ್ ನೆಹರೂರವರು ಮಂಡಿಸಿರುವ ರಾಜ್ಯಾಂಗ ತಿದ್ದುಪಡಿ ಮಸೂದೆಯನ್ನು ಸೆಲೆಕ್ಟ್ ಸಮಿತಿಯಿಂದ ವರದಿ ಮಾಡಲ್ಪಟ್ಟ ರೀತಿಯಲ್ಲಿ ಪರಿಶೀಲಿಸಬೇಕೆಂಬ ಸೂಚನೆಯನ್ನು ಪಾರ್ಲಿಮೆಂಟ್ ಸಭೆಯು ಪೂರ್ಣ ಬಹುಮತದಿಂದ ಒಪ್ಪಿತು.

ಈ ಸೂಚನೆಗೆ 246 ಮಂದಿ ಸದಸ್ಯರು ಪರವಾಗಿಯೂ, 14 ಮಂದಿ ಸದಸ್ಯರು ವಿರೋಧವಾಗಿಯೂ ಓಟು ಮಾಡಿದರು.

ನೆಹರೂರವರೂ ಮತ್ತು ಗೃಹ ಸಚಿವ ರಾಜಗೋಪಾಲಾಚಾರಿಯವರೂ, ಮಸೂದೆಯ ಬಗ್ಗೆ ವಿರುದ್ಧಾಭಿಪ್ರಾಯವುಳ್ಳವರ ಮುಖ್ಯವಾಗಿ ದೇಶದ ಪತ್ರಿಕೆಗಳ ಶಂಕೆಯನ್ನು ನಿವಾರಿಸಲು ಪ್ರಯತ್ನಪಟ್ಟರು.

ಚುರುಮುರಿ

ಬಲಿಪಶು ಯಾರು?

• ಸುಮಂಗಲಾ

'ಟ್ರಂಪಣ್ಣ ಮೃಗಾಲಯಕ್ಕೆ ಸ್ಥಳಾಂತರ!' ಬೆಕ್ಕಣ್ಣ ಜೋರಾಗಿ ವದರಿತು.

'ಹೌದಾ... ಎದಕ್ಕೆ? ಎಲ್ಲಿಯ ಮೃಗಾಲಯಕ್ಕೆ?' ಎಂದೆ ಅಚ್ಚರಿಯಿಂದ.

'ಬಾಂಗ್ಲಾ ಮೃಗಾಲಯಕ್ಕೆ!' ಎಂದು ಸುದ್ದಿ ತೋರಿಸಿ ಪಕಪಕನೆ ನಕ್ಕಿತು.

ಬಾಂಗ್ಲಾದ ಎಮ್ಮೆಯೊಂದರ ತಲೆಗೂದಲು ಟ್ರಂಪಣ್ಣನ ಕೇಶಶೈಲಿಯನ್ನೇ ಹೋಲುತ್ತಿದ್ದರಿಂದ 'ಟ್ರಂಪ್ ಎಮ್ಮೆ' ಎಂದು ಭಾರೀ ಜನಪ್ರಿಯವಾಯಿತಂತೆ. ಬಾಂಗ್ಲಾ ಸರ್ಕಾರ ಅದನ್ನು ಬಕ್ರೀದ್ ಬಲಿಯಿಂದ ಬಚಾವು ಮಾಡಿ ಮೃಗಾಲಯಕ್ಕೆ ಕಳಿಸಿತು ಎಂಬುದು ಸುದ್ದಿ.

'ಅದೃಷ್ಟವಂತ ಎಮ್ಮೆ, ಬಕ್ರೀದಿಗೆ ಬಲಿಯಾಗದು ತಪ್ಪಿತು! ಆದ್ರೆ ಇಲ್ಲಿ ಬಕ್ರೀದಿಗೆ ಹುಲೀನೆ ಬಲಿಯಾಯಿತು!' ಬೆಕ್ಕಣ್ಣ ಮರುಗಿತು.

'ಹೈಕಮಾಂಡ್ ಅಂದ್ರ ಏನಂತ ತಿಳಿದೀಯಲೇ... ತೆಲಿಕೆಳಗಾಗಿ ನೀರೊಳಗೆ ನಿಂದ್ರು ಅಂದ್ರೂ ನಿಲ್ಲಬಕು!' ಎಂದೆ.

'ಭಾಳ ದೊಡ್ಡ ಪ್ರಜಾಪ್ರಭುತ್ವ ದೇಶ! ಆದ್ರೆ ಎಲ್ಲಾ ಪಕ್ಷದಾಗೂ ಹೈಕಮಾಂಡ್ ಆಜ್ಞೆಯೇ ಅಂತಿಮ, ಅವರು ಹೇಳಿದಂಗ ಕುಣೀಬಕು' ಬೆಕ್ಕಣ್ಣ ತಲೆ ಚಚ್ಚಿಕೊಂಡಿತು.

'ಹೂಂ ಮತ್ತ... ಪ್ರತಿಯೊಂದು ಪಕ್ಷದೊಳಗೂ ಒಬ್ಬರು ಅಥವಾ ಇಬ್ಬರು ಈ ಹೈಕಮಾಂಡಿನ ಹೈಪವರ್ ವ್ಯಕ್ತಿ ಆಗಿರತಾರೆ!' ಎಂದೆ.

'ಆದ್ರೂ ಕಮಲಪಕ್ಷ ಬಿಟ್ಟರೆ, ಕೈಪಕ್ಷ, ದಳಪಕ್ಷ ಇತ್ಯಾದಿ ಎಲ್ಲ ಪಕ್ಷದೊಳಗೂ ಈ ಹೈಪವರ್ ವಂಶಪಾರಂಪರ್ಯ!' ಎಂದು ಬೆಕ್ಕಣ್ಣ ನಕ್ಕಿತು.

'ಯಾರು ಅಧಿಕಾರಕ್ಕೆ ಬಂದ್ರೇನು... ಶ್ರೀಸಾಮಾನ್ಯನ ಬಲಿಪಶುತನವೂ ವಂಶಪಾರಂಪರ್ಯ' ಎಂದೆ ಸಿಟ್ಟಿನಿಂದ.

'ಅಮೆರಿಕದಲ್ಲಿ ಯಾರೇ ಆದ್ರೂ ಎರಡೇ ಸಲ ಪ್ರೆಸಿಡೆಂಟ್ ಆಗಬೌದು. ನಮ್ಮಲ್ಲೂ ಹಂಗೇ ಪಿಎಂ, ಸಿಎಂ, ಮಂತ್ರಿ ಅಥವಾ ಎಂಪಿ ಯಾವುದೇ ಹುದ್ದೆ ಆದ್ರೂ ಎರಡೇ ಸಲ ಆಗಬೌದು ಅಂತ ಕಾನೂನು ಮಾಡಬಕು' ಬೆಕ್ಕಣ್ಣ ಗುರುಗುಟ್ಟಿತು.

'ಅಂಥ ಕಾನೂನು ತಂದ್ರೆ ಮೊದ್ಲು ಮೋದಿ ಮಾಮಾ ಕುರ್ಚಿಯಿಂದ ಇಳಿಬೇಕಾಗತೈತಿ. ತೊಂಬತ್ನಾಲ್ಕರ ದೇಗೌಅಜ್ಜಾರಿನ್ನ ಮತ್ತೆ ರಾಜ್ಯಸಭೆಗೆ ಕಳಿಸಕ್ಕೆ ಆಗಲ್ಲ'.

ತಟ್ಟನೆ ಎಚ್ಚತ್ತುಕೊಂಡ ಬೆಕ್ಕಣ್ಣ, 'ಇವರಿಬ್ಬರನ್ನ ಬಿಟ್ಟು, ಉಳಿದವರಿಗೆ ಕಂಡೀಶನ್ ಅಪ್ಲೈ!' ಎಂದು ಶಾಣೇತನದ ನಗು ಬೀರಿತು.

ಸಂಗತ

ಸಿಜೆಪಿ: ರೋಗಗ್ರಸ್ತವಲ್ಲ, ಸಂತ್ರಸ್ತ ಮನಃಸ್ಥಿತಿ!

ದೇಶವನ್ನು ಜನರ ರೂಪದಲ್ಲಿ ನೋಡದೆ ಮಣ್ಣಿನ ರೂಪದಲ್ಲಿ ನೋಡುವವರಿಗೆ ಜನಸಾಮಾನ್ಯರ ಸಂಕಷ್ಟದ ಅರಿವು ದೇಶದ್ರೋಹವಾಗಿ ಕಾಣಿಸುವುದು ಸಹಜ.

• ಪು.ಸೂ. ಲಕ್ಷ್ಮೀನಾರಾಯಣ ರಾವ್

'ವಿರೋಧ ಪಕ್ಷಗಳು ಪ್ರಜಾಪ್ರಭುತ್ವದ ಕಾವಲುನಾಯಿಗಳು' ಎನ್ನುವ ಮಾತಿನ ಮೌಲ್ಯವನ್ನರಿಯದ ಮಂದಿ ಆಡಳಿತದಲ್ಲಿ ಇದ್ದರೆ, ತಮಗೆ ಇಷ್ಟವಾಗದ ಧ್ವನಿ ಎತ್ತಿದವರಿಗೆಲ್ಲ ದೇಶದ್ರೋಹದ ಪಟ್ಟ ಕಟ್ಟುತ್ತಾ, ಅಂತಹವರ ಬಾಯಿ ಕಟ್ಟಿಹಾಕುವ ಸರ್ವ ಪ್ರಯತ್ನಗಳನ್ನೂ ಮಾಡುತ್ತಾರೆ. ಆ ಮೂಲಕ ಸಮಾಜದಲ್ಲಿ ಒಂದು ರೀತಿಯ ಭಯೋತ್ಪಾದನೆ ರೂಪುಗೊಂಡು, ನಿರಂಕುಶಪ್ರಭುತ್ವಕ್ಕೆ ದಾರಿಯಾಗುತ್ತದೆ. ಇಂಥದೊಂದು ಸ್ಥಿತಿಯನ್ನು ಕೋಟ ಶ್ರೀನಿವಾಸ ಪೂಜಾರಿ ಅವರ 'ಜಿರಲೆಗಳ ಹೆಸರಿನಲ್ಲಿ ಬುದ್ಧಿಜೀವಿಗಳ ತರಲೆ' ಲೇಖನ (ಪ್ರ.ವಾ., ಮೇ 30) ಸೂಚಿಸುವಂತಿದೆ.

ತೆಲುಗಿನ ಕವಿ ಗುರಜಾಡ ಅಪ್ಪಾರಾವ್ ಅವರು, 'ದೇಶವೆಂದರೆ ಮಣ್ಣು ಅಲ್ಲವೋ, ದೇಶವೆಂದರೆ ಮನುಷ್ಯರು ಕಣೋ' ಎಂದು ಹೇಳಿದ್ದಾರೆ. ದುರದೃಷ್ಟವಶಾತ್, ದೇಶದ ಹಿತರಕ್ಷಣೆಯ ಬಗ್ಗೆ ಭಾವಾವೇಶದಿಂದ ಮಾತನಾಡುವ ಅನೇಕ ರಾಜಕಾರಣಿಗಳಿಗೆ ದೇಶವೆಂದರೆ ಮಣ್ಣೇ ಹೊರತು, ಜೀವಂತ ಜನರಲ್ಲ! ಅದರಲ್ಲೂ ಜನಸಾಮಾನ್ಯರ ಅಸ್ತಿತ್ವದ ಬಗ್ಗೆ ಅವರಿಗೆ ಲಕ್ಷ್ಯವೇ ಇಲ್ಲ.

ಜವಾಹರಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದಾಗ, ಅವರ ಕಟು ಟೀಕಾಕಾರರಲ್ಲಿ ರಾಮಮನೋಹರ ಲೋಹಿಯಾ ಪ್ರಮುಖರಾಗಿದ್ದರು. ಅವರು ಚುನಾವಣೆಯಲ್ಲಿ ಸೋತು ಲೋಕಸಭೆಗೆ ಬಾರದೆಹೋದಾಗ, 'ಇಂದು ಲೋಕಸಭೆ ಕಳಾಹೀನ ಆಗಿದೆ' ಎಂದು ನೆಹರೂ ಬೇಸರದಿಂದ ಹೇಳಿದ್ದರಂತೆ. ಉಪ ಚುನಾವಣೆಯಲ್ಲಿ ಲೋಹಿಯಾ ಅವರು ಗೆದ್ದು ಲೋಕಸಭೆಗೆ ಬಂದಾಗ, 'ಈಗ ನಮ್ಮ ಸಭೆಗೆ ಕಳೆ ಬಂದಿದೆ' ಎಂದರಂತೆ. ಅದೇ ರೀತಿಯಲ್ಲಿ, ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿ ತಮ್ಮ ಕಚೇರಿಯನ್ನು ಪ್ರವೇಶಿಸಿದಾಗ, ಯಾರೋ ಕಿಡಿಗೇಡಿಗಳು ಅಲ್ಲಿದ್ದ ನೆಹರೂ ಫೋಟೊವನ್ನು ತೆಗೆದುಬಿಟ್ಟಿದ್ದರಿಂದ ಸಿಡಿಮಿಡಿಗೊಂಡು ಮತ್ತೆ ಆ ಫೋಟೊವನ್ನು ಅಲ್ಲೇ ಹಾಕಿಸಿದರಂತೆ. ಇಂತಹ ದೊಡ್ಡವರ ನಡೆಗಳಿಂದ ನಾವು ಪಾಠ ಕಲಿಯದಿದ್ದರೆ ದೇಶಭಕ್ತರಿರಲಿ, ಮನುಷ್ಯರು ಅನ್ನಿಸಿಕೊಳ್ಳುವ ಯೋಗ್ಯತೆಯನ್ನೂ ಕಳೆದುಕೊಳ್ಳುತ್ತೇವೆ.

ಇದ್ದಕ್ಕಿದ್ದಂತೆ ಜಿರಲೆ ಜನತಾ ಪಕ್ಷ (ಸಿಜೆಪಿ) ಹುಟ್ಟಿದ್ದು ಎಲ್ಲರಿಗೂ ಅಚ್ಚರಿಯ ಸಂಗತಿ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಬಾಯಿಯಿಂದ ದಯನೀಯ ಸ್ಥಿತಿಯಲ್ಲಿರುವ ನಿರುದ್ಯೋಗಿ ಯುವಕರ ಬಗ್ಗೆ 'ಜಿರಲೆ', 'ಪರಾವಲಂಬಿಗಳು' ಎಂಬ ಪದಗಳು ಪ್ರಯೋಗವಾದದ್ದೇ ನೆಪವಾಗಿ ಜಿರಲೆ ಪಕ್ಷದ ಸ್ಥಾಪನೆಯಾಗಿಬಿಟ್ಟಿತು! ಅದು ಅಂತರ್ಜಾಲದ ಮಾಯಾ ಮೋಹನಾಂಗಿಯಾಗಿ ಪರಿಣಮಿಸಿಬಿಟ್ಟಿತು! ಕೆಲವೇ ದಿನಗಳಲ್ಲಿ ಕೋಟಿಗಟ್ಟಲೆ ಅನುಯಾಯಿಗಳು ಹುಟ್ಟಿಕೊಂಡರು. ಈ ಬೆಳವಣಿಗೆ ಯುವಜನರಲ್ಲಿರುವ ಸಮಯಸ್ಫೂರ್ತಿಗೆ ಒಂದು ಅದ್ಭುತ ನಿದರ್ಶನ ಎನ್ನಬಹುದು. ಇದು ವಿಜ್ಞಾನದ ಹಾಗೂ ತಂತ್ರಜ್ಞಾನದ ಪವಾಡವೂ ಆಗಿದೆ.



ವಿಡಂಬನಾತ್ಮಕವಾಗಿ ಹುಟ್ಟಿಕೊಂಡ 'ಸಿಜೆಪಿ' ಮುಂದೆ ಯಾವ ರೀತಿಯಲ್ಲಿ ತನ್ನ ಪ್ರಭಾವ ಬೀರುತ್ತದೋ ತಿಳಿಯದು. ಆದರೆ, ನಮ್ಮ ದೇಶದ ಬಿಗುವಿನ ವಾತಾವರಣದಲ್ಲಿ ಅದು, ಸತ್ಯದ ನೋವು ಸ್ಫೋಟಗೊಂಡಿರುವ ಸಂಕೇತದಂತಿದೆ. ನಮ್ಮಿಂದ ದೂರದಲ್ಲೆಲ್ಲೊ ಸಿಡಿದ ಬೀಜ ನಮ್ಮ ದೇಶದಲ್ಲಿ ಚಿಗುರಾಗಿ ಪಲ್ಲವಿಸಿ, ಇಡೀ ಜಗತ್ತು ಕಣ್ಣುಬಿಟ್ಟುಕೊಂಡು ನೋಡುವ ಹಾಗೆ ಆಯಿತು. ಶಾಲೆಗಳಲ್ಲಿ ಮಕ್ಕಳಿಗೆ ಪ್ರಜಾಪ್ರಭುತ್ವದ ಅರಿವು ಮೂಡಿಸಲೆಂದು ಶಿಕ್ಷಕರು 'ಅಣಕು ಲೋಕಸಭೆ' ಎಂಬ ಚಟುವಟಿಕೆಯನ್ನು ಹಮ್ಮಿಕೊಳ್ಳುತ್ತಾರೆ. ಅಂಥದೊಂದು ಅರಿವಿನ ತಾಲೀಮಿನ ರೂಪದಲ್ಲಿ ಸದ್ಯಕ್ಕೆ ಈ ಸಿಜೆಪಿ ಜ್ವಾಲಾಮುಖಿ ಕಾಣಿಸುತ್ತಿದೆ. ಅದನ್ನು ಶ್ರೀನಿವಾಸ ಪೂಜಾರಿಯವರು 'ರೋಗಗ್ರಸ್ತ ಮನಸ್ಸು' ಎಂದು ಜರೆದಿದ್ದಾರೆ. ದೇಶದ ಯುವಜನರನ್ನು ಅವರು ಅಪನಂಬಿಕೆಯಿಂದ ಕಂಡರೂ, 'ಬುದ್ಧಿಜೀವಿಗಳ ತರಲೆ' ಎಂದು ಅಪವ್ಯಾಖ್ಯಾನ ಮಾಡಿದರೂ ಅದು ಹಾಗಾಗಲು ಸಾಧ್ಯವಿಲ್ಲ. ಬದಲಿಗೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ ಶ್ರೀನಿವಾಸ ಪೂಜಾರಿ ಅವರ ನಡೆ ಇದೆ.

1952ರ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಿದ್ದು ಕಮ್ಯುನಿಸ್ಟ್ ಪಕ್ಷದ ಎಸ್.ಎ. ಡಾಂಗೆ ಹಾಗೂ ವಿ.ಡಿ. ಸಾವರ್ಕರ್ ಎಂದು ಸ್ವತಃ ಅಂಬೇಡ್ಕರ್ ಅವರೇ ಒಂದು ಪತ್ರದಲ್ಲಿ ಬರೆದಿರುವ ದಾಖಲೆ ಇದ್ದರೂ, ಕಾಂಗ್ರೆಸ್ ಪಕ್ಷದವರು ಅಂಬೇಡ್ಕರ್ ಅವರನ್ನು ಸೋಲಿಸಿದರು ಎಂಬ ಸುಳ್ಳನ್ನು ಮಾನ್ಯ ಪೂಜಾರಿಯವರು ಪುನರುಚ್ಚರಿಸಿರುವುದು ಅವರು ಗೊಬೆಲ್ಸನ ಸಿದ್ಧಾಂತವನ್ನು ಅನುಸರಿಸುತ್ತಿರುವುದರ ನಿದರ್ಶನವಾಗಿದೆ. 'ಸಂವಿಧಾನವನ್ನು ಉಳಿಸಿ' ಎನ್ನುವ ಕಾಂಗ್ರೆಸ್ ಪಕ್ಷದ ಮತ್ತು ಪ್ರಗತಿಪರರ ಮಾತುಗಳನ್ನು 'ಜಿರಲೆ' ಸಮಾಚಾರದೊಂದಿಗೆ ತಳಕು ಹಾಕಿರುವುದು ಅಸಂಗತವಾಗಿದೆ.

ಎಸ್‌ಐಆರ್ ಕುತಂತ್ರದ ಮೂಲಕ ಕೋಟ್ಯಂತರ ಮತದಾರರ ಹಕ್ಕುಗಳನ್ನು ಕಸಿಯುತ್ತಿರುವುದಲ್ಲದೆ, ಅವರ ಪೌರತ್ವವನ್ನೂ ಪ್ರಶ್ನಿಸಲಾಗುತ್ತಿದೆ. ಈ ಅಸಾಂವಿಧಾನಾತ್ಮಕ ಚಟುವಟಿಕೆಯ ವಿರುದ್ಧ ಎದ್ದಿರುವ ಕೂಗನ್ನು ಆಕ್ಷೇಪಿಸುವುದು 'ಕೋತಿ ಮೊಸರನ್ನ ತಿಂದು ಮೇಕೆ ಮೂತಿಗೆ ಬಳಿಯಿತು' ಎಂಬ ಗಾದೆ ಮಾತನ್ನು ನಿಜಗೊಳಿಸುವಂತಿದೆ. 68 ರಾಷ್ಟ್ರಗಳಿಗೆ ಸಾಲ ಕೊಟ್ಟಿರುವುದಾಗಿ ಹೇಳುವ ಶ್ರೀಯುತರು, 60 ವರ್ಷಗಳಲ್ಲಿ ಆಗಿದ್ದ ಭಾರತದ ₹53 ಲಕ್ಷ ಕೋಟಿ ಸಾಲವನ್ನು ಈಗಿನ ಸರ್ಕಾರ ಬರೀ ಹತ್ತು ವರ್ಷಗಳಲ್ಲಿ ಸುಮಾರು ₹200 ಲಕ್ಷ ಕೋಟಿಗೆ ಏರಿಸಿರುವ ಸಾಧನೆಯನ್ನು ಮರೆಮಾಚುತ್ತಿರುವುದು ಏಕೆ?

'ಜಿರಲೆ ಪಾರ್ಟಿ'ಯ ವಿದ್ಯಮಾನದ ಪರಿಣಾಮಗಳು ಏನೇ ಇರಲಿ, ಅದು ಕೋಟ್ಯಂತರ ಜನರಿಗೆ ವಾಸ್ತವವನ್ನು ಅರಿವಿಗೆ ತರುವ ಆಶಾದಾಯಕ ಪ್ರಯತ್ನವಂತೂ ಹೌದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡೊನಾಲ್ಡ್ ಟ್ರಂಪ್ ಸರ್ಕಾರದಿಂದ ಮತ್ತೊಂದು ವಲಸೆ ವಿರೋಧಿ ನಿಯಮ

ಅಮೆರಿಕದ ಗ್ರೀನ್ ಕಾರ್ಡ್: ಭಾರತೀಯರ ಸ್ಥಿತಿ ಅನಿಶ್ಚಿತ

ಅಮೆರಿಕದ ಡೊನಾಲ್ಡ್ ಟ್ರಂಪ್ ಅವರ ಸರ್ಕಾರವು ಗ್ರೀನ್ ಕಾರ್ಡ್‌ಗೆ ಸಂಬಂಧಿಸಿ ಮತ್ತೊಂದು ಹೊಸ ನಿಯಮ ತಂದಿದ್ದು, ಅದು ಹಲವು ರೀತಿಯ ಆತಂಕ, ಗೊಂದಲಕ್ಕೆ ಕಾರಣವಾಗಿದೆ. ತಾತ್ಕಾಲಿಕ ವೀಸಾ ಅಡಿ ಅಮೆರಿಕದಲ್ಲಿದ್ದು, ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವವರು ತಮ್ಮ ಮಾತೃದೇಶದಿಂದಲೇ ಪ್ರಕ್ರಿಯೆ ಮುಂದುವರಿಸಬೇಕು ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆ ವಿಭಾಗವು (ಯುಎಸ್‌ಸಿಐಎಸ್) ಘೋಷಿಸಿದೆ. ಆ ನಿಯಮವು ಅಮೆರಿಕದಲ್ಲಿರುವ ಅನೇಕ ಭಾರತೀಯರಿಗೆ ಸಹಜವಾಗಿಯೇ ಆತಂಕ ಮೂಡಿಸಿದೆ. ವಾರದ ನಂತರ ಅಮೆರಿಕ ಸ್ಪಷ್ಟನೆ ನೀಡಿದ್ದು, ಈ ಬಗ್ಗೆ ಅಷ್ಟು ಭಯಪಡಬೇಕಿಲ್ಲ ಎಂದೂ ಹೇಳಿದೆ

44.60 ಲಕ್ಷ	70%	4.06 ಲಕ್ಷ	2.84 ಲಕ್ಷ	7 ಲಕ್ಷ
ಅಮೆರಿಕದಲ್ಲಿ ನೆಲಸಿರುವ ಭಾರತೀಯರು (ಅನಿವಾಸಿ ಭಾರತೀಯರೂ ಸೇರಿ)	ಅಮೆರಿಕ ಪ್ರತಿ ವರ್ಷ ನೀಡುವ ಎಚ್‌1–ಬಿ ವೀಸಾದಲ್ಲಿ ಭಾರತೀಯರು ಪಡೆಯುವ ಪಾಲು	2025ನೇ ಆರ್ಥಿಕ ವರ್ಷದಲ್ಲಿ ಅಮೆರಿಕ ನೀಡಿದ ಎಚ್–1ಬಿ ವೀಸಾಗಳು	2025ನೇ ಆರ್ಥಿಕ ವರ್ಷದಲ್ಲಿ ಎಚ್–1ಬಿ ವೀಸಾ ಪಡೆದ ಭಾರತೀಯರು	ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಹಾಕಿರುವ ಭಾರತೀಯರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಅಮೆರಿಕ ಪೌರತ್ವ ಮತ್ತ ವಲಸೆ ಸೇವೆಗಳ ವಿಭಾಗವು (ಯುಎಸ್‌ಸಿಐಎಸ್) ನೀಡಿದ ಒಂದು ಪುಟ್ಟ ಪ್ರಕಟಣೆ ಲಕ್ಷಾಂತರ ಅಮೆರಿಕ ವಾಸಿಗಳಲ್ಲಿ ತಲ್ಲಣ ಉಂಟುಮಾಡಿದೆ. ಎಚ್1 ಬಿ ವೀಸಾ ಸೇರಿದಂತೆ ತಾತ್ಕಾಲಿಕ ವೀಸಾದ ಅಡಿಯಲ್ಲಿ ಅಮೆರಿಕದಲ್ಲಿದ್ದು, ಗ್ರೀನ್ ಕಾರ್ಡ್ (ಕಾಯಂ ನಿವಾಸಿ ಪ್ರಮಾಣಪತ್ರ) ಪಡೆಯಲು ಅರ್ಜಿ ಸಲ್ಲಿಸಿವವರು ತಮ್ಮ ಮಾತೃದೇಶಗಳಿಗೆ ಹಿಂದಿರುಗಿ, ಅಲ್ಲಿನ ಕಾನ್ಸುಲೇಟ್ ಕಚೇರಿಯ ಮೂಲಕ ಪ್ರಕ್ರಿಯೆ ಮುಂದುವರಿಸಬೇಕು ಎನ್ನುವುದು ಆ ಪ್ರಕಟಣೆಯ ಸಾರ. ತಾತ್ಕಾಲಿಕ ವೀಸಾ ಆಧಾರದಲ್ಲಿ ಅಮೆರಿಕದಲ್ಲಿರುವವರು, ಅಕ್ರಮವಾಗಿ ಅಮೆರಿಕದಲ್ಲಿ ವಾಸಿಸುತ್ತಿದ್ದು, ಗಂಡ/ಹೆಂಡತಿ, ಮಕ್ಕಳ ಪ್ರಾಯೋಜಕತ್ವದ ಮೂಲಕ ಕಾನೂನುಬದ್ಧ ವಲಸಿಗ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವವರು ಈ ನಿಯಮದ ಅನ್ವಯ ದೇಶ ತೊರೆಯಬೇಕಿದೆ.

ಎಚ್–1ಬಿ, ಎಲ್–1 ವೀಸಾ ಮತ್ತು ವಿದ್ಯಾರ್ಥಿ ವೀಸಾ ಅಡಿಯಲ್ಲಿ ಅಮೆರಿಕಕ್ಕೆ ಬಂದವರೂ ದೇಶದಲ್ಲಿಯೇ ಉಳಿದುಕೊಂಡು ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಮತ್ತು ಪಡೆಯಲು ಇದುವರೆಗೆ ಅವಕಾಶವಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ವೃತ್ತಿಪರರು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ವೀಸಾ ಕುರಿತ ವಿಳಂಬ, ಗೊಂದಲ ಇತ್ಯಾದಿ ಇಲ್ಲದಂತೆ ನಿರ್ವಿಘ್ನವಾಗಿ ಕೆಲಸ ಮಾಡಲು ಈ ನಿಯಮವು ಅನುಕೂಲಕರವಾಗಿತ್ತು.



ಅಮೆರಿಕಕ್ಕೆ ಎಚ್–1ಬಿ ವೀಸಾ ಅಡಿ ತೆರಳುವವರ ಪೈಕಿ ಭಾರತೀಯರೇ ಹೆಚ್ಚು (ಶೇ 70). ಹೀಗಾಗಿ ಭಾರತೀಯರಲ್ಲಿ ಇದು ಆತಂಕ ಮೂಡಿಸಿದೆ. ತಾತ್ಕಾಲಿಕ ವೀಸಾ ಮೇಲೆ ಅಮೆರಿಕದಲ್ಲಿ ಕೆಲಸ ಮಾಡುತ್ತಿರುವವರು, ಕೆಲಸ ಅರಸುತ್ತಿರುವವರು ತಕ್ಷಣವೇ ದೇಶ ತೊರೆಯಬೇಕಾದಂಥ ಪರಿಸ್ಥಿತಿ ಉದ್ಭವಿಸಿತ್ತು. ಆದರೆ, ಮೇ 21ರಂದು ಘೋಷಿಸಿದ್ದ ಈ ನಿಯಮಕ್ಕೆ ಅಮೆರಿಕದವರಿಂದಲೇ ವಿರೋಧ ವ್ಯಕ್ತವಾಗಿದೆ. ಅಮೆರಿಕದ ಪ್ರಗತಿಗೆ ಇದು ಮಾರಕ ಎಂದು ಸಂಘಸಂಸ್ಥೆಗಳು ಟೀಕಿಸಿದವು. ಅದರ ಬೆನ್ನಲ್ಲೇ ಅಮೆರಿಕ ಸರ್ಕಾರವು ಈ ನಿಯಮವನ್ನು ಸಡಿಲಿಸಿದೆ. ಈ ಬಗ್ಗೆ ಯುಎಸ್‌ಸಿಐಎಸ್ ಸ್ಪಷ್ಟೀಕರಣ ನೀಡಿದೆ. 'ಅಮೆರಿಕದಲ್ಲಿ ವೃತ್ತಿಪರರಾಗಿದ್ದು, ಗ್ರೀನ್ ಕಾರ್ಡ್ ನಿರೀಕ್ಷೆಯಲ್ಲಿರುವವರೆಲ್ಲರೂ ದೇಶ ತೊರೆಯಬೇಕಾದ ಅಗತ್ಯವೇನಿಲ್ಲ. ತಮ್ಮ ವೃತ್ತಿಯಿಂದ ಅಮೆರಿಕದ ಆರ್ಥಿಕತೆಗೆ ಲಾಭವಾಗುತ್ತಿದೆ ಎಂದು, ತಮ್ಮ ಕೆಲಸ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿದೆ ಎಂದು ಸಾಬೀತುಪಡಿಸಿದರೆ, ಅಂಥವರಿಗೆ ಅಮೆರಿಕದಲ್ಲಿಯೇ ಉಳಿಯಲು ಅವಕಾಶ ನೀಡಲಾಗುತ್ತದೆ' ಎಂದು ಸ್ಪಷ್ಟೀಕರಣದಲ್ಲಿ ಹೇಳಲಾಗಿದೆ.

ಯುಎಸ್‌ಸಿಐಎಸ್ ಸ್ಪಷ್ಟೀಕರಣದ ನಂತರವೂ ಹೊಸ ನಿಯಮದ ವಿಚಾರದಲ್ಲಿ ಗೊಂದಲ ಇದೆ. ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾದ ನಂತರ ವಲಸೆ ನೀತಿಯಲ್ಲಿ ಭಾರಿ ಬದಲಾವಣೆಗಳು ಘಟಿಸುತ್ತಿವೆ. 'ಅಮೆರಿಕ ಮೊದಲು' ಎನ್ನುವ ಪ್ರತಿಪಾದನೆಯೊಂದಿಗೆ ವಲಸಿಗರನ್ನು ಶತ್ರುಗಳಂತೆ ನೋಡುವ ಪರಿಪಾಟ ಅಮೆರಿಕದಲ್ಲಿ ಹೆಚ್ಚಾಗುತ್ತಿದೆ. ಅಮೆರಿಕದಲ್ಲಿ ಹಲವು ವರ್ಷಗಳಿಂದ ನೆಲಸಿ, ಅಲ್ಲಿಯೇ ಮನೆ ನಿರ್ಮಿಸಿಕೊಂಡು, ನೆಲೆ ಕಂಡುಕೊಂಡಿರುವ ಅನೇಕ ಭಾರತೀಯ ಕುಟುಂಬಗಳಲ್ಲಿ ಇದು ಅನಿಶ್ಚಿತತೆ, ಆತಂಕ ಸೃಷ್ಟಿಸಿದೆ.

ಆಧಾರ: ಯುಎಸ್‌ಸಿಐಎಸ್,ಯುಎಸ್ ವೀಸಾ ಸರ್ವಿಸಸ್, ಸ್ಟೇಟ್‌ಲೈನ್.ಒಆರ್‌ಜಿ, ವಿದೇಶಾಂಗ ಸಚಿವಾಲಯದ ದತ್ತಾಂಶಗಳು, ಮಾಧ್ಯಮ ವರದಿಗಳು

ಗ್ರೀನ್ ಕಾರ್ಡ್ ಕನಸು



ಅಮೆರಿಕಕ್ಕೆ ಹೋಗುವ ಬಹುತೇಕರಿಗೆ ಗ್ರೀನ್ ಕಾರ್ಡ್ ಪಡೆಯುವುದು ಒಂದು ಕನಸು. ಗ್ರೀನ್ ಕಾರ್ಡ್ ಎಂದರೆ, ಕಾನೂನುಬದ್ಧ ಕಾಯಂ ನಿವಾಸಿ ಪ್ರಮಾಣ ಪತ್ರ. ಇದನ್ನು ಹೊಂದಿರುವವರು ಅಮೆರಿಕದ ಪೌರತ್ವ ಪಡೆಯಲು ಅರ್ಹರಾಗಿರುತ್ತಾರೆ. ವಿವಿಧ ವೀಸಾಗಳ ಆಧಾರದಲ್ಲಿ ಅಮೆರಿಕಕ್ಕೆ ಭೇಟಿ ನೀಡುವವರು ಗ್ರೀನ್ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಿ, ದಶಕಗಟ್ಟಲೇ ಕಾಯುತ್ತಾರೆ. ಯಾವ ವೀಸಾದಡಿ ಅಮೆರಿಕಕ್ಕೆ ಭೇಟಿ ನೀಡಲಾಗಿದೆ, ಅವರು ಅರ್ಜಿ ಸಲ್ಲಿಸಿ ಎಷ್ಟು ದಿನವಾಗಿದೆ (ಸೀನಿಯಾರಿಟಿ) ಎನ್ನುವುದರ ಆಧಾರದ ಮೇಲೆ ಗ್ರೀನ್ ಕಾರ್ಡ್ ನೀಡಲಾಗುತ್ತದೆ.

ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಅಮೆರಿಕ ಈ ವಿಚಾರದಲ್ಲಿ ಕೆಲವು ನಿಯಮಗಳನ್ನು ಅನುಸರಿಸುತ್ತದೆ. ವಾರ್ಷಿಕವಾಗಿ 1.4 ಲಕ್ಷ ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್‌ಗಳನ್ನು ಮಾತ್ರ ನೀಡಲಾಗುತ್ತಿದ್ದು, ಪ್ರತಿ ದೇಶಕ್ಕೆ ಶೇ 7ರ ಕೋಟಾ ನಿಗದಿಪಡಿಸಿದೆ. ಅಮೆರಿಕಕ್ಕೆ ವಲಸೆ ಹೋಗುವವರ ಪೈಕಿ ಭಾರತೀಯರು ಕೂಡ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಹಜವಾಗಿಯೇ ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದವರ ಪೈಕಿ ಕೂಡ ಭಾರತೀಯರು ಹೆಚ್ಚಾಗಿದ್ದು, ಹಿರಿತನದ ಸರದಿ ಬರಲು ಬಹಳ ವರ್ಷ ಕಾಯಬೇಕಾಗುತ್ತದೆ.

ಕ್ಯಾಟೊ ಇನ್‌ಸ್ಟಿಟ್ಯೂಟ್‌ನ 2022ರ ವರದಿಯ ಪ್ರಕಾರ, ಅಮೆರಿಕದಲ್ಲಿ ಒಟ್ಟು 7.20 ಲಕ್ಷ ಭಾರತೀಯರು ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿ ಕಾಯುತ್ತಿದ್ದಾರೆ. ಪ್ರತಿ ದೇಶಕ್ಕೂ ನಿಗದಿತ ಪ್ರಮಾಣದಲ್ಲಿ ಮಾತ್ರ ಗ್ರೀನ್ ಕಾರ್ಡ್ ವಿತರಿಸುತ್ತಿರುವುದರಿಂದ ಅರ್ಜಿ ಸಲ್ಲಿಸಿರುವ ಲಕ್ಷಾಂತರ ಮಂದಿ ಭಾರತೀಯರು ಸುಮಾರು 90 ವರ್ಷ ಕಾಯಬೇಕು. ಅಂದರೆ, ಗ್ರೀನ್ ಕಾರ್ಡ್ ಅರ್ಜಿ ವಿಚಾರಣೆಗೆ ಬರುವ ಮುನ್ನವೇ ಅನೇಕರು ಮರಣ ಹೊಂದಿರುತ್ತಾರೆ. ಪ್ರಸ್ತುತ ಗ್ರೀನ್ ಕಾರ್ಡ್‌ಗಾಗಿ ಸಲ್ಲಿಸಲಾಗಿರುವ 18 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ.

ಈಗ ಏಕೆ ಹೊಸ ನಿಯಮ?

ವಿದ್ಯಾರ್ಥಿಗಳು, ಕಾಯಂ ನೌಕರಿ ಇಲ್ಲದವರು, ಪ್ರವಾಸಿ ವೀಸಾಗಳ ಅಡಿಯಲ್ಲಿ ಅಮೆರಿಕಕ್ಕೆ ಬಂದವರು ನಿರ್ದಿಷ್ಟ ಉದ್ದೇಶದಿಂದ ಅಲ್ಪಕಾಲದ ವಾಸ್ತವ್ಯಕ್ಕಾಗಿ ಬರುತ್ತಾರೆ. ಅವರು ತಮ್ಮ ಕೆಲಸ ಮುಗಿದ ನಂತರ ದೇಶವನ್ನು ತೊರೆಯಬೇಕು. ನಮ್ಮ ವ್ಯವಸ್ಥೆ ಇರುವುದೇ ಹಾಗೆ. ಆದರೆ, ಈ ಪೈಕಿ ಅನೇಕರು ಇದು ಗ್ರೀನ್ ಕಾರ್ಡ್ ಪಡೆಯಲು ಮೊದಲ ಹಂತ ಎಂದು ಭಾವಿಸಿದ್ದಾರೆ. ಇವರ ಪ್ರಕರಣಗಳನ್ನು ನಿಭಾಯಿಸುವುದೇ ವಿದೇಶಾಂಗ ಇಲಾಖೆಗೆ ದೊಡ್ಡ ಕೆಲಸವಾಗಿದೆ. ಈ ಕೆಲಸವನ್ನು ವಿದೇಶಗಳಲ್ಲಿರುವ ಅಮೆರಿಕದ ರಾಯಭಾರ ಕಚೇರಿಗಳು ನಿರ್ವಹಿಸಿದರೆ, ಯುಎಸ್‌ಸಿಐಎಸ್ ತನ್ನ ಸಿಬ್ಬಂದಿ ಮತ್ತು ಸಂಪನ್ಮೂಲವನ್ನು ಇತರೆ ಮುಖ್ಯ ಜವಾಬ್ದಾರಿಗಳನ್ನು ನಿರ್ವಹಿಸಲು ಬಳಸಬಹುದು ಎನ್ನುವುದು ಅಮೆರಿಕ ಸರ್ಕಾರದ ವಾದ.

ಅಮೆರಿಕದಲ್ಲೇ ವಿರೋಧ

ಟ್ರಂಪ್ ಆಡಳಿತದ ಹೊಸ ನೀತಿಗೆ ಅಮೆರಿಕದಲ್ಲೇ ವಿರೋಧ ವ್ಯಕ್ತವಾಗಿದೆ.

ಹೊಸ ನಿಯಮವು ಅನಗತ್ಯ ಗೊಂದಲ ಸೃಷ್ಟಿ ಮಾಡಲಿದೆ. ತಾತ್ಕಾಲಿಕ ವೀಸಾಗಳ ಅಡಿಯಲ್ಲಿ ದೀರ್ಘ ಸಮಯದಿಂದ ಇಲ್ಲಿ ಕಾನೂನುಬದ್ಧವಾಗಿ ಕೆಲಸ ಮಾಡುತ್ತಿರುವ ವಲಸಿಗರ ಮೇಲೆ ಹೆಚ್ಚುವರಿ ವೆಚ್ಚವನ್ನು ಹೊರಿಸಲಿದೆ. ಕೌಶಲ ಉಳ್ಳ ವಿದೇಶಿ ಉದ್ಯೋಗಿಗಳನ್ನು ಅವಲಂಬಿಸಿರುವ ಉದ್ದಿಮೆಗಳು, ವಿಶೇಷವಾಗಿ ತಂತ್ರಜ್ಞಾನ ಆಧಾರಿತ ಉದ್ಯಮಗಳ ಮೇಲೆ ಇದು ತೀವ್ರ ಪ್ರಭಾವ ಬೀರಲಿದೆ ಎಂಬ ಅಭಿಪ್ರಾಯವನ್ನು ವಲಸಿಗರ ಪರವಾಗಿ ಕೆಲಸ ಮಾಡುವ ಕಂಪನಿಗಳು ಮತ್ತು ಉದ್ಯಮಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ.

ಇದು ಕಾನೂನುಬದ್ಧ ವಲಸೆ ವ್ಯವಸ್ಥೆಯ ಮೇಲಿನ ವಿಲಕ್ಷಣ ದಾಳಿಯಾಗಿದ್ದು, ತಾತ್ಕಾಲಿಕ ವೀಸಾದಡಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವವರ ಕುಟುಂಬಗಳಿಗೆ ತೊಂದರೆ ಉಂಟು ಮಾಡಲಿದೆ. ಈ ಕ್ರಮದಿಂದಾಗಿ ಹೊರದೇಶಗಳಿಂದ ಬಂದು ಇಲ್ಲಿ ವೈದ್ಯರು, ಶಿಕ್ಷಕರು ಮತ್ತು ವಿಜ್ಞಾನಿಗಳಾಗಿ ಕೆಲಸ ಮಾಡುತ್ತಿರುವವರು ವಾಪಸ್ ಅವರ ದೇಶಕ್ಕೆ ಹೋಗಬೇಕಾಗಿರುವುದರಿಂದ ಅವರ ಸಂಖ್ಯೆ ಕಡಿಮೆಯಾಗಲಿದೆ. ಅಲ್ಲದೇ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಅಮೆರಿಕದ ಸ್ಪರ್ಧಾತ್ಮಕತೆ ಕುಂಠಿತವಾಗಲಿದೆ ಎಂದು, ಜಾಗತಿಕ ಆನ್‌ಲೈನ್ ಕಲಿಕಾ ಪ್ಲಾಟ್‌ಫಾರ್ಮ್ ಕೋರ್ಸೆರಾದ ಸಂಸ್ಥಾಪಕ, ಸ್ಟಾನ್‌ಫೋರ್ಡ್ ವಿವಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಅರೆಕಾಲಿಕ ಪ್ರಾಧ್ಯಾಪಕ ಆ್ಯಂಡ್ರ್ಯೂ ಎನ್‌ಜಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

'ಕೆಲವು ಲೋಪಗಳನ್ನು ಸರಿಪಡಿಸುತ್ತೇವೆ ಎಂಬ ನೆಪವನ್ನು ಮುಂದಿಟ್ಟುಕೊಂಡು ದೇಶದಲ್ಲಿ ನಡೆಯುತ್ತಿರುವ ಪ್ರಮುಖ ಕೆಲಸಗಳಿಗೆ ಅಡ್ಡಿಪಡಿಸಲು ಕಂಡುಕೊಂಡ ಅತ್ಯಂತ ಕೆಟ್ಟ ಮಾರ್ಗ ಇದು' ಎಂದು ಉದ್ಯಮಿ ನಿಕ್ ಡೇವಿಡೊವ್ ಹೇಳಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್ಎಸ್ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಪುಸ್ತಕ ಕೊಳ್ಳಲು ಸಹಕಾರಿಯಾಯಿತು

'ಪ್ರಜಾವಾಣಿ'ಯ ವಿದ್ಯಾರ್ಥಿ ವೇತನ ಸಕಾಲಕ್ಕೆ ಸಹಾಯವಾಯಿತು. ಜೆಇಇ ಕೋಚಿಂಗ್ ತೆಗೆದುಕೊಳ್ಳುತ್ತಿದ್ದು, ಅದಕ್ಕೆ ಅಗತ್ಯವಿರುವ ಪುಸ್ತಕಗಳನ್ನು ಕೊಳ್ಳಲು ಈ ಹಣವನ್ನು ಸದ್ಬಳಕೆ ಮಾಡಿಕೊಂಡೆ. ನಮ್ಮಂಥ ಬಡ ವಿದ್ಯಾರ್ಥಿಗಳಿಗೆ ಈ ಸಹಾಯದಿಂದ ಸಾಕಷ್ಟು ಅನುಕೂಲವಾಗುತ್ತದೆ. 'ಪ್ರಜಾವಾಣಿ'ಗೆ ಧನ್ಯವಾದಗಳು.

–**ಪ್ರಥಮ್ ಎಂ. ಹೆಗಡೆ,** ದಾವಣಗೆರೆ

ಹಾಸ್ಟೆಲ್ ಶುಲ್ಕ ಕಟ್ಟಿದೆ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನ ಹಾಸ್ಟೆಲ್ ಶುಲ್ಕ ಕಟ್ಟಲು ಅನುಕೂಲವಾಯಿತು. ಹಾಸ್ಟೆಲ್ ಶುಲ್ಕ ಕಟ್ಟಿ, ಉಳಿದ ಹಣದಲ್ಲಿ ಸಮವಸ್ತ್ರ ಖರೀದಿಸಿದೆ. 'ಪ್ರಜಾವಾಣಿ' ನೀಡಿದ ಪ್ರೋತ್ಸಾಹಧನ ತುಂಬಾ ಪ್ರಯೋಜನವಾಯಿತು. ಪತ್ರಿಕೆಯ ಸಾಮಾಜಿಕ ಕಾಳಜಿ ಶ್ಲಾಘನೀಯ.

–**ಸಹನಾ, ತನುಡಿ ಬಾಳೆಹೊಳೆ,** ಚಿಕ್ಕಮಗಳೂರು

ಕವಿ ತಿರುವಳ್ಳುವರ್‌ಗೆ ಕೇಸರಿ ಉಡುಪು: ಟೀಕೆ

ಚೆನ್ನೈ (ಪಿಟಿಐ): ತಮಿಳು ಕವಿ ತಿರುವಳ್ಳುವರ್ ಅವರು ಕೇಸರಿ ಬಣ್ಣದ ಉಡುಪಿನಲ್ಲಿರುವ ಚಿತ್ರವನ್ನು ಲೋಕ-ಭವನದಲ್ಲಿ ಪ್ರದರ್ಶಿಸಿರುವ ಕ್ರಮವನ್ನು ತಮಿಳುನಾಡಿನ ಆಡಳಿತಾರೂಢ ಟಿವಿಕೆ ಮತ್ತು ವಿರೋಧ ಪಕ್ಷ ಡಿಎಂಕೆ ಟೀಕಿಸಿದೆ.

ಮೇ 30ರಂದು ನಡೆದ 'ವೈಕಾಸಿ ಅನುಷಂ' ಕಾರ್ಯಕ್ರಮದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಲೋಕಭವನ-ದಲ್ಲಿ ತಿರುವಳ್ಳುವರ್ ಭಾವಚಿತ್ರಕ್ಕೆ ಗೌರವ ಸಲ್ಲಿಸಿದ್ದರು. ಆ ಭಾವಚಿತ್ರದಲ್ಲಿ ತಿರುವಳ್ಳುವರ್ ಅವರನ್ನು ಕೇಸರಿ ವಸ್ತ್ರ ಧರಿಸಿರುವಂತೆ ಚಿತ್ರಿಸಲಾಗಿತ್ತು. ಸಾಮಾನ್ಯವಾಗಿ ತಿರುವಳ್ಳುವರ್ ಅವರನ್ನು ಎಲ್ಲ ಭಾವಚಿತ್ರಗಳಲ್ಲೂ ಬಿಳಿ ಉಡುಪಿನಲ್ಲಿ ಕಾಣಬಹುದು.

ಲೋಕಭವನದ ಕ್ರಮಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಸಚಿವ ಡಾ ಅರುಣ್ ರಾಜ್, 'ಇಡೀ ಜಗತ್ತಿಗೆ ಸೇರಿರುವ ತತ್ವಜ್ಞಾನಿಯನ್ನು ಒಂದು ಸಂಕುಚಿತ ಗುರುತಿನೊಳಗೆ ಬಂಧಿಸುವ ಪ್ರಯತ್ನವು ಅವರ ಘನತೆಯನ್ನು ಕುಗ್ಗಿಸುತ್ತದೆ' ಎಂದು ಹೇಳಿದ್ದಾರೆ.

'ಲೋಕಭವನ ಅಥವಾ ಯಾವುದೇ ಸರ್ಕಾರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತಿರುವಳ್ಳುವರ್ ಅವರನ್ನು ಕೇಸರಿ ವಸ್ತ್ರ ಧರಿಸಿದ ರೀತಿಯಲ್ಲಿ ಚಿತ್ರಿಸಿರುವುದು ತಪ್ಪು. ತಿರುವಳ್ಳುವರ್ ಅವರು ಯಾವುದೇ ಧರ್ಮ, ಜಾತಿ, ಜನಾಂಗ ಅಥವಾ ದೇಶಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ಅವರ 'ತಿರುಕ್ಕುರಲ್' ಗ್ರಂಥ ಯಾವುದೇ ಒಂದು ವರ್ಗ, ಜಾತಿಗೆ ಸೀಮಿತವಾಗಿಲ್ಲ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈಗಿನ ಮುಖ್ಯಮಂತ್ರಿ ಯಾವಾಗಲೂ 'ಮೌನ'ವಾಗಿರುತ್ತಾರೆ ಎಂಬುದು ಖಾತರಿಯಾಗಿರುವ ಕಾರಣ ಅವರು ಇಂತಹ ಕೆಲಸ ಮಾಡುತ್ತಿದ್ದಾರೆ' ಎಂದು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಕಟ್ಟಡ ಕುಸಿತ: 6 ಜನರ ಸಾವು

ನವದೆಹಲಿ (ಪಿಟಿಐ): ವಿದೇಶಗಳಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ತರಬೇತಿ ನೀಡುವ ಕೇಂದ್ರಗಳಿದ್ದ ಮೂರು ಅಂತಸ್ತಿನ ಕಟ್ಟಡವು ಕುಸಿದು ಬಿದ್ದು ಆರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ದೆಹಲಿಯ ಸಾಕೇತ್ ಮೆಟ್ರೊ ನಿಲ್ದಾಣದ ಬಳಿ ಈ ಕಟ್ಟಡ ಇತ್ತು. ಶನಿವಾರ ಸಂಜೆ ವೇಳೆಗೆ ಕಟ್ಟಡ ಕುಸಿದಿತ್ತು. ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದ್ದು, ಕಟ್ಟಡಗಳ ಅವಶೇಷಗಳ ಅಡಿ ಸಿಲುಕಿದವರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ಮಾಹಿತಿ ನೀಡಿದರು.

ಪಿವಿ ಫ್ಯಾಕ್ಟ್ ಚೆಕ್

ಪಶ್ಚಿಮ ಬಂಗಾಳದಲ್ಲಿರುವ ಬಾಂಗ್ಲಾದೇಶದ ಶಂಕಿತ ಅಕ್ರಮ ವಲಸಿಗರು ಸಾವಿರಾರು ಸಂಖ್ಯೆಯಲ್ಲಿ ಬಾಂಗ್ಲಾದೇಶಕ್ಕೆ ಹೊಂದಿಕೊಂಡಿರುವ ಹಕೀಂಪುರ ಗಡಿ ಪ್ರದೇಶದತ್ತ ಹೋಗುತ್ತಿದ್ದಾರೆ ಎಂದು ಪ್ರತಿಪಾದಿಸುತ್ತಾ ಇನ್‌ಸ್ಟಾಗ್ರಾಂನಲ್ಲಿ ಒಂದು ವಿಡಿಯೊ ತುಣುಕನ್ನು ಹಂಚಿಕೊಳ್ಳಲಾಗುತ್ತಿದೆ. ಭಾರಿ ಸಂಖ್ಯೆಯಲ್ಲಿ ಜನರು ಸರಂಜಾಮುಗಳೊಂದಿಗೆ ಸಾಗುತ್ತಿರುವುದು ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು ಮಾಹಿತಿ.

ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್‌ನಲ್ಲಿ ಹಾಕಿ ಹುಡುಕಿದಾಗ, ಹಲವು 'ಎಕ್ಸ್' ಪೋಸ್ಟ್‌ಗಳಲ್ಲಿ ಇದೇ ಮಾದರಿಯ ವಿಡಿಯೊಗಳು ಕಂಡು ಬಂದವು. ಅವುಗಳೆಲ್ಲವೂ ಈ ವರ್ಷದ ಜನವರಿ 2 ಮತ್ತು 5ರ ನಡುವೆ ಹೂಗ್ಲಿ ಜಿಲ್ಲೆಯ ಪುಯಿನಾನ್ ಗ್ರಾಮದಲ್ಲಿ ನಡೆದಿದ್ದ ವಿಶ್ವ ಇಜ್ತೆಮಾ ಕಾರ್ಯಕ್ರಮದಲ್ಲಿ ಸೆರೆ ಹಿಡಿದ ವಿಡಿಯೊಗಳಾಗಿದ್ದವು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ, ಶೇಖ್ ಅಲಿ ಎಂಬವರು ಜನವರಿ 5ರಂದು ಪೋಸ್ಟ್ ಮಾಡಿದ, ವಿಡಿಯೊ ಸಿಕ್ಕಿತು. ಆ ವಿಡಿಯೊ ಕೊಂಚ ದೀರ್ಘವಾಗಿತ್ತು. ಹೂಗ್ಲಿ ಜಿಲ್ಲೆಯ ಪುಯಿನಾನ್ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಿತ್ರೀಕರಿಸಿದ ವಿಡಿಯೊ ಎಂದೂ ಅವರು ಹೇಳಿದ್ದರು. ಇದೇ ರೀತಿಯ ಹಲವು ಪೋಸ್ಟ್‌ಗಳೂ ಕಂಡು ಬಂದವು. ವಿಡಿಯೊ ದೃಶ್ಯಾವಳಿಗಳನ್ನು ಗೂಗಲ್ ಸ್ಟ್ರೀಟ್ ವ್ಯೂ ಇಮೇಜರಿ ಮೂಲಕ ಹೋಲಿಕೆ ಮಾಡಿದಾಗ, ವಿಡಿಯೊ ತುಣುಕು ಮತ್ತು ಚಿತ್ರದಲ್ಲಿ ಕಂಡು ಬಂದ ಪ್ರಮುಖ ಗುರುತುಗಳು (landmarks) ಒಂದೇ ಆಗಿದ್ದವು. ಶೇಖ್ ಅಲಿ ಅವರನ್ನು ನೇರವಾಗಿ ಸಂಪರ್ಕಿಸಿ ಈ ಬಗ್ಗೆ ವಿಚಾರಿಸಿದಾಗ, ವಿಡಿಯೊವನ್ನು ಜನವರಿ 5ರಂದು ತಾವೇ ಚಿತ್ರೀಕರಿಸಿದ್ದಾಗಿ ದೃಢಪಡಿಸಿದರು. ಜನವರಿಯಲ್ಲಿ ನಡೆದ ಇಸ್ಲಾಂ ಧಾರ್ಮಿಕ ಕಾರ್ಯಕ್ರಮವೊಂದಕ್ಕೆ ಸಂಬಂಧಿಸಿದ ವಿಡಿಯೊವನ್ನು ಈಗ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಮಕ್ಕಳ ಮನಸ್ಸು ಮೊಗ್ಗಿನಂತೆ

ದಾದಾಪೀರ್ ನವಿಲೇಹಾಳ್

ಲ್ಯಾಂಡ್ ಲಾರ್ಡ್ ಎಂದು ಪರಿಚಯಿಸಿಕೊಳ್ಳುತ್ತಿದ್ದ ಸುಭಾನ್ ಸಾಹೇಬರಿಗೆ ಮೂರು ಜನ ಗಂಡುಮಕ್ಕಳು. ಇಬ್ಬರು ತಮ್ಮಂದಿರು ನೌಕರಿ ಹಿಡಿದ ಮೇಲೆ 'ನೀನೇ ನೋಡಿಕೊ' ಎಂದು ಬಿಟ್ಟುಹೋದ ಜಮೀನಿನಲ್ಲಿ ಅಡಿಕೆ ಬೆಳೆದು ಧನಿಕರಾದರು. ಆಮೇಲೆ ಶೋಕಿಗೆ ಅಂತ ನಾಟಿ ಕೋಳಿ ಸಾಕಲು ಶುರು ಮಾಡಿದರು. ಮಕ್ಕಳು ಎಲ್ಲಿ ಏನು ಓದುತ್ತಾರೆ ಎಂದು ಒಂದು ಕ್ಷಣವೂ ಯೋಚಿಸದೆ ತಮ್ಮ ಪಾಡಿಗೆ ತಾವು ತೋಟ ತುಡಿಕೆಗೆ, ಯಾರೋ ಕರೆದ ಯಾರದೋ ಮನೆಯ ದಾವತ್ತಿಗೆ ಹೋಗಿಬಿಡುವ ಚಾಳಿಯಿದ್ದ ಸಾಹೇಬರಿಗೆ ಅನಾಯಾಸವಾಗಿ ಸಿಕ್ಕ ಜಮೀನಿನಿಂದ 'ತಾವು ಕೆಲಸ ಮಾಡುವವರಲ್ಲ, ಮಾಡಿಸುವವರು' ಎಂಬಂತಹ ಅಹಂಕಾರ ಬಂದುಬಿಟ್ಟಿತ್ತು. ಮಕ್ಕಳು ಬೆಳೆದ ಹಾಗೆ ಅವರ ಒಣಜಂಭವೂ ಬೆಳೆದು ಅಪರೂಪಕ್ಕೆ ಸಿಗುವ ಅಪ್ಪನಾಗಿಬಿಟ್ಟರು. ಸಿಗರೇಟು ಸೇದುವುದು, ಮೂಡು ಬಂದಾಗೊಮ್ಮೆ ಮಸೀದಿಗೆ ಹೋಗಿ ನಮಾಜು ಮಾಡಿಬರುವುದು, ಬೇಕಾಬಿಟ್ಟಿ ತಿಂದು ತೇಗುವುದು ಅವರ ಖಯಾಲಿಗಳು. ಹರೆಯಕ್ಕೆ ಬಂದ ಹಿರಿಯ ಮಗನೊಬ್ಬನ ಅಸಹಜ ಸಾವು ಸಾಹೇಬರನ್ನು ಇನ್ನಿಲ್ಲದಂತೆ ಅಲ್ಲಾಡಿಸಿಬಿಟ್ಟಿತು. ಅವರ ಮಾತುಕತೆಯಲ್ಲಿ ಕಾಣುತ್ತಿದ್ದ ಮೇಲರಿಮೆ ಮೆಲ್ಲಗೆ ಮರೆಯಾಗತೊಡಗಿತು. ನರಕಕ್ಕೆ ಹೋದರೂ ಅಲ್ಲಿ ಮಿನಿಸ್ವರ್ಗವೊಂದನ್ನು ಸೃಷ್ಟಿ ಮಾಡಿಕೊಳ್ಳುತ್ತೇನೆಂಬ ಚಾಲಾಕಿತನವಿದ್ದ ಸಾಹೇಬರು ಈಗ ಹತಾಶರಾದಂತಿದೆ.

ಮಕ್ಕಳಿಗೆ ಅಮ್ಮ ಅಪ್ಪ ತಮ್ಮ ಸುತ್ತ ಓಡಾಡುವ ಗಂಧರ್ವರಂತೆ ಕಾಣುತ್ತಾರೆ. ಬಟ್ಟೆ ಬರೆ ತಿಂಡಿ ತಿನಿಸು ಕೊಡಿಸುವುದಷ್ಟೇ ಅಪ್ಪ ಅಮ್ಮನ ಹೊಣೆಗಾರಿಕೆಯಲ್ಲ. ಅವರ ದೈಹಿಕ ಮಾನಸಿಕ ಸಮತೋಲನವನ್ನು ಸದಾ ಕಾಪಾಡುವ ಧನ್ವಂತರಿಯರಾಗಬೇಕಾಗುತ್ತದೆ. ಅವರ ಬಾಲ್ಯಕ್ಕೆ ಚೈತನ್ಯವನ್ನು ತುಂಬಿಕೊಡುವ ಕುದುರೆಗಳೂ, ಕಲ್ಪನಾಶಕ್ತಿಗೆ ರೆಕ್ಕೆಯೊದಗಿಸುವ ಹಕ್ಕಿಗಳೂ ನಗೆ ಉಕ್ಕಿಸುವ ಕಲಾವಿದರೂ ಆಗಬೇಕಾಗುತ್ತದೆ. ಒಂದು ಹಂತದವರೆಗೆ ಮಕ್ಕಳ ಪ್ರತಿ ಮಾತು ಮತ್ತು ಉಸಿರಿನಲ್ಲಿ ಆಗುವ ಸೂಕ್ಷ್ಮ ವ್ಯತ್ಯಾಸವನ್ನೂ ಅರಿತು ಅನುಭವಿಸಿ ಬೆನ್ನಿಗೆ ನಿಲ್ಲುವ ಗೋಡೆಗಳಾಗಬೇಕಾಗುತ್ತದೆ. ಮಕ್ಕಳೆಂದರೆ ಮೊಗ್ಗುಗಳಂತೆ. ಸಹಜವಾಗಿ ಸೂರ್ಯನ ಬಿಸಿಲಿಗೆ ಮುಖ ಮಾಡಿ ಅರಳಲು ಬಿಡಬೇಕು. ಅನೇಕರು ತಾವೇ ಅರಳಿಸಲು ಹೋಗಿ ಮೊಗ್ಗಿನ ದಳಗಳನ್ನು ಮುರಿದು ಹಾಕುತ್ತಾರೆ. ಒಂದುಕಾಲದ ಅನಕ್ಷರಸ್ಥ ತಂದೆ ತಾಯಿಗಳು ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ಬೆಳೆಸುತ್ತಿದ್ದ ಪರಿ ಅನನ್ಯವಾದುದು.

ಈಗಿನ ಅಪ್ಪ ಅಮ್ಮ ಬಹುಪಾಲು ವಿದ್ಯಾವಂತರು. ಅವರ ಮಕ್ಕಳ ಮುಖದ ಮೇಲೆ ಬಿಸಿಲು ಬೀಳಬಾರದು. ಮಕ್ಕಳು ಮಳೆಯಲ್ಲಿ ನೆನೆದರೆ ಇವರಿಗೇ ನೆಗಡಿ ಜ್ವರ ಬಂದಂತೆ ತಳಮಳಿಸುತ್ತಾರೆ. ಕಾಲು ಕೆಸರಾಗುವಂತಿಲ್ಲ. ಓಡೋಡಿ ಬಿದ್ದು ಸಣ್ಣ ಗಾಯವಾಗಿ ರಕ್ತ ಬಂದರಂತೂ ಒಂದು ವಾರ ರಜಾ. ಅತಿಯಾದ ಆರೈಕೆ ಮಕ್ಕಳನ್ನು ಅವಲಂಬಿತರನ್ನಾಗಿ, ನಿಗ್ರಹಶಕ್ತಿಶೂನ್ಯರನ್ನಾಗಿ ಮಾಡುತ್ತದೆ. ಜೀವನದ ಕಡುಕಷ್ಟದ ಹಾದಿಯನ್ನು ಎದುರಿಸಲಾಗದೆ ಕಲ್ಪಿತ ಭೀತಿಯಲ್ಲಿ ಒಂದೋ ಸ್ವಯಂ ನಾಶವಾಗುತ್ತಾರೆ, ಇಲ್ಲವೇ ಸಮಾಜವಿರೋಧಿ ವಿಕೃತಿಗಳಲ್ಲಿ ತೊಡಗಿ ಪತನಮುಖಿಯಾಗುತ್ತಾರೆ.

ಒಮ್ಮೆ ಎಲ್ಲವೂ ಸಲೀಸಾಗಿ ನಡೆಯುತ್ತದೆಂಬ ಭಾವನೆ ಬಂದುಬಿಟ್ಟರೆ ಪರಿಶ್ರಮದ ಅರಿವೇ ಇಲ್ಲದ ಅಸೂಕ್ಷ್ಮ ಸಂತತಿಯನ್ನು ಸಮಾಜದಲ್ಲಿ ಸಹಿಸಿಕೊಳ್ಳಬೇಕಾಗುತ್ತದೆ. ಮಕ್ಕಳಿಗೆ ಬಾಲ್ಯದ ನಲಿವಿನ ಜೊತೆಗೆ ಕಷ್ಟನಿಷ್ಠುರಗಳನ್ನು ಅರಿತು ನಿಭಾಯಿಸುವ ಯೋಗ್ಯತೆಯನ್ನು ಕಲಿಸಿಕೊಡಬೇಕು. ಯೋಗ್ಯತೆ ಹುಟ್ಟಿನಿಂದ ಬರುವುದಿಲ್ಲ. ಅದನ್ನು ಕಷ್ಟಪಟ್ಟು ಗಳಿಸಿಕೊಳ್ಳಬೇಕು. ಹುಟ್ಟಿದ ಕಾರಣಕ್ಕೇ ಮಣ್ಣು ಜಾತಿ ಧರ್ಮದೇಶಗಳು ಶ್ರೇಷ್ಠವೂ ಪವಿತ್ರವೂ ಆಗುವುದಿಲ್ಲ. ಮನುಷ್ಯರನ್ನು ವಿನಾಕಾರಣ ಗೌರವಿಸುವುದು, ಸಹನೆ ತುಂಬಿದ ನಡವಳಿಕೆಯಿಂದ ಮಾತ್ರವೇ ಅವೆಲ್ಲವನ್ನೂ ಪವಿತ್ರಗೊಳ್ಳುವಂತೆ ಮಾಡುವುದು ನಿಜವಾದ ಯೋಗ್ಯತೆ ಅಂತ ಮನದಟ್ಟು ಮಾಡುವುದು ಹೆತ್ತವರ ನೈತಿಕ ಹೊಣೆಯಾಗಬೇಕು. ಆ ಮೂಲಕ ಮಕ್ಕಳು ಬೆಳೆದಂತೆ ವಿಶ್ವಮಾನವ ಪ್ರಜ್ಞೆಯ ವಾರಸುದಾರರನ್ನಾಗಿ ರೂಪಿಸಬೇಕು. ❖

ಗುಂಡಣ್ಣ

ಪದಬಂಧ 6420

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ತಂಬಾಕು ಕೊಯ್ಯಲು ಬಳಸಿದ ಕಿರುಗತ್ತಿ (2)
3.ಮರವನ್ನು ಕೊಯ್ಯುವ ಸಾಧನ (4)
5.ಮರಿ ಬಿದ್ದಿರುವ ಆಳವಾದ ಗುಂಡಿ (3)
7.ಗತಿಯಲ್ಲಿ ಕೊನೆಗೊಂಡಿರುವ ವರ್ಗ (4)
9.ಶಾಂತಿ ಹೀಗೆ ಬಂದಿದೆ (3)
10.ಕನ್ನ ಕೊರೆದು ತಂದಿರುವ ಸುವರ್ಣ (3)
11.ಪುರೋಹಿತನ ಜೊತೆಯಲ್ಲಿರುವ ಮುಂದಾಳು (4)
13.ಚಕ ಚಕನೆ ನೇಯುವ ರಾಟೆ (3)
15.ವರ ಪಡೆದಿರುವ ಬೇಡ (4)
16.ತಟಕ್ಕನೆ ಓಡಿಹೋಗಿರುವ ಕಳ್ಳ (2)
2.ಅಪಹಾಸ್ಯವನ್ನು ಈ ರೀತಿ ಹೇಳಿ (3)
3.ಗಂಡಾಂತಕಾರಿ ಕೆಲಸಕ್ಕೆ ಬಳಕೆಯಾದ ದೊಡ್ಡ ಹಾರೆ (3)
4.ಗಣಿ ಧಣಿ ಕಲಿಸಿರುವ ಲೆಕ್ಕ ಶಾಸ್ತ್ರ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಎಳ್ಳಿನಿಂದಿರಿಸಿದ ಬೊಟ್ಟು (3)
9.ಒನಪು ತೋರುತ್ತಲೇ ಬಂದಿರುವ ಸ್ಮರಣೆ (3)
10.ಈತ ಕಬ್ಬಿಣದ ಕೆಲಸಗಾರ (3)
12.ಜೋತಿಷ್ಯರಾಶಿಯಲ್ಲಿನ ಜೋಡಿ ಗೊತ್ತಾಯಿತೇ? (3)
13.ಈತ ಬಲು ಜಾಣ (3)
14.ಮಠದ ಹತ್ತಿರವಿರುವ ಆಮೆ (3)

ಮೇಲಿಂದ ಕೆಳಕ್ಕೆ

6419ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಯಜ್ಞಪಶು 3.ಗಡವ 4.ಕಟವಾಯಿ 6.ರಸಿಕೆ 7.ಆಕಸ್ಮಿಕ 8.ದಿಮ್ಮನೆ 9.ಪರದಾಟ 10.ಸರ್ಪಾಕಾ 12.ಗಟವಾಣಿ 14.ಕಾರ್ಖಾನೆ 15.ರಾಯಭಾರ

ಮೇಲಿಂದ ಕೆಳಕ್ಕೆ:
1.ಯವನಿಕೆ 2.ಶುಕ 3.ಗಹ್ವರ 5.ಯಿಡಾಕ 7.ಆನೆ 8.ದಿಟ 9.ಪಲ್ಲಂಗ 10.ಸಹಕಾರ 11.ಕಾಮನೆ 13.ಣಿರಾ

ಸುಡೊಕು 6803

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		2		3			6	8
4	1				7	3		
		3		9		1		7
		4			9		8	
1	2			5				3
8			2				4	
	4			2		8		
			9					5
2		8		7			3	

6802ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಜೂನ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣಪ್ರತಿಪದ್ ಗಂ. 16-38 ನಕ್ಷತ್ರ : ಜ್ಯೇಷ್ಠ ಗಂ. 19-09 ಯೋಗ : ಸಿದ್ಧ ಗಂ. 06-19 ಕರಣ : ಕೌಲವ ಗಂ. 16-38, ವೃಷಭ ಮಾಸದ 18 ನೇ ದಿನ. ಮಳೆ ನಕ್ಷತ್ರ : ರೋಹಿಣಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 , ಸೂರ್ಯೋದಯ : 06-06 ಸೂರ್ಯಾಸ್ತ : 06-50 ಮುಸ್ಲಿಂ ದಿನಾಂಕ : 15 ದುಲ್ ಹಿಜ್ಜಾ , ಅದೃಷ್ಟ ಸಂಖ್ಯೆ : 1, 3

ಮೇಷ: ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ಕೃಷಿಗೆ ಸಂಬಂಧಿಸಿದ ಹಣಕಾಸಿನ ಯೋಜನೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ವೃಷಭ: ವ್ಯಾಪಾರ ಆರಂಭಿಸುವವರಿಗೆ ಮಧ್ಯವರ್ತಿಗಳಿಂದ ಸಹಾಯ ಸಿಗುವುದು. ಸಾಲಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು. ಕಾರ್ಮಿಕರ ಬೇಡಿಕೆಗಳು ಇತ್ಯರ್ಥವಾಗಲಿವೆ.

ಮಿಥುನ: ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ ಸ್ವ ಪ್ರಯತ್ನದಿಂದ ಮುನ್ನುಗ್ಗಿ. ಕೆಲಸಗಳನ್ನು ಮುಂದುಹಾಕದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಭವಿಷ್ಯದ ಕುರಿತು ಚರ್ಚೆ ನಡೆಸಿ.

ಕರ್ಕಾಟಕ: ಮಕ್ಕಳ ವಿಷಯದಲ್ಲಿ ಕಾಳಜಿ ತೋರಿ ವ್ಯವಸ್ಥಿತ ತೀರ್ಮಾನವನ್ನು ತೆಗೆದುಕೊಂಡಲ್ಲಿ ಭವಿಷ್ಯ ಉತ್ತಮ. ಪ್ರೀತಿ ಮತ್ತು ಆನಂದ ತುಂಬಿದ ಹರ್ಷದಾಯಕ ದಿನ ಇದಾಗಿದೆ.

ಸಿಂಹ: ಹಲವು ದಿನಗಳಿಂದ ಮನೆಯವರಲ್ಲಿ ಕಾಣಿಸಿಕೊಂಡಿದ್ದ ಇರಿಸುಮುರಿಸುಗಳು ಕ್ರಮೇಣ ಸರಿಹೋಗಲಿವೆ. ಯೋಗ್ಯ ವಯಸ್ಕರರಿಗೆ ವಿವಾಹ ಭಾಗ್ಯ ಒದಗಿ ಬರುವುದು. ಪರೋಪಕಾರ ಮನೋಭಾವದಿಂದ ಯಶ ಲಭ್ಯ.

ಕನ್ಯಾ: ಆಲಸ್ಯಕರ ದೇಹ ಸ್ಥಿತಿಯಿಂದ ಕೆಲಸ ಕಾರ್ಯ ವಿಳಂಬಗತಿಯಲ್ಲಿ ಸಾಗಲಿದೆ. ವಿದ್ಯಾರ್ಥಿಗಳಿಗೆ ಗಣಿತದ ವಿಚಾರದಲ್ಲಿ ಕಠಿಣ ಸಾಧನೆ ಅಗತ್ಯ. ಸಗಟು ಧಾನ್ಯ ವ್ಯಾಪಾರಿಗಳು ಲಾಭ ಪಡೆಯುವಿರಿ.

ತುಲಾ: ಇನ್ನೊಬ್ಬರ ಕಷ್ಟಗಳಿಗೆ ನೆರವಾಗಿ ಸಮಯ ವ್ಯರ್ಥವಾಗಲಿದೆ. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ ಇರುವುದರಿಂದ ಜಾಗ್ರತರಾಗಿರಿ. ನಿಕಟ ವ್ಯಕ್ತಿಗಳೊಂದಿಗೆ ವಾಗ್ವಾದಕ್ಕೆ ಇಳಿಯಬೇಡಿ.

ವೃಶ್ಚಿಕ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಮಡದಿಯ ಭಾವನೆಗಳಿಗೆ ಬೆಲೆ ಕೊಡುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಧನು: ಸಾಧು–ಸಂತರ ದರ್ಶನ ಭಾಗ್ಯದಿಂದ ಎಲ್ಲಾ ಕೆಲಸಗಳು ಗುರಿ ತಲುಪಲಿವೆ. ಮಾತೃ ಸಹಕಾರ ನಿಮಗೆ ದೊರೆಯಲಿದೆ. ಮಗಳಿಂದ ಅತ್ಯಂತ ಸಂತೋಷದ ಸುದ್ದಿ ಕೇಳಲಿರುವಿರಿ.

ಮಕರ: ಷರತ್ತುಗಳನ್ನು ಹೊಂದಿದ ವ್ಯವಹಾರಕ್ಕೆ ಕೈಹಾಕಬೇಡಿ. ವೃತ್ತಿಪರವಾಗಿ ಬಹಳ ದಿನಗಳ ನಿರೀಕ್ಷಿತ ಕಾರ್ಯಕ್ಕೆ ಸಲಹೆ ಸಿಗಲಿದೆ. ಅಕ್ಕಪಕ್ಕದವರೊಂದಿಗೆ ಸಿಡುಕುತನ ಬೇಡ.

ಕುಂಭ: ವೃತ್ತಿಯ ಏಳಿಗೆ ಸಂಕಲ್ಪದಿಂದ ಈ ದಿನವನ್ನು ಪ್ರಾರಂಭಿಸಿ, ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ಬಂಧುಗಳಿಂದ ಯಾವುದೇ ಸಹಾಯ ನಿರೀಕ್ಷಿಸಬೇಡಿ.

ಮೀನ: ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಸಿಗುವ ಸುಸಂದರ್ಭವನ್ನು ಬಳಸಿಕೊಳ್ಳಿ. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ ಉಂಟಾಗಲಿದೆ. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ.

ಅಡಿಕೆಯ ಸ್ಥಿರ ಧಾರಣೆಗೆ ಧಕ್ಕೆ

ದೇಶದ ಮಾರುಕಟ್ಟೆಗೆ ಅಗ್ಗದ ದರದ ವಿದೇಶಿ ಅಡಿಕೆ ಪ್ರವೇಶ

ಪ್ರಜಾವಾಣಿ ವಾರ್ತೆ

ಶಿರಸಿಯ ಅಡಿಕೆ ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಂದ ಅಡಿಕೆ

ಶಿರಸಿ: ಮ್ಯಾನ್ಮಾರ್, ಇಂಡೋನೇಷ್ಯಾದ ಅಗ್ಗದ ದರದ ಅಡಿಕೆ ಕಳ್ಳ ಮಾರ್ಗದ ಮೂಲಕ ದೇಶೀಯ ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವ ಕಾರಣ ಮಲೆನಾಡು ಸೇರಿ ಕರಾವಳಿಯ ಅಡಿಕೆ ಮಾರುಕಟ್ಟೆಯಲ್ಲಿ ದರ ಇಳಿಕೆ ಅಸ್ಥಿರತೆ ಕಾಡುತ್ತಿದೆ.

'ದೇಶದ ಬೃಹತ್ ಬೇಡಿಕೆಯುಳ್ಳ ರಾಜ್ಯಗಳಾದ ಉತ್ತರ ಪ್ರದೇಶ ಹಾಗೂ ಗುಜರಾತ್ ಮಾರುಕಟ್ಟೆಗಳಿಗೆ ನಮ್ಮ ದೇಶಿ ದರಕ್ಕಿಂತ ಶೇ 20 ರಷ್ಟು ಕಡಿಮೆ ಬೆಲೆಗೆ ಈ ವಿದೇಶಿ ಅಡಿಕೆ ಲಭ್ಯವಾಗುತ್ತಿರುವುದೇ ಪ್ರಸ್ತುತ ಮಾರುಕಟ್ಟೆ ಕುಸಿತಕ್ಕೆ ಪ್ರಮುಖ ಕಾರಣ' ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಮೇ ತಿಂಗಳ ಆರಂಭದಲ್ಲಿ ಕ್ವಿಂಟಲ್ ಕೆಂಪಡಿಕೆಗೆ ಗರಿಷ್ಠ ₹54 ಸಾವಿರ, ಚಾಲಿ ಅಡಿಕೆಗೆ ₹49 ಸಾವಿರ ದಾಖಲಾಗಿತ್ತು. ಪ್ರಸ್ತುತ ಈ ದರ ಕೆಂಪಡಿಕೆಗೆ ₹52 ಸಾವಿರದಿಂದ ₹53 ಸಾವಿರ, ಚಾಲಿಗೆ ₹47 ಸಾವಿರ ಲಭಿಸುತ್ತಿದೆ. ಈ ದರ ಇಳಿಕೆ ಕೇವಲ ಕೆಂಪಡಿಕೆ, ಚಾಲಿಗೆ ಸೀಮಿತವಾಗದೆ ಬೆಟ್ಟೆ, ಬಿಳಿ ಹಾಗೂ ಕೆಂಪು ಗೋಟು ದರದ ಮೇಲೂ ಪರಿಣಾಮ ಬೀರಿದೆ.

'ಕಳೆದ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಈ ಬಾರಿ ಹೊರ ರಾಜ್ಯಗಳ ಮಾರುಕಟ್ಟೆಯಿಂದ ರಾಜ್ಯದ ಅಡಿಕೆಗೆ ಇರುವ ಬೇಡಿಕೆಯಲ್ಲಿ ಶೇ 15 ರಿಂದ ಶೇ 20ರಷ್ಟು ಕುಸಿತವಾಗಿದೆ. ಶಿರಸಿ ಮಾರುಕಟ್ಟೆಗೆ ಸಂಬಂಧಿಸಿ ಶೇ 35ರಿಂದ 40ರಷ್ಟು ಭಾರಿ ಕುಸಿತ ದಾಖಲಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶಿರಸಿ ಮಾರುಕಟ್ಟೆಯಿಂದ 30 ಸಾವಿರ ಕ್ವಿಂಟಲ್ ಅಡಿಕೆ ಹೊರ ರಾಜ್ಯಗಳಿಗೆ ರಫ್ತಾಗಿತ್ತು' ಎಂಬುದು ಶಿರಸಿ ತಾಲ್ಲೂಕು ವ್ಯವಸಾಯ ಹುಟ್ಟುವಳಿಗಳ ಸಹಕಾರಿ ಮಾರಾಟ ಸಂಘ (ಟಿಎಂಎಸ್)ದ ಮುಖ್ಯ ಕಾರ್ಯನಿರ್ವಾಹಕ ವಿನಯ ಹೆಗಡೆ ಮಾತು.

'ಈ ಬಾರಿ ಬೇಡಿಕೆಯಷ್ಟು ಅಡಿಕೆ ಪೂರೈಕೆಯಿಲ್ಲದಿದ್ದರೂ ಸಹ ದರ ಏರಿಕೆಯಾಗದೇ ಕುಸಿದಿರುವುದು ಕೃಷಿಕ ವಲಯದಲ್ಲಿ ಆತಂಕ ಮೂಡಿಸಿದೆ' ಎನ್ನುತ್ತಾರೆ ಶಿರಸಿಯ ಅಡಿಕೆ ಬೆಳೆಗಾರ ಸತ್ಯನಾರಾಯಣ ಹೆಗಡೆ.

> **ಕಳ್ಳಮಾರ್ಗದಿಂದ ಅಗ್ಗದ ದರದಲ್ಲಿ ವಿದೇಶಿ ಅಡಿಕೆ ಮಾರುಕಟ್ಟೆ ಪ್ರವೇಶಿಸುತ್ತಿರುವುದರಿಂದ ಅಲ್ಲಿನ ವ್ಯಾಪಾರಿಗಳು ಸ್ಥಳೀಯ ಅಡಿಕೆ ಖರೀದಿಯಿಂದ ಹಿಂದೆ ಸರಿಯುತ್ತಿದ್ದಾರೆ**
> **ವಿನಯ ಹೆಗಡೆ,** ಟಿಎಂಎಸ್ ಮುಖ್ಯ ಕಾರ್ಯನಿರ್ವಾಹಕ

ಮೀನುಗಾರಿಕೆ ನಿಷೇಧ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ರಾಜ್ಯದಲ್ಲಿ ಆಳ ಸಮುದ್ರ ಮೀನುಗಾರಿಕೆಗೆ ಜೂನ್ 1ರಿಂದ ನಿಷೇಧ ಇರುವುದರಿಂದ ಮಂಗಳೂರಿನ ಹಳೆ ಬಂದರು ಮೀನುಗಾರಿಕಾ ದಕ್ಕೆಯಲ್ಲಿ ಮೀನುಗಾರಿಕಾ ದೋಣಿಗಳನ್ನು ನಿಲ್ಲಿಸಲಾಗಿದೆ

ಉತ್ತಮ ಒಪ್ಪಂದಕ್ಕೆ ಶೀಘ್ರ ಸಹಿ: ಟ್ರಂಪ್

ಅಣ್ವಸ್ತ್ರ ಅಭಿವೃದ್ಧಿಪಡಿಸಲ್ಲ: ಭರವಸೆ

ಪಿಟಿಐ/ಎಎಫ್‌ಪಿ

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): 'ನಾವು ಮತ್ತು ಇರಾನ್ ಉತ್ತಮ ಒಪ್ಪಂದವೊಂದಕ್ಕೆ ಸಹಿ ಹಾಕಲಿದ್ದೇವೆ. ಅಣ್ವಸ್ತ್ರ ಅಭಿವೃದ್ಧಿಪಡಿಸುವುದಿಲ್ಲ ಅಥವಾ ಖರೀದಿಸುವುದೂ ಇಲ್ಲ ಎಂದು ಇರಾನ್ ಭರವಸೆ ನೀಡಿದೆ. ನಾವು ಅಂದುಕೊಂಡತೆ ಆಗದಿದ್ದಲ್ಲಿ, ಯುದ್ಧವು ಬೇರೆಯದೇ ರೀತಿಯಲ್ಲಿ ಅಂತ್ಯ ಕಾಣಲಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ಸೊಸೆ ಲಾರಾ ಟ್ರಂಪ್ ಅವರು ಫಾಕ್ಸ್ ನ್ಯೂಸ್‌ನಲ್ಲಿ ನಡೆಸಿದ ಸಂದರ್ಶನದಲ್ಲಿ ಟ್ರಂಪ್ ಮಾತನಾಡಿದರು. ಅಮೆರಿಕವು ಕಠಿಣ ಷರತ್ತುಗಳಿರುವ ಪರಿಷ್ಕೃತ ಒಪ್ಪಂದವನ್ನು ಶನಿವಾರ ಕಳುಹಿಸಿದೆ ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ. ಕಠಿಣ ಷರತ್ತುಗಳು ಯಾವುವು ಎಂಬ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

'ನಾವು ಅಣ್ವಸ್ತ್ರ ಅಭಿವೃದ್ಧಿಪಡಿಸುವುದಿಲ್ಲ ಎಂದು ಇರಾನ್ ನಮಗೆ ತಿಳಿಸಿದೆ. ಒಂದು ವೇಳೆ ನೀವು ಖರೀದಿಸಿದರೆ ಎಂದು ನಾನು ಕೇಳಿದೆ. ಅದಕ್ಕೆ ಅವರು ಉತ್ತರಿಸಿ, 'ನಾವು ಪರಮಾಣು ಅಸ್ತ್ರ ಅಭಿವೃದ್ಧಿಪಡಿಸುವುದೂ ಇಲ್ಲ, ಖರೀದಿಸುವುದೂ ಇಲ್ಲ' ಎಂದಿದ್ದಾರೆ. ಇದು ದೊಡ್ಡ ಪ್ರಗತಿ' ಎಂದರು.

'ಇರಾನ್ ಮೇಲೆ ನಾವು ಹಿಡಿತ ಸಾಧಿಸಿದ್ದೇವೆ. ಅವರ ನೌಕಾ ಪಡೆ ಮತ್ತು ವಾಯು ಪಡೆಗಳು ಸಂಪೂರ್ಣವಾಗಿ ನಾಶವಾಗಿವೆ. ಅದರ ಸೇನಾ ಬಲವನ್ನು ಸಂಪೂರ್ಣ ನಾಶ ಮಾಡಿಲ್ಲ. ಯಾಕೆಂದರೆ, ಅಲ್ಲಿನ ಕೆಲವು ನಾಯಕರು ನಮ್ಮ ಪರವಾಗಿ ಮೃದು ಧೋರಣೆ ಹೊಂದಿದ್ದಾರೆ' ಎಂದರು.

ಒಪ್ಪಂದದಲ್ಲಿ ಮಾರ್ಪಾಡು ಮಾಡಿ, ಟ್ರಂಪ್ ಅವರು ಹೊಸದಾಗಿ ಕಠಿಣ ಷರತ್ತುಗಳನ್ನು ವಿಧಿಸುರುವ ಕಾರಣ ಎರಡೂ ದೇಶಗಳ ಕದನ ವಿರಾಮ ಕುರಿತ ಮಾತುಕತೆಯು ಇನ್ನಷ್ಟು ದಿನ ಮುಂದೆ ಹೋಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಪರಮಾಣು ಅಸ್ತ್ರ ಅಭಿವೃದ್ಧಿ ಮತ್ತು ಹೊರ್ಮುಜ್ ಜಲಸಂಧಿ ಕುರಿತು ಟ್ರಂಪ್ ಅವರು ಬಿಗಿ ಪಟ್ಟು ಹಿಡಿದಿದ್ದಾರೆ ಎನ್ನಲಾಗುತ್ತಿದೆ.

> **ಇರಾನ್ ಜನರ ಹಕ್ಕುಗಳ ರಕ್ಷಣೆಯನ್ನು ಉಲ್ಲಂಘಿಸುವ ಅಮೆರಿಕದ ಪ್ರತಿಪಾದಿಸುವ ಯಾವುದೇ ಒಪ್ಪಂದಕ್ಕೂ ನಮ್ಮ ಒಪ್ಪಿಗೆ ಇಲ್ಲ**
> **ಮೊಹಮ್ಮದ್ ಬಾಖಿರ್,** ಖಾಲೀಬಾಫ್, ಇರಾನ್ ಸಂಸತ್ತಿನ ಸ್ಪೀಕರ್

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹620
	12 ಕ್ಕೆ	₹86
ಮೈಸೂರು:	100 ಕ್ಕೆ	₹630

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹255-635
ದ್ವಿತಳಿ (ಬಿ.ವಿ)	₹366-787

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಭವಿಷ್ಯ
Astrology

'ವಶೀಕರಣ ಸ್ಪೆಷಲಿಸ್ಟ್' ಸ್ತ್ರೀಪುರುಷ ಪ್ರೇಮಕಲಹ, ಪ್ರೀತಿಯಲ್ಲಿ ನಂಬಿಮೋಸ, ಪ್ರೇಮವಿಚಾರ, ಇಷ್ಟಪಟ್ಟ ಸ್ತ್ರೀಪುರುಷ ವಶೀಕರಣ, 11ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. 9845304251

ಕೆಲಸ ಆದ ನಂತರ ಹಣ ಸ್ತ್ರೀ ವಶೀಕರಣ, ಪುರುಷವಶೀಕರಣ, ಪ್ರೀತಿ ಪ್ರೇಮ ವಿಚಾರ ಇಷ್ಟಪಟ್ಟವರು ನಿಮ್ಮಂತೆಯಾಗಲು 7ಗಂಟೆಗಳಲ್ಲಿ ಪರಿಹಾರ ಸ್ತ್ರೀಯರಿಗೆ ವಿಶೇಷ ಪರಿಹಾರ 9972295444.

ಪ್ರವಾಸ
Travel

ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9403890729, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ, ಮೈಸೂರು 4 ದಿನಗಳ ಕಾಶಿ ವಿಮಾನದಲ್ಲಿಕಾಶಿ, ಪ್ರಯಾಗರಾಜ್, ಅಯೋಧ್ಯೆರೂ. 27,000/- ರಿಂದ ಪ್ರಾರಂಭಕೇರಳ 8 ದಿನಗಳುದಿನಾಂಕ ಜೂನ್ 9 ರೂ. 27,000 ರಿಂದ ಪ್ರಾರಂಭತಮಿಳುನಾಡು 5 ದಿನಗಳು ಮತ್ತು 8 ದಿನಗಳು ರೂ. 17,000/- ರಿಂದ ಪ್ರಾರಂಭಶಿರಡಿ 2 ದಿನಗಳು ಮತ್ತು 8 ದಿನಗಳು ರೂ 18,000/- ರಿಂದ ಪ್ರಾರಂಭವಿಶೇಷ ಸೂಚನೆ GST. 5% ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ, 9403890729

★ಶ್ರೇಯಸ್ ಟೂರ್ಸ್★ 09.06.2026,22.06.2026 10ದಿನಗಳು ಅಯೋಧ್ಯೆ,ಅಖಂಡ ನೇಪಾಳ ರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ,ಮುಕ್ತಿನಾಥ, ಮನಕಾಮನದೇವಿ,ಚಿತ್‌ವಾನ್ ಜನಕಪುರಿ,ಸೀತಾಮರಿ. 22.06.2026 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯ ಪ್ರವಾಸ.22.06.2026 12ದಿನಗಳು ಅಖಂಡ ಗುಜರಾತ್ ರಾಜ್ಯ,ಮಧ್ಯಪ್ರದೇಶ ಉಜ್ಜಯಿನಿ ಓಂಕಾರ್.8073824856 9206979202 9743148634

ಪೆಟ್ರೋಲ್, ಡೀಸೆಲ್ ರಫ್ತು ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಹಾಗೂ ವಿಮಾನ ಇಂಧನ (ಎಟಿಎಫ್) ರಫ್ತಿಗೆ ವಿಧಿಸುವ 'ಆಕಸ್ಮಿಕ ಲಾಭ ತೆರಿಗೆ'ಯನ್ನು ಕೇಂದ್ರ ಸರ್ಕಾರವು ತಗ್ಗಿಸಿದೆ.

ಪೆಟ್ರೋಲ್‌ಗೆ ಈ ತೆರಿಗೆಯು ಲೀಟರಿಗೆ ₹3 ಇದ್ದಿದ್ದು ₹1.5ಕ್ಕೆ, ಡೀಸೆಲ್‌ಗೆ ₹16.5 ಇದ್ದಿದ್ದು ₹13.5ಕ್ಕೆ ಹಾಗೂ ಎಟಿಎಫ್‌ಗೆ ₹16 ಇದ್ದಿದ್ದು ₹9.5ಕ್ಕೆ ತಗ್ಗಿದೆ. ಇದು ಜೂನ್ 1ರಿಂದ ಜಾರಿಗೆ ಬರಲಿದೆ.

ಪೆಟ್ರೋಲ್, ಡೀಸೆಲ್ ರಫ್ತಿಗೆ ವಿಧಿಸುವ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಶೂನ್ಯ ಮಟ್ಟದಲ್ಲಿ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಅಧಿಸೂಚನೆಯಲ್ಲಿ ಹೇಳಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಹಿನ್ನೆಲೆಯಲ್ಲಿ ದೇಶದಲ್ಲಿ ಪೆಟ್ರೋಲ್, ಡೀಸೆಲ್, ಎಟಿಎಫ್ ಲಭ್ಯತೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ 'ಆಕಸ್ಮಿಕ ಲಾಭ ತೆರಿಗೆ'ಯನ್ನು ವಿಧಿಸಲಾಯಿತು.

ಎ.ಐ ನಿಮ್ಮ ಸಹಾಯಕ; ಯಜಮಾನನಲ್ಲ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ವಾಸ್ತವಾಂಶ ನೋಡದೆ, ಎ.ಐ. ತಂತ್ರಾಂಶವೊಂದನ್ನು ಬಳಸಿ, ಕಣ್ಣುಮುಚ್ಚಿ ಹಣ ಹೂಡಿಕೆ ಮಾಡುತ್ತಿದ್ದೀರಾ? ಹಾಗಾದರೆ ನೀವು ಶ್ರೀಮಂತರಾಗುವ ಮುನ್ನವೇ ದಿವಾಳಿಯಾಗುವ ಹಾದಿಯಲ್ಲಿದ್ದೀರಿ ಎಂದೇ ಅರ್ಥ! ಹೌದು, ತಂತ್ರಜ್ಞಾನದ ಪ್ರಗತಿಯು ನಮ್ಮ ಹೂಡಿಕೆಯನ್ನು ಎಷ್ಟು ಸುಗಮಗೊಳಿಸಿದೆಯೋ ಅಷ್ಟೇ ಅಪಾಯಕಾರಿ ಬಲೆಯನ್ನೂ ನಮ್ಮ ಸುತ್ತ ಹೆಣೆದಿದೆ. ಹಿಂದೆ ಗೂಗಲ್ ಬಳಸಿ ಹೂಡಿಕೆ ಸಲಹೆಗಳನ್ನು ಹುಡುಕುತ್ತಿದ್ದ ಜನರು, ಇತ್ತೀಚಿನ ದಿನಗಳಲ್ಲಿ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (ಎ.ಐ) ಚಾಟ್‌ಬಾಟ್‌ಗಳ ಮುಂದೆ ಕುಳಿತು '2026ರಲ್ಲಿ ಅತ್ಯುತ್ತಮ ಲಾಭ ನೀಡುವ ಮ್ಯೂಚುವಲ್ ಫಂಡ್ ಮತ್ತು ಷೇರುಗಳು ಯಾವುವು' ಎಂದು ಕೇಳಲು ಆರಂಭಿಸಿದ್ದಾರೆ.

ಕ್ಷಣಮಾತ್ರದಲ್ಲಿ ಮೂಡಿಬರುವ ಎ.ಐ.ನ ಆಕರ್ಷಕ ಉತ್ತರಗಳು ನಮ್ಮನ್ನು ವಿಸ್ಮಯಗೊಳಿಸುವುದು ನಿಜ. ಆದರೆ, ಇವುಗಳನ್ನು ಕುರುಡಾಗಿ ನಂಬಿದರೆ, ಅದು ನಮ್ಮ ಕಾಂಚಾಣವನ್ನು ನಷ್ಟದ ಸುಳಿಗೆ ದೂಡುವುದು ಖಂಡಿತ.

ಎ.ಐ ಮಿತಿಗಳು–ವಾಸ್ತವ: ಹೂಡಿಕೆಯ ಜಗತ್ತಿನಲ್ಲಿ ಎ.ಐ ಎನ್ನುವುದು ನಿಮ್ಮ ನಿರ್ಧಾರಕ್ಕೆ ಪೂರಕವಾಗಿ ನಿಲ್ಲುವ ಒಂದು ದಿಕ್ಸೂಚಿಯೇ ಹೊರತು, ನಿಮ್ಮ ಅಂತಿಮ ನಿರ್ಧಾರಗಳಿಗೆ ಅದು ಎಂದಿಗೂ ಪರ್ಯಾಯ ಆಯ್ಕೆಯಾಗಲಾರದು. ಕೋಟ್ಯಂತರ ಮಾರುಕಟ್ಟೆ ದತ್ತಾಂಶಗಳನ್ನು ಕೆಲವೇ ಸೆಕೆಂಡುಗಳಲ್ಲಿ ವಿಶ್ಲೇಷಣೆ ಮಾಡುವಲ್ಲಿ ಮತ್ತು ಇತಿಹಾಸವನ್ನು ಆಧರಿಸಿ ಮಾಹಿತಿ ಒದಗಿಸುವಲ್ಲಿ ಎ.ಐ ನಿಸ್ಸೀಮ ಎಂಬುದು ನಿಜ. ಆದರೆ ಮಾರುಕಟ್ಟೆಯು ಇಂತಿಷ್ಟೇ ದಿನಗಳಲ್ಲಿ ಹೀಗೆಯೇ ಚಲಿಸುತ್ತದೆ ಎಂದು ಭವಿಷ್ಯ ನುಡಿಯಲು ಅದಕ್ಕೆ ಸಾಧ್ಯವಿಲ್ಲ. ಜಾಗತಿಕ ರಾಜಕೀಯ ತಲ್ಲಣಗಳು, ಹಠಾತ್ ಆರ್ಥಿಕ ಹಿಂಜರಿತಗಳು ಮತ್ತು ಮಾರುಕಟ್ಟೆಯ ದಿಢೀರ್ ಬದಲಾವಣೆಗಳನ್ನು ಅಂದಾಜಿಸುವ ಶಕ್ತಿ ಸದ್ಯದ ಸ್ಥಿತಿಯಲ್ಲಿ ಯಾವುದೇ ಕೃತಕ ಬುದ್ಧಿಮತ್ತೆಗಿಲ್ಲ. ಬುದ್ಧಿವಂತ ಹೂಡಿಕೆದಾರರು ತಮ್ಮಿಂದ ಆಗಬಹುದಾದ ತಪ್ಪುಗಳನ್ನು ಕಡಿಮೆ ಮಾಡಿಕೊಳ್ಳಲು ತಂತ್ರಜ್ಞಾನವನ್ನು ಬಳಸುತ್ತಾರೆಯೇ ಹೊರತು, ಸಂಪೂರ್ಣ ಹಣಕಾಸಿನ ಜವಾಬ್ದಾರಿಯನ್ನು ಅದರ ತಲೆಗೆ ಕಟ್ಟುವುದಿಲ್ಲ.

ಎ.ಐಗೆ ನಿಮ್ಮ ಪರಿಸ್ಥಿತಿ ಅರ್ಥವಾಗುವುದಿಲ್ಲ: ಪ್ರತಿ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ, ಆದಾಯದ ಮೂಲ ಮತ್ತು ಕುಟುಂಬದ ಹಿನ್ನೆಲೆ ಭಿನ್ನವಾಗಿರುತ್ತದೆ. ಯಾವುದೇ ಎ.ಐ ಚಾಟ್‌ಬಾಟ್ ಮುಂದೆ ಕುಳಿತು 'ನನ್ನ ಬಳಿ ₹2 ಲಕ್ಷ ಇದೆ. ನನಗೊಂದು ಅತ್ಯುತ್ತಮ ಹೂಡಿಕೆಯ ದಾರಿ ತೋರಿಸು' ಎಂದು ಕೇಳಿದರೆ, ಅದು ಗಣಿತದ ಲೆಕ್ಕಾಚಾರ ಆಧರಿಸಿ ಮಾರುಕಟ್ಟೆಯಲ್ಲಿ ಗರಿಷ್ಠ ಲಾಭ ತಂದುಕೊಡುವ ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಅಥವಾ ಹೈ-ರಿಸ್ಕ್ ಷೇರುಗಳ ಆಕರ್ಷಕ ಪಟ್ಟಿಯನ್ನು ನಿಮ್ಮ ಮುಂದೆ ಇಡುತ್ತದೆ. ಆದರೆ ಕೃತಕ ಬುದ್ಧಿಮತ್ತೆಗೆ ನಿಮ್ಮ ಜೀವನದ ನೈಜ ಸನ್ನಿವೇಶಗಳನ್ನು ಗ್ರಹಿಸುವ ಶಕ್ತಿ ಇರುವುದಿಲ್ಲ. ಈ ₹2 ಲಕ್ಷ ನಿಮ್ಮ ಮಗಳ ಮುಂದಿನ ವಿದ್ಯಾಭ್ಯಾಸ ಅಥವಾ ಮದುವೆಗಾಗಿ ಕಷ್ಟಪಟ್ಟು ಕೂಡಿಟ್ಟ ಹಣವೇ ಅಥವಾ ಮುಂದಿನ ತಿಂಗಳು ನಿಮ್ಮ ತಂದೆಯ ವೈದ್ಯಕೀಯ ತುರ್ತು ಚಿಕಿತ್ಸೆಗೆ ಬೇಕಾಗಬಹುದಾದ ಮೀಸಲು ನಿಧಿಯೇ ಎಂಬ ಪ್ರಾಯೋಗಿಕ ಜ್ಞಾನ ಅದಕ್ಕೆ ಇರುವುದಿಲ್ಲ.

ಅಷ್ಟೇ ಅಲ್ಲದೆ, ಪ್ರಸ್ತುತ ನಿಮ್ಮ ಮೇಲೆ ಎಷ್ಟು ಸಾಲದ ಹೊರೆ ಇದೆ, ನಿಮ್ಮ ಮಾಸಿಕ ಖರ್ಚುಗಳೇನು ಮತ್ತು ಒಂದು ವೇಳೆ ಮಾರುಕಟ್ಟೆ ದಿಢೀರನೆ ಕುಸಿದರೆ ಆ ನಷ್ಟವನ್ನು ತಡೆದುಕೊಳ್ಳುವ ಆರ್ಥಿಕ ಹಾಗೂ ಮಾನಸಿಕ ಸಾಮರ್ಥ್ಯ ನಿಮಗಿದೆಯೇ ಎಂಬ ಅತ್ಯಗತ್ಯ ಪ್ರಶ್ನೆಗಳನ್ನು ಎ.ಐ ನಿಮ್ಮಲ್ಲಿ ಕೇಳುವುದಿಲ್ಲ. ಅದು ಅಂಕಿ-ಅಂಶ ಆಧರಿಸಿ ಮಾತ್ರ ಲೆಕ್ಕ ಹಾಕುತ್ತದೆ. ಹೂಡಿಕೆಯ ಜಗತ್ತಿನಲ್ಲಿ ಗಣಿತದ ಸೂತ್ರಗಳಿಗಿಂತ ನಿಮ್ಮ ವೈಯಕ್ತಿಕ ಅಗತ್ಯಗಳು, ಸಮಯದ ಮಿತಿ ಮತ್ತು ಸುರಕ್ಷತೆಗೆ ಹೆಚ್ಚಿನ ಆದ್ಯತೆ ಇರುತ್ತದೆ. ನಿಮ್ಮ ಜೀವನದ ಕಠಿಣ ಪರಿಸ್ಥಿತಿಗಳನ್ನು ಅರಿಯದ ಯಂತ್ರದ ಸಲಹೆಯನ್ನು ಕುರುಡಾಗಿ ನಂಬಿದರೆ, ತುರ್ತು ಸಂದರ್ಭದಲ್ಲಿ ಹಣ ಸಿಗದೆ ಅಥವಾ ಮಾರುಕಟ್ಟೆಯ ಕುಸಿತದಿಂದ ಬಂಡವಾಳವೇ ಕರಗಿ ಹೋಗಿ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ.

ಎ.ಐ ಬಳಸಿಕೊಳ್ಳುವುದು ಹೇಗೆ?: ನಿಮ್ಮ ಹೂಡಿಕೆಯ ಹಾದಿಯಲ್ಲಿ ಕೃತಕ ಬುದ್ಧಿಮತ್ತೆಯನ್ನು ಕಣ್ಣುಮುಚ್ಚಿ ನಂಬುವ ಬದಲು, ಅದನ್ನು ನಿಮ್ಮ ಕೆಲಸದ ಹೊರೆ ಕಡಿಮೆ ಮಾಡುವ ಒಂದು ಸಹಾಯಕನನ್ನಾಗಿ ಬಳಸಬಹುದು. ಇದಕ್ಕಾಗಿ ಮೊದಲಿಗೆ ವಲಯಗಳ ವಿಶ್ಲೇಷಣೆ ಅಥವಾ ವಲಯಗಳ ಅಧ್ಯಯನ ಮಾಡಲು ಎ.ಐ ನೆರವು ಪಡೆಯಬಹುದು.

ಉದಾಹರಣೆಗೆ, ಪ್ರಸ್ತುತ ಭಾರತದಲ್ಲಿ ನವೀಕರಿಸಬಹುದಾದ ಇಂಧನ ಅಥವಾ ವಿದ್ಯುತ್ ಚಾಲಿತ ವಾಹನ ವಲಯದ ಬೆಳವಣಿಗೆ ಹೇಗಿದೆ ಎಂಬಂತಹ ವಿಶಾಲವಾದ ಅಧ್ಯಯನಕ್ಕೆ ಇದನ್ನು ಬಳಸಿದಾಗ ಮಾರುಕಟ್ಟೆಯ ಇತ್ತೀಚಿನ ಪ್ರವೃತ್ತಿಗಳು ನಮಗೆ ಸುಲಭವಾಗಿ ಅರ್ಥವಾಗುತ್ತದೆ. ಎರಡನೆಯದಾಗಿ, ಅಪಾಯ ನಿರ್ವಹಣೆ ಅಥವಾ ರಿಸ್ಕ್ ಪ್ರೊಫೈಲಿಂಗ್ ಪ್ರಕ್ರಿಯೆಯನ್ನು ಸುಲಭಗೊಳಿಸಲು ನಮ್ಮ ವಯಸ್ಸು, ಆದಾಯ ಮತ್ತು ಆರ್ಥಿಕ ಗುರಿಗಳನ್ನು ಎ.ಐ ಚಾಟ್‌ಬಾಟ್‌ಗೆ ನೀಡಿ, ನಮ್ಮ ಹೂಡಿಕೆಯಲ್ಲಿ ಎಷ್ಟು ಭಾಗ ಸುರಕ್ಷಿತವಾಗಿರಬೇಕು ಮತ್ತು ಎಷ್ಟು ಭಾಗ ಮಾರುಕಟ್ಟೆಯ ರಿಸ್ಕ್‌ಗೆ ಒಳಪಡಬೇಕು ಎಂಬ ನೀಲನಕ್ಷೆ ಪಡೆಯಬಹುದು.

ಹಣಕಾಸಿನ ಸಾಕ್ಷರತೆ ಹೆಚ್ಚಿಸಿಕೊಳ್ಳಲು ಇದು ನೆರವಾಗುತ್ತದೆ. ಮಾರುಕಟ್ಟೆಯ ಜಟಿಲ ಪದಗಳಾದ ಪಿಇ ರೇಷಿಯೋ, ಆಲ್ಫಾ ಮತ್ತು ಬೀಟಾ ಮೌಲ್ಯಗಳು ಅಥವಾ ಡೆಟ್-ಟು-ಈಕ್ವಿಟಿ ಎಂದರೇನು ಎಂಬುದನ್ನು ಅತ್ಯಂತ ಸರಳ ಉದಾಹರಣೆಗಳೊಂದಿಗೆ ನಮಗೆ ಅರ್ಥವಾಗುವಂತೆ ವಿವರಿಸಲು ಎ.ಐ ಅನ್ನು ಬಳಸಿ ನಮ್ಮ ಹೂಡಿಕೆಯ ಜ್ಞಾನ ವೃದ್ಧಿಸಿಕೊಳ್ಳಬಹುದು.

ಕೃತಕ ಬುದ್ಧಿಮತ್ತೆ ಯುಗದ ಅಪಾಯ

ತಂತ್ರಜ್ಞಾನ ಬೆಳೆದಂತೆಲ್ಲ ವಂಚಕರು ಜನರನ್ನು ವಂಚಿಸಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳನ್ನು ತೆರೆದರೆ ಸಾಕು, 'ನಮ್ಮ ಅತ್ಯಾಧುನಿಕ ಎ.ಐ ರೋಬೊ ಶೇಕಡ ನೂರರಷ್ಟು ನಿಖರವಾದ ಟ್ರೇಡಿಂಗ್ ಸಿಗ್ನಲ್ ನೀಡುತ್ತದೆ, ನಿಮ್ಮ ಹೂಡಿಕೆಗೆ ದಿನಕ್ಕೆ ಇಷ್ಟೇ ಲಾಭ ಮಾಡಿಕೊಡುತ್ತದೆ' ಎಂಬ ಆಕರ್ಷಕ ವಿಡಿಯೊಗಳು ಮತ್ತು ಜಾಹೀರಾತುಗಳು ಸಿಗುತ್ತವೆ. ಹಣಕಾಸು ತಜ್ಞರು ಅಥವಾ ಪ್ರಸಿದ್ಧ ಉದ್ಯಮಿಗಳ ಮುಖ ಮತ್ತು ಧ್ವನಿಯನ್ನು ಡೀಪ್‌ಫೇಕ್ ತಂತ್ರಜ್ಞಾನದ ಮೂಲಕ ಸೃಷ್ಟಿಸಿ, ಜನರನ್ನು ನಂಬಿಸುವಂತಹ ಬಲೆ ಹೆಣೆಯಲಾಗುತ್ತಿದೆ. ಸಾಮಾನ್ಯ ಹೂಡಿಕೆದಾರರು ಇಂಥವುಗಳನ್ನು ನೋಡಿ ಬೆರಗಾಗಿ, ರಾತ್ರೋರಾತ್ರಿ ಶ್ರೀಮಂತರಾಗುವ ಆಸೆಗೆ ಬಿದ್ದು ತಮ್ಮ ಕಷ್ಟದ ಹಣವನ್ನು ಕೆಲವು ನಕಲಿ ಆ್ಯಪ್‌ಗಳಿಗೆ ಸುರಿಯುತ್ತಿದ್ದಾರೆ.

ಆದರೆ ಹೂಡಿಕೆಯ ಜಗತ್ತಿನಲ್ಲಿ ನಾವೆಲ್ಲರೂ ನೆನಪಿಡಬೇಕಾದ ಕಟು ಸತ್ಯವೆಂದರೆ, ಜಗತ್ತಿನ ಯಾವುದೇ ಮೂಲೆಯಲ್ಲೂ ಶೇಕಡ ನೂರರಷ್ಟು ನಿಖರವಾಗಿ ಮಾರುಕಟ್ಟೆಯನ್ನು ಊಹಿಸುವ ತಂತ್ರಜ್ಞಾನವಾಗಲಿ ಅಲ್ಗಾರಿದಮ್ ಆಗಲಿ ಅಸ್ತಿತ್ವದಲ್ಲಿಲ್ಲ. ದೊಡ್ಡ ಹಣಕಾಸು ಸಂಸ್ಥೆಗಳೇ ಮಾರುಕಟ್ಟೆಯ ಏರಿಳಿತಗಳನ್ನು ನಿಭಾಯಿಸಲು ಪರದಾಡುತ್ತಿರುವಾಗ, ಕ್ಷಿಪ್ರ ಲಾಭದ ಭರವಸೆ ನೀಡುವ ಇವೆಲ್ಲವೂ ಎ.ಐ ಹೆಸರಿನಲ್ಲಿ ನಡೆಯುತ್ತಿರುವ ಹೊಸ ಯುಗದ ಅತ್ಯಂತ ಅಪಾಯಕಾರಿ ಡಿಜಿಟಲ್ ವಂಚನೆಗಳಾಗಿವೆ. ಇಂತಹ ವಂಚಕ ಆ್ಯಪ್‌ಗಳು ಆರಂಭದಲ್ಲಿ ಸಣ್ಣ ಮಟ್ಟದ ಲಾಭವನ್ನು ತೋರಿಸಿ, ನಂತರ ದೊಡ್ಡ ಮೊತ್ತದ ಹಣವನ್ನು ಹೂಡಿಕೆ ಮಾಡಿಸಿಕೊಂಡು ಮಾಯವಾಗುತ್ತವೆ. ಇಷ್ಟೇ ಅಲ್ಲದೆ, ಇಂತಹ ನಕಲಿ ಲಿಂಕ್‌ಗಳನ್ನು ಕ್ಲಿಕ್ ಮಾಡುವುದರಿಂದ ನಿಮ್ಮ ಬ್ಯಾಂಕ್ ಖಾತೆಯ ರಹಸ್ಯ ವಿವರಗಳು ಮತ್ತು ವೈಯಕ್ತಿಕ ದತ್ತಾಂಶಗಳು ಹ್ಯಾಕರ್‌ಗಳ ಪಾಲಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ಕೃತಕ ಬುದ್ಧಿಮತ್ತೆಯ ಹೆಸರಿನಲ್ಲಿ ಬರುವ ಇಂತಹ ಯಾವುದೇ ಅಡ್ಡದಾರಿಯ ಯೋಜನೆಗಳನ್ನು ನಂಬದೆ, ಅಧಿಕೃತವಲ್ಲದ ಆ್ಯಪ್‌ಗಳಿಗೆ ನಿಮ್ಮ ಬ್ಯಾಂಕ್ ವಿವರಗಳನ್ನಾಗಲಿ ಕಷ್ಟಪಟ್ಟು ದುಡಿದ ಬಂಡವಾಳವನ್ನಾಗಲಿ ನೀಡಿ ಮೋಸ ಹೋಗಬೇಡಿ.

ದೇಶದ ಅತಿದೊಡ್ಡ ವಿಮಾ ಕಂಪನಿಯ ಸಿಇಒ ದೊರೈಸ್ವಾಮಿ ಹೇಳಿಕೆ

ಫಿನ್‌ಟೆಕ್ ಪ್ರವೇಶಿಸಲು ಎಲ್‌ಐಸಿ ಉತ್ಸುಕ

ನವದೆಹಲಿ (ಪಿಟಿಐ): ವಿಮಾ ಕ್ಷೇತ್ರದಲ್ಲಿ ಬೃಹದಾಕಾರವಾಗಿ ಬೆಳೆದಿರುವ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಫಿನ್‌ಟೆಕ್ ಕ್ಷೇತ್ರವನ್ನು ಪ್ರವೇಶಿಸಲು ಉತ್ಸುಕವಾಗಿದೆ.

'ಆಧುನೀಕರಣದ ಅಗತ್ಯಕ್ಕೆ ಸ್ಪಂದಿಸಲು ಹಾಗೂ ಹೊಸತನವನ್ನು ತರಲು ನಾವು ಫಿನ್‌ಟೆಕ್ ಮತ್ತು ವಿಮಾ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಬಳಸುತ್ತಿರುವವರ ಜೊತೆ ಮಾತುಕತೆ ನಡೆಸುತ್ತಿದ್ದೇವೆ' ಎಂದು ಎಲ್‌ಐಸಿ ಸಿಇಒ ಹಾಗೂ ಎಂ.ಡಿ. ಆರ್. ದೊರೈಸ್ವಾಮಿ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ನಮ್ಮದು ಹಲವು ಕಂಪನಿಗಳಲ್ಲಿ ಹೂಡಿಕೆ ಮಾಡುವ ಬಹಳ ದೊಡ್ಡ ಹಣಕಾಸು ಕಂಪನಿ. ನಮ್ಮ ಪಾಲಿಸಿದಾರರಿಗೆ ಹೆಚ್ಚಿನ ಲಾಭ ತಂದುಕೊಡಲು ವಿಶೇಷ ಪರಿಣತಿ ಹೊಂದಿರುವ ಕಂಪನಿಗಳಲ್ಲಿ ಹೂಡಿಕೆ ಮಾಡುವ ಅವಕಾಶವನ್ನೂ ಅರಸುತ್ತ ಇರುತ್ತೇವೆ' ಎಂದು ದೊರೈಸ್ವಾಮಿ ತಿಳಿಸಿದ್ದಾರೆ.

ಡಿಜಿಟಲ್ ತಂತ್ರಜ್ಞಾನವನ್ನು ಆರಂಭಿಕ ಹಂತದಲ್ಲಿಯೇ ಅಳವಡಿಸಿಕೊಂಡ ಕಂಪನಿಗಳ ಪೈಕಿ ಎಲ್‌ಐಸಿ ಕೂಡ ಒಂದು ಎಂದು ಅವರು ಹೇಳಿದ್ದಾರೆ.

'ತಂತ್ರಾಂಶ ಅಭಿವೃದ್ಧಿ ಕೇಂದ್ರವೊಂದನ್ನು ಆರಂಭಿಸಿ ನಮಗೆ ಬೇಕಿರುವ ಅಪ್ಲಿಕೇಷನ್‌ಗಳನ್ನು ನಾವೇ ಅಭಿವೃದ್ಧಿಪಡಿಸುವ ಸಾಮರ್ಥ್ಯ ಪಡೆದುಕೊಂಡಿದ್ದೇವೆ. ನಮ್ಮ ಐ.ಟಿ. ವಿಭಾಗಗಳಲ್ಲಿ ಹಲವರು ಕೆಲಸ ಮಾಡುತ್ತಿದ್ದಾರೆ. ಆದರೆ ನಾವು ಪೂರ್ಣವಾಗಿ ಸ್ವಾವಲಂಬಿ ಆಗಿದ್ದೇವೆ ಎಂದೇನೂ ಅಲ್ಲ. ನಾವು ಐ.ಟಿ ಸೇವೆ ಒದಗಿಸುವ ಹಲವರ ಜೊತೆಗೂಡಿ ಹೊಸ ಮೂಲಸೌಕರ್ಯ ನಿರ್ಮಿಸುತ್ತಿದ್ದೇವೆ' ಎಂದು ಅವರು ವಿವರಿಸಿದ್ದಾರೆ.

ಐಪಿಒ ನಂತರದಲ್ಲಿ ಎಲ್‌ಐಸಿ ತನ್ನ ಷೇರುದಾರರಿಗೆ ಪ್ರತಿ ಒಂದು ಷೇರಿಗೆ ಒಂದು ಷೇರನ್ನು ಬೋನಸ್ ರೂಪದಲ್ಲಿ ನೀಡಿದೆ. ಕಳೆದ ತ್ರೈಮಾಸಿಕದಲ್ಲಿ ಲಾಭಾಂಶ ಮೊತ್ತವನ್ನು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 67ರಷ್ಟು ಹೆಚ್ಚಿಸಲಾಗಿದೆ ಎಂದಿದ್ದಾರೆ.

ಮೇ ಆರಂಭದಲ್ಲಿ ಮಾರ್ಚ್ ತ್ರೈಮಾಸಿಕದ ಹಣಕಾಸು ಫಲಿತಾಂಶ ಪ್ರಕಟಿಸಿರುವ ಎಲ್‌ಐಸಿ, ನಿವ್ವಳ ಲಾಭದಲ್ಲಿ ಶೇ 23ರಷ್ಟು ಹೆಚ್ಚಳ ಆಗಿದೆ ಎಂದು ತಿಳಿಸಿದೆ. ಇದು ದೇಶದ ಯಾವುದೇ ಹಣಕಾಸು ಸೇವಾ ಕಂಪನಿಯ ಲಾಭಕ್ಕಿಂತ ಹೆಚ್ಚಿನದಾಗಿದೆ.

ಲಾಭಕ್ಕೆ ಮರಳಿದ ಕಾಫಿ ಡೇ ಗ್ಲೋಬಲ್

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಾಫಿ ಡೇ ಗ್ಲೋಬಲ್ ಲಿಮಿಟೆಡ್, ತೆರಿಗೆ ನಂತರದ ಲಾಭವಾಗಿ (ಪಿಎಟಿ) ₹14 ಕೋಟಿ ಗಳಿಸಿದೆ.

ಇದೇ ಅವಧಿಯಲ್ಲಿ ಕಂಪನಿಯ ವರಮಾನ ಶೇ 5.7ರಷ್ಟು ಹೆಚ್ಚಳವಾಗಿದ್ದು, ₹1,094 ಕೋಟಿ ಆಗಿದೆ ಎಂದು ಕಂಪನಿಯ ಮಾತೃ ಸಂಸ್ಥೆ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ಷೇರುಪೇಟೆಗೆ ತಿಳಿಸಿದೆ.

2024–25ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹1,034 ಕೋಟಿ ನಿವ್ವಳ ವರಮಾನ ಗಳಿಸಿದ್ದರೆ, ತೆರಿಗೆ ನಂತರದ ನಷ್ಟ ₹175 ಕೋಟಿಯಷ್ಟಾಗಿತ್ತು. ಕಂಪನಿಯ ಮಳಿಗೆಗಳ ಸಂಖ್ಯೆಯು 435ರಿಂದ 424ಕ್ಕೆ ಇಳಿದಿದೆ.

ನೌಕಾಪಡೆ: ಕೃಷ್ಣ ಸ್ವಾಮಿನಾಥನ್ ಅಧಿಕಾರ ಸ್ವೀಕಾರ

ಕೃಷ್ಣ ಸ್ವಾಮಿನಾಥನ್

ನವದೆಹಲಿ (ಪಿಟಿಐ): 'ಕಡಲ ರಕ್ಷಣೆಗೆ ಹೆಚ್ಚಿನ ಒತ್ತು ನೀಡಿ, ಕಾರ್ಯಾಚರಣೆಯ ಸನ್ನದ್ಧತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು' ಎಂದು ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ತಿಳಿಸಿದ್ದಾರೆ.

ನವದೆಹಲಿಯ ನೌಕಾಸೇನೆಯ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಪ್ರಾದೇಶಿಕ ಭದ್ರತೆಯು ಸವಾಲು, ಸಂಕೀರ್ಣ ಹಾಗೂ ಅನಿರೀಕ್ಷಿತವಾಗಿದ್ದು, ದೇಶದ ಭದ್ರತೆ ಹಾಗೂ ಆರ್ಥಿಕ ಹಿತಾಸಕ್ತಿ ದೃಷ್ಟಿಯಿಂದ ಕಾರ್ಯಾಚರಣೆಗೆ ಸನ್ನದ್ಧವಾಗಿರಲು ಹೆಚ್ಚಿನ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದ್ದಾರೆ.

'ಭಾರತೀಯ ನೌಕಾಪಡೆಯ ಸಾಮರ್ಥ್ಯ ವೃದ್ಧಿ ಹಾಗೂ ಆಧುನೀಕರಣಕ್ಕೆ ಸದಾ ಸಜ್ಜಾಗಿದೆ' ಎಂದು ಈ ವೇಳೆ ಮಾಹಿತಿ ನೀಡಿದ್ದಾರೆ.

ಇದುವರೆಗೂ ನೌಕಾಸೇನೆಯ ಮುಖ್ಯಸ್ಥರಾಗಿದ್ದ ದಿನೇಶ್ ಕುಮಾರ್ ತ್ರಿಪಾಠಿ ನಿವೃತ್ತರಾಗಿದ್ದು, ನೌಕಾ ಪಡೆಯ ಪಶ್ಚಿಮ ಕಮಾಂಡ್‌ಅನ್ನು ಮುನ್ನಡೆಸುತ್ತಿದ್ದ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರಿಗೆ ಹೊಸ ಜವಾಬ್ದಾರಿ ನೀಡಲಾಗಿದೆ.

ಕೃಷ್ಣ ಸ್ವಾಮಿನಾಥನ್ ಅವರು ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯ ಹಳೆಯ ವಿದ್ಯಾರ್ಥಿ. ವಿಜಯಪುರದ ಸೈನಿಕ ಶಾಲೆಯಲ್ಲೂ ವ್ಯಾಸಂಗ ಮಾಡಿದ್ದಾರೆ.

ರಾಜಾ ಸುಬ್ರಮಣಿ ನೂತನ ಸಿಡಿಎಸ್

ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ಲೆಫ್ಟಿನೆಂಟ್ ಜನರಲ್ ಎನ್‌.ಎಸ್‌. ರಾಜಾ ಸುಬ್ರಮಣಿ ಅವರು ಭಾನುವಾರ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಧರಿಂದ ಗೌರವ ರಕ್ಷೆ ಸ್ವೀಕರಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ಮಹತ್ವಾಕಾಂಕ್ಷಿಯ ಸೇನೆಯ ಸಂಯೋಜಿತ ವ್ಯವಸ್ಥೆ ಸ್ಥಾಪಿಸುವುದು ಪ್ರಾಥಮಿಕ ಆದ್ಯತೆಯಾಗಿರಲಿದೆ' ಎಂದು ರಕ್ಷಣಾ ಪಡೆಗಳ ನೂತನ ಮುಖ್ಯಸ್ಥ (ಸಿಡಿಎಸ್) ಲೆಫ್ಟಿನೆಂಟ್ ಜನರಲ್ (ನಿವೃತ್ತ) ಎನ್.ಎಸ್. ರಾಜಾ ಸುಬ್ರಮಣಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಭಾನುವಾರ ಸಿಡಿಎಸ್ ಆಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, 'ಮೂರು ಸೇನಾ ಪಡೆಗಳನ್ನು ಮತ್ತಷ್ಟು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಹಾಲಿ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಅವರ ಅಧಿಕಾರಾವಧಿ ಮೇ 30ರಂದು ಕೊನೆಗೊಂಡಿತ್ತು. ಜನರಲ್ ಸುಬ್ರಮಣಿ ಅವರು ಪಾಕಿಸ್ತಾನ, ಚೀನಾದ ತಜ್ಞರೆಂದು ಹೆಸರಾಗಿದ್ದು, ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಸೇನಾ ಸಲಹೆಗಾರರಾಗಿಯೂ ಕೆಲಸ ಮಾಡಿದ್ದರು.

ಕಳೆದ ವರ್ಷ ಜುಲೈ 31ರಂದು ಸೇನೆಯ ಉಪಮುಖ್ಯಸ್ಥರಾಗಿ ನಿವೃತ್ತಿ ಪಡೆದಿದ್ದರು.

'ಭಾರತ–ನೇಪಾಳ: ಗಡಿ ವಿವಾದ ಬಗೆಹರಿಸಿಕೊಳ್ಳಲು ಒಪ್ಪಿಗೆ'

ಬಾಲೇಂದ್ರ ಶಾ

ಕಠ್ಮಂಡು (ಪಿಟಿಐ): 'ಭಾರತ ಮತ್ತು ನೇಪಾಳದ ಮಧ್ಯೆ ದೀರ್ಘಕಾಲದಿಂದ ಇರುವ ಗಡಿ ವಿವಾದವನ್ನು ಬಗೆಹರಿಸಿಕೊಳ್ಳಲು ಇತಿಹಾಸಕಾರರ, ಸರ್ವೆ ನಡೆಸುವವರ ಮತ್ತು ತಜ್ಞರ ಸಹಕಾರ ತೆಗೆದುಕೊಳ್ಳಲಾಗುವುದು. ಭಾರತ ಕೂಡ ಇದಕ್ಕೆ ಒಪ್ಪಿಕೊಂಡಿದೆ' ಎಂದು ನೇಪಾಳ ಪ್ರಧಾನಿ ಬಾಲೇಂದ್ರ ಶಾ ಅವರು ಸಂಸತ್ತಿಗೆ ತಿಳಿಸಿದರು.

ಕಾಲಾಪಾನಿ, ಲಿಪುಲೇಖ್ ಮತ್ತು ಲಿಂಪಿಯಾಧುರಾ ಪ್ರದೇಶಗಳ ಕುರಿತು ಭಾರತ ಮತ್ತು ನೇಪಾಳದ ಮಧ್ಯೆ ಗಡಿ ವಿವಾದವಿದೆ. ಈ ಪ್ರದೇಶಗಳು ನೇಪಾಳ, ಭಾರತ ಮತ್ತು ಟಿಬೆಟ್ ಗಡಿಗಳಿಗೆ ಹೊಂದಿಕೊಂಡಿವೆ. ಈ ಪ್ರದೇಶಗಳು ಉತ್ತರಾಖಂಡದ ಭಾಗಗಳು ಎಂಬುದು ಭಾರತದ ನಿಲುವು.

'ನಾವು ಭಾರತಕ್ಕೆ ಅಧಿಕೃತವಾಗಿಯೇ ಈ ಬಗ್ಗೆ ಪತ್ರ ಕಳುಹಿಸಿದ್ದೇವು. ಭಾರತದ ಕೂಡ ಇದಕ್ಕೆ ಪ್ರತಿಕ್ರಿಯೆ ನೀಡಿದೆ. ಭಾರತ ಮಾತ್ರವಲ್ಲ ನಾವು ಕೂಡ ಭಾರತದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದೇವೆ. ಪ್ರಧಾನಿ ಆದ ಬಳಿಕವೇ ನನಗೆ ಈ ಬಗ್ಗೆ ಮಾಹಿತಿ ತಿಳಿಯಿತು. ಸ್ನೇಹಪೂರ್ವಕವಾಗಿ ವಿವಾದ ಬಗೆಹರಿಸಿಕೊಳ್ಳಲು ನಾವುಗಳು ಒಪ್ಪಿಕೊಂಡಿದ್ದೇವೆ' ಎಂದು ಭಾನುವಾರ ತಿಳಿಸಿದರು.

'ನಾವೂ ಭಾರತದ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿದ್ದೇವೆ' ಎಂಬ ಪ್ರಧಾನಿ ಶಾ ಅವರ ಹೇಳಿಕೆಯು ವಿವಾದಕ್ಕೆ ಕಾರಣವಾಯಿತು. ಬಳಿಕ, ಸ್ಪಷ್ಟನೆ ನೀಡಿದ ನೇಪಾಳದ ವಿದೇಶಾಂಗ ಸಚಿವಾಲಯವು, 'ಪ್ರಧಾನಿ ಶಾ ಅವರು ಪ್ರಸ್ತಾಪಿಸಿರುವುದು ಯಾರಿಗೂ ಸೇರದ ಎರಡೂ ದೇಶಕ್ಕೂ ಸೇರದ ಸ್ಥಳವಾಗಿದೆ' ಎಂದಿತು.

'ಮಸೀದಿ ತೆರವು: ದಾಳಿಗೆ ಸಂಚು'

ಮುಂಬೈ (ಪಿಟಿಐ): ಇಲ್ಲಿನ ಬಾಂದ್ರಾದ ಗರೀಬ್ ನಗರ ಪ್ರದೇಶದಲ್ಲಿ ನಡೆದ ಅಕ್ರಮ ಕಟ್ಟಡಗಳ ತೆರವು ಕಾರ್ಯಾಚರಣೆ ವೇಳೆ ಮಸೀದಿಯನ್ನು ಕೆಡವಿದ್ದಕ್ಕೆ ಪ್ರತೀಕಾರ ತೀರಿಸಲು ಪೊಲೀಸರು ಮತ್ತು ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಲು ಉಗ್ರರು ಸಂಚು ರೂಪಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆ ನಂಟು ಹೊಂದಿದ ಆರೋಪದ ಮೇಲೆ ನೇಪಾಳದ ಒಬ್ಬ ಪ್ರಜೆಯೂ ಸೇರಿದಂತೆ 8 ಮಂದಿಯನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದರು. ಗರೀಬ್ ನಗರ ತೆರವು ಕಾರ್ಯಾಚರಣೆಗೆ ಪ್ರತೀ ಕಾರ ತೀರಿಸಲು ಇವರು ಯೋಜನೆ ರೂಪಿಸಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿರುವುದಾಗಿ ಪೊಲೀಸರು ಹೇಳಿದ್ದಾರೆ. ಗರೀಬ್ ನಗರದಲ್ಲಿ ಮೇ 19ರಿಂದ 23ರ ವರೆಗೆ ನಡೆದ ತೆರವು ಕಾರ್ಯಾಚರಣೆಗೆ ಅಲ್ಲಿನ ನಿವಾಸಿಗಳಿಂದ ಪ್ರತಿರೋಧ ವ್ಯಕ್ತವಾಗಿತ್ತು. ಕಲ್ಲು ತೂರಾಟದಲ್ಲಿ ಪೊಲೀಸರು ಸೇರಿದಂತೆ 10 ಮಂದಿ ಗಾಯಗೊಂಡಿದ್ದರು. ಈ ವೇಳೆ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು.

ಪಶ್ಚಿಮ ಬಂಗಾಳ: ಪೊಲೀಸ್ ಠಾಣೆಯ ಹೊರಭಾಗದಲ್ಲಿ ಹಲ್ಲೆ–ತೃಣಮೂಲ ಕಾಂಗ್ರೆಸ್ ಸಂಸದ ಆರೋಪ

ಬಿಜೆಪಿ ಬೆಂಬಲಿಗರಿಂದ ದಾಳಿ: ಕಲ್ಯಾಣ್ ಬ್ಯಾನರ್ಜಿ

ಹಲ್ಲೆಗೊಳಗಾದ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರನ್ನು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಭೇಟಿಯಾಗಿ ಮಾತುಕತೆ ನಡೆಸಿದರು–ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): 'ವಿಧಾನಸಭಾ ಚುನಾವಣೆಯ ನಂತರ ಪಕ್ಷದ ಕಾರ್ಯಕರ್ತರನ್ನು ಬಂಧಿಸಿರುವ ಸಂಬಂಧ ಮನವಿ ಪತ್ರ ನೀಡಲು ಹೂಗ್ಲಿ ಜಿಲ್ಲೆಯ ಪೊಲೀಸ್ ಠಾಣೆಯೊಂದಕ್ಕೆ ತೆರಳಿದ್ದ ವೇಳೆ ಗುಂಪೊಂದು ಹಲ್ಲೆ ನಡೆಸಿದ್ದು, ನನ್ನ ತಲೆಗೆ ತೀವ್ರವಾದ ಗಾಯಗಳಾಗಿವೆ' ಎಂದು ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ಆರೋಪಿಸಿದ್ದಾರೆ.

ಬಿಜೆಪಿ ಕಾರಣ: 'ನನ್ನ ಮೇಲೆ ದಾಳಿಯಾಗಲು ಬಿಜೆಪಿಯವರೇ ಕಾರಣ' ಎಂದು ಕಲ್ಯಾಣ್ ಬ್ಯಾನರ್ಜಿ ಆರೋಪಿಸಿದ್ದಾರೆ.

ಚಂದಿತಾಲ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲು ಕಲ್ಯಾಣ್ ಅವರು ನಿಯೋಗದ ಜೊತೆಗೆ ಬಂದಿದ್ದರು. ಈ ವೇಳೆ ಸುತ್ತುವರಿದ ಗುಂಪು ಕಪ್ಪು ಬಟ್ಟೆ ತೋರಿಸಿ, ಕಳ್ಳ ಕಳ್ಳ ಎಂದು ಘೋಷಣೆ ಕೂಗಿದರು.

'ಈ ಎಲ್ಲಾ ಘಟನೆಗಳು ಪೊಲೀಸರ ಮುಂಭಾಗವೇ ನಡೆದಿದೆ. ನನ್ನ ತಲೆಗೆ ಹೊಡೆಯಲಾಗಿದ್ದು, ರಕ್ತ ಸೋರುತ್ತಿದೆ' ಎಂದು ಕಲ್ಯಾಣ್ ಆರೋಪಿಸಿದ್ದಾರೆ.

ಇದಾದ ಬಳಿಕ ಠಾಣೆಯ ಮುಂಭಾಗದಲ್ಲಿ ಧರಣಿ ನಡೆಸಿದರು. ಪರಿಸ್ಥಿತಿ ವಿಕೋಪಕ್ಕೆ ಕೈ ಮೀರದಂತೆ ತಡೆಯಲು ಹೆಚ್ಚಿನ ಪೊಲೀಸ್ ಬಂದೋಬಸ್ತ್, ಕೇಂದ್ರಿಯ ಮೀಸಲು ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ.

ಈ ಆರೋಪವನ್ನು ತಳ್ಳಿಹಾಕಿರುವ ಬಿಜೆಪಿ, 'ಟಿಎಂಸಿ ನಾಯಕರ ವಿರುದ್ಧ ಸ್ಥಳೀಯ ಜನರೇ ಆಕ್ರೋಶ ಹೊರಹಾಕುತ್ತಿದ್ದಾರೆ, ಇದರಲ್ಲಿ ಪಕ್ಷದ ಯಾವುದೇ ಪಾತ್ರವಿಲ್ಲ' ಎಂದು ತಿಳಿಸಿದೆ.

ಅಭಿಷೇಕ್ ಮೇಲೆ ಹಲ್ಲೆ; ನಾಲ್ವರ ಬಂಧನ

ಕೋಲ್ಕತ್ತ (ಪಿಟಿಐ): ದಕ್ಷಿಣ 24 ಪರಗಣ ಜಿಲ್ಲೆಯ ಸೋನಾರ್‌ಪುರಕ್ಕೆ ಭೇಟಿ ನೀಡಿದ ವೇಳೆ ತೃಣಮೂಲ ಕಾಂಗ್ರೆಸ್ ನಾಯಕ, ಸಂಸದ ಅಭಿಷೇಕ್ ಬ್ಯಾನರ್ಜಿ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ಮಂದಿಯನ್ನು ಬಂಧಿಸಲಾಗಿದೆ.

'ಸ್ಥಳದಲ್ಲಿದ್ದ ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಆಧರಿಸಿ ಶನಿವಾರ ರಾತ್ರಿಯೇ ವಿವಿಧೆಡೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಧಿಕಾರಿ ಸಾವಿನ ಪ್ರಕರಣ ಸಿಬಿಐ ತನಿಖೆ

ತಿರುವನಂತಪುರ: ಕೇರಳಂನ ಕಣ್ಣೂರಿನ ಸಿಪಿಎಂ ನಾಯಕಿ ಪಿ.ಪಿ ದಿವ್ಯಾ ಭಾಗಿಯಾಗಿದ್ದಾರೆ ಎನ್ನಲಾದ ಸರ್ಕಾರಿ ಅಧಿಕಾರಿಯೊಬ್ಬರ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

2024ರಲ್ಲಿ ಈ ಘಟನೆ ನಡೆದಿತ್ತು. ಹಿರಿಯ ಕಂದಾಯ ಅಧಿಕಾರಿಯಾಗಿದ್ದ ನವೀನ್ ಬಾಬು ಅವರ ಬೀಳ್ಕೊಡುಗೆ ಸಮಾರಂಭದಲ್ಲಿ, ಕಣ್ಣೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯೂ ಆಗಿದ್ದ ಪಿ.ಪಿ ದಿವ್ಯಾ ಅವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ದಿವ್ಯಾ ಅವರು, 'ಪೆಟ್ರೋಲ್ ಬಂಕ್ ಸ್ಥಾಪನೆ ಅರ್ಜಿಗೆ ಅನುಮೋದನೆ ನೀಡಲು ಬಾಬು ಉದ್ದೇಶಪೂರ್ವಕಾಗಿ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ, ಅವಮಾನಿಸಿದ್ದರು. ಬೀಳ್ಕೊಡುಗೆ ಕಾರ್ಯಕ್ರಮದ ಮರುದಿನ ಬೆಳಿಗ್ಗೆ ಬಾಬು ಅವರ ಮೃತದೇಹ ಅವರ ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಸೋಮವಾರ • ಜೂನ್ 1, 2026
ಪ್ರಜಾವಾಣಿ
ಪ್ರಜಾಪ್ಲಸ್
| ಮನರಂಜನೆ
| ಜಾಹೀರಾತು
| ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ

'ಸಿನಿ ಸಮ್ಮಾನ'ದ ಇನ್ನಷ್ಟು ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಿನಿ ಸಮ್ಮಾನ: ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಚಿತ್ರಗಳು

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' 4ನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2025ನೇ ಸಾಲಿನ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡವರ ವಿವರಗಳನ್ನು ತಿಳಿಸುವ ಸಮಯ ಇದು. 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ಪರಿಣತರ ತಂಡವು ನಾಮನಿರ್ದೇಶನಗಳನ್ನು ಮಾಡಿದೆ. ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಚಿತ್ರಗಳು ವಿಭಾಗದಡಿಯಲ್ಲಿ ಪೋಸ್ಟ್ ಪ್ರೊಡಕ್ಷನ್ ತಂತ್ರಜ್ಞರ ಶ್ರಮವನ್ನೂ ಗುರುತಿಸಲಾಗುತ್ತಿದೆ. ಅತ್ಯುತ್ತಮ ನಿರ್ಮಾಣ, ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್ ಹಾಗೂ ಅತ್ಯುತ್ತಮ ಧ್ವನಿಗ್ರಹಣ, ಶಬ್ದವಿನ್ಯಾಸ ವಿಭಾಗದ ನಾಮನಿರ್ದೇಶಿತರ ಹೆಸರು/ಸಿನಿಮಾಗಳನ್ನು ಪ್ರಕಟಿಸಲಾಗಿದೆ. ಇದರೊಂದಿಗೆ ಸಿನಿ ಸಮ್ಮಾನದ ನಾಮನಿರ್ದೇಶನ ಪ್ರಕ್ರಿಯೆ ಮುಕ್ತಾಯಗೊಂಡಿದೆ. ಜೂನ್ 19ರಂದು ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜೇತರ ಹೆಸರು ಘೋಷಣೆಯಾಗಲಿದೆ.

4ನೇ ಆವೃತ್ತಿ ಜೂನ್ 19ಕ್ಕೆ

CASAGRAND building aspirations
Presents
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ನಿರ್ಮಾಣ

ವಿಶ್ವಾಸ್ ಕಶ್ಯಪ್ ಎಕ್ಕ	ಮೋಹನ್ ಬಿ ಕೆರೆ ಭೂ ಮಂತರ್	ಭೀಮರಾವ್ ಪಿ ಹೆಬ್ಬುಲಿ ಕಟ್	ಸತೀಶ್ ಅನ್‌ಲಾಕ್ ರಾಘವ	ಹೊಂಬಾಳೆ ಫಿಲ್ಮ್ಸ್ ಕಾಂತಾರ: ಅಧ್ಯಾಯ–1	ಸೂರಜ್ ಪ್ರೊಡಕ್ಷನ್ಸ್ 45

ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್

ಸಂಗಮೇಶ್ ವಾಲೆ ಪಾರು ಪಾರ್ವತಿ	ಆಸ್ಟ್ರಾ ಸ್ಟುಡಿಯೋಸ್ ಕಾಂತಾರ: ಅಧ್ಯಾಯ–1	ಯೂನಿಫೈ ಮೀಡಿಯ ಭೂ ಮಂತರ್	ಫಾರ್ಚ್ಯೂನ್ ಎಫ್‌ಎಕ್ಸ್ ಎಕ್ಕ	ನಾಗೇಶ್ ಮನದ ಕಡಲು	ಸೂರಜ್ ಪ್ರೊಡಕ್ಷನ್ಸ್ 45

ಅತ್ಯುತ್ತಮ ಧ್ವನಿಗ್ರಹಣ, ಶಬ್ದವಿನ್ಯಾಸ



ರಾಹುಲ್ ರೋಣ	ಸೋಮಶೇಖರ ವನ್ಯಾ	ರಾಹುಲ್ ರಂಜನ್ ಬ್ರ್ಯಾಟ್	ಶಿಬಿನ್ ನಿಡುವತ್ತಿಲ್ ಲವ್ ಯು ಮುದ್ದು	ಸೌಂಡ್ ವೈಬ್ ಏಳುಮಲೆ	ಹೊಂಬಾಳೆ ಫಿಲ್ಮ್ಸ್ ಕಾಂತಾರ: ಅಧ್ಯಾಯ–1

ವಿಜೇತರ ಆಯ್ಕೆ ಹೀಗಿರಲಿದೆ...

ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯ ತೀರ್ಪುಗಾರರು ಅನುಮೋದಿಸಿದ್ದಾರೆ. ಇಂದು ಪ್ರಕಟಗೊಂಡ ನಾಮನಿರ್ದೇಶನಗಳಿಗೆ ವೋಟಿಂಗ್ ಮೂಲಕ ಆಯ್ಕೆ ಪ್ರಕ್ರಿಯೆ ಇರುವುದಿಲ್ಲ. ಬದಲಿಗೆ, ಓರ್ವ ವಿಜೇತರ ಹೆಸರನ್ನು ವಿವಿಧ ಮಾನದಂಡಗಳನ್ನು ಆಧರಿಸಿ ಮುಖ್ಯ ತೀರ್ಪುಗಾರರೇ ಅಂತಿಮಗೊಳಿಸಲಿದ್ದಾರೆ.

ದೋಷ ಒಪ್ಪಿಕೊಂಡ ಸಿಬಿಎಸ್‌ಇ

ಆನ್‌ಮಾರ್ಕ್ ಪೋರ್ಟಲ್: ಪಾವತಿ ವ್ಯವಸ್ಥೆ ಸರಿಪಡಿಸಿದ ಸೈಬರ್ ತಜ್ಞರು

ಪ್ರಜಾವಾಣಿ ವಾರ್ತೆ

ನವದೆಹಲಿ: ಹತ್ತು ಮತ್ತು ಹನ್ನೆರಡನೆಯ ತರಗತಿಯ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನಕ್ಕಾಗಿ ಪರಿಚಯಿಸಲಾದ 'ಆನ್ ಸ್ಕ್ರೀನ್ ಮಾರ್ಕಿಂಗ್' (ಒಎಸ್‌ಎಂ) ವ್ಯವಸ್ಥೆ- ಆನ್‌ಮಾರ್ಕ್ ಪೋರ್ಟಲ್‌ನಲ್ಲಿ ದೋಷ ಇತ್ತು ಎನ್ನುವುದನ್ನು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಭಾನುವಾರ ಒಪ್ಪಿಕೊಂಡಿದೆ.

ಆನ್‌ಮಾರ್ಕ್ ಪೋರ್ಟಲ್‌ನ ಪಾವತಿ ದೋಷವನ್ನು ಐಐಟಿ ಸೈಬರ್ ತಜ್ಞರ ನೆರವಿನಿಂದ ಸರಿಪಡಿಸಲಾಗಿದೆ. ಈ ಭದ್ರತಾ ವೈಫಲ್ಯವನ್ನು ಎತ್ತಿ

ತೋರಿಸಿದ 'ನೈತಿಕ ಹ್ಯಾಕರ್'ಗಳಿಗೆ ಮತ್ತು ಸಾರ್ವಜನಿಕರಿಗೆ ಧನ್ಯವಾದ ಎಂದು ಸಿಬಿಎಸ್‌ಇ ಪ್ರಕಟಣೆ ತಿಳಿಸಿದೆ.

ಆನ್‌ಮಾರ್ಕ್ ಪೋರ್ಟಲ್‌ನ ಪಾವತಿ ವ್ಯವಸ್ಥೆಯ ಮೇಲೆ ಶನಿವಾರ ಸೈಬರ್ ದಾಳಿ ನಡೆದಿದ್ದು, ಕೆಲವು ವಿದ್ಯಾರ್ಥಿಗಳು ಅನಧಿಕೃತವಾಗಿ ಪೋರ್ಟಲ್ ಪ್ರವೇಶಿಸಿ, ಪಾವತಿ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ವಿನೋದಕ್ಕಾಗಿ ಅಥವಾ ದುರುದ್ದೇಶದಿಂದ ನಡೆದ ಈ ಕೃತ್ಯದ ಬೆನ್ನಲ್ಲೇ ಸಿಬಿಎಸ್‌ಇ, ಪೋರ್ಟಲ್‌ನ ಭದ್ರತೆ ವ್ಯವಸ್ಥೆಯನ್ನು ಹೆಚ್ಚಿಸಿದೆ.

'ತಾಂತ್ರಿಕ ಸಮಸ್ಯೆ ಬಗೆಹರಿದರೂ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಆನ್‌ಲೈನ್ ಮೂಲಕ ಹಣ ವರ್ಗಾವಣೆಯ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುವ ಪೇಮೆಂಟ್ ಗೇಟ್‌ವೇ ವ್ಯವಸ್ಥೆ ಮೇಲೆ ಮತ್ತೆ ಸೈಬರ್ ದಾಳಿ ನಡೆಯದಂತೆ ಸುರಕ್ಷತಾ ಕ್ರಮವನ್ನು ಬಲಪಡಿಸಲಾಗಿದೆ. ಪೋರ್ಟಲ್ ದೋಷರಹಿತವಾಗಿ ಸಾರ್ವಜನಿಕರಿಗೆ ಲಭ್ಯವಾಗಲಿದೆ. ಮತ್ತೆ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಲ್ಲಿ secy-cbse@nic.in ಮೂಲಕ ಸೈಬರ್ ಭದ್ರತಾ ತಂಡವನ್ನು ಸಂಪರ್ಕಿಸಬಹುದು ಎಂದು ಸಿಬಿಎಸ್‌ಇ ಪ್ರಕಟಣೆ ತಿಳಿಸಿದೆ.

'ಸ್ಕ್ಯಾನ್ ಅಲ್ಲ, ಮೊಬೈಲ್ ಚಿತ್ರ'

'ಆನ್‌ಮಾರ್ಕ್ ಪೋರ್ಟಲ್‌ನಲ್ಲಿ ಗಂಭೀರ ಭದ್ರತಾ ದೋಷ ಇತ್ತು. ಪಾವತಿ ವ್ಯವಸ್ಥೆ ಮಾತ್ರವಲ್ಲ, ಯಾರು ಬೇಕಿದ್ದರೂ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶ ಇತ್ತು. ಪ್ರಮುಖವಾಗಿ ಈ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡುವ ಬದಲು, ಮೊಬೈಲ್‌ನಲ್ಲಿ ಫೋಟೊ ತೆಗೆದು ಅಪ್‌ಲೋಡ್ ಮಾಡಿದಂತಿದೆ' ಎಂದು ನೈತಿಕ ಹ್ಯಾಕರ್ ನಿಸರ್ಗ ಅಧಿಕಾರಿ ಎಂಬುವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ದೊಡ್ಡ ಪ್ರಮಾಣದ ದತ್ತಾಂಶ ಸೋರಿಕೆ'

ನವದೆಹಲಿ (ಪಿಟಿಐ): 12ನೇ ತರಗತಿಯ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಸಾರ್ವಜನಿಕವಾಗಿ ಲಭ್ಯ ಇರುವುದಾಗಿ ಸಿಬಿಎಸ್‌ಸಿ ಹೇಳಿದ ಬೆನ್ನಲ್ಲೇ, 'ದೊಡ್ಡ ಪ್ರಮಾಣದ ದತ್ತಾಂಶ ಸೋರಿಕೆಯಾಗಿದೆ' ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

'12ನೇ ತರಗತಿಯ ಉತ್ತರ ಪತ್ರಿಕೆಗಳ ಆನ್ ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ) ವ್ಯವಸ್ಥೆಯ ಹೊಣೆ ಹೊತ್ತಿರುವ ಕೋಎಂಪ್ಟ್ ಎಜುಟೆಕ್ ಕಂಪನಿಯ ಅಸಮರ್ಥತೆ ಮತ್ತು ಉದಾಸೀನತೆ ಮತ್ತೊಮ್ಮೆ ಬಹಿರಂಗಗೊಂಡಿದೆ. ಇದರಿಂದ 20 ಲಕ್ಷ ವಿದ್ಯಾರ್ಥಿಗಳ ಗೋಪ್ಯತೆಗೆ ಧಕ್ಕೆಯಾಗಿದೆ' ಎಂದು ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ಸಾರ್ವಜನಿಕವಾಗಿ ಲಭ್ಯವಿರುವ ಉತ್ತರ ಪತ್ರಿಕೆಗಳಲ್ಲಿ ಮಡಚಿರುವುದು ಹಾಗೂ ನೆರಳು ಬಿದ್ದಿರುವುದು ಕಾಣುತ್ತದೆ. ಇವು ಸ್ಕ್ಯಾನಿಂಗ್ ಯಂತ್ರಗಳಿಗಿಂತ ಮೊಬೈಲ್ ಫೋನ್‌ಗಳ ಮೂಲಕ ಮಾಡಿದ ಸ್ಕ್ಯಾನ್‌ಗಳಂತೆ ಕಾಣುತ್ತಿವೆ. ಮೂರನೇ ಬಾರಿಯ ಟೆಂಡರ್ ಪ್ರಸ್ತಾವದಲ್ಲಿ, ರೋಬೋಟಿಕ್ ಸ್ಕ್ಯಾನರ್ ಇರಬೇಕೆಂಬ ಷರತ್ತನ್ನು ಕೈಬಿಡಲಾಗಿತ್ತು. ಹಾಗಿದ್ದರೆ, ಕೋಎಂಪ್ಟ್ ಕಂಪನಿಯು ಯಾವ ರೀತಿಯ ಸ್ಕ್ಯಾನರ್‌ಗಳನ್ನು ಬಳಸಿದೆ? ಈ ಸ್ಕ್ಯಾನ್‌ಗಳು ಇಷ್ಟೊಂದು ಕಳಪೆ ಗುಣಮಟ್ಟದಿಂದ ಕೂಡಿರಲು ಕಾರಣವೇನು' ಎಂದು ಪ್ರಶ್ನಿಸಿದ್ದಾರೆ.

ಬಿಸಿಲ ಬೇಗೆ ಬಗ್ಗೆ ಎಚ್ಚರವಿರಲಿ: ಮೋದಿ ಸಲಹೆ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಬಿಸಿಲ ಬೇಗೆ ಹೆಚ್ಚಾಗಿರುವ ಕಾರಣ, ಜನರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿವಹಿಸಿ, ದೇಹದಲ್ಲಿ ನೀರಿನ ಅಂಶ ಹೆಚ್ಚಾಗಿರುವಂತೆ ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಸಲಹೆ ನೀಡಿದ್ದಾರೆ.

'ಮನದ ಮಾತು' ಬಾನುಲಿ ಕಾರ್ಯಕ್ರಮ ದಲ್ಲಿ ಮಾತನಾಡಿ, 'ಬಿಸಿಲಿನಲ್ಲಿ ಹೊರಗೆ ಹೋಗುವುದಿದ್ದರೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಿ. ಪದೇ ಪದೇ ನೀರು ಕುಡಿಯುತ್ತೀರಿ. ಜತೆಗೆ ಬಿಸಿಲ ಬೇಗೆಗೆ ಸಂಬಂಧಿಸಿದಂತೆ ಆಯಾ ರಾಜ್ಯ ಸರ್ಕಾರ ಗಳು, ಇಲಾಖೆಗಳು ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಿ' ಎಂದೂ ಹೇಳಿದ್ದಾರೆ.

'ವಿದ್ಯಾರ್ಥಿಗಳಿಗೆ ದೇಶದ್ರೋಹಿ ಹಣೆಪಟ್ಟಿ'

ನವದೆಹಲಿ (ಪಿಟಿಐ): 'ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿ ಮರುಮೌಲ್ಯಮಾಪನ ಪ್ರಕ್ರಿಯೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಶ್ನೆ ಕೇಳಿದ ವಿದ್ಯಾರ್ಥಿಗಳಿಗೆ ದೇಶದ್ರೋಹಿ ಹಣೆಪಟ್ಟಿ ಕಟ್ಟಲಾಗಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

12ನೇ ತರಗತಿ ವಿದ್ಯಾರ್ಥಿ ವೇದಾಂತ್ ಮತ್ತು ಅವರ ಸ್ನೇಹಿತರೊಂದಿಗೆ ಚರ್ಚಿಸಿದ ವಿಡಿಯೊವನ್ನು ತಮ್ಮ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ರಾಹುಲ್ ಗಾಂಧಿ, 'ವೇದಾಂತ್ ಮತ್ತು ಅವನ ಸ್ನೇಹಿತರು ಬುದ್ಧಿವಂತ, ಧೈರ್ಯಶಾಲಿ ಯುವ ಭಾರತೀಯರಾಗಿದ್ದು, ಅವರು ಸಿಬಿಎಸ್‌ಇ ಮತ್ತು ನರೇಂದ್ರ ಮೋದಿ ಅವರ ಸರ್ಕಾರಕ್ಕೆ ಸರಳವಾದ ಪ್ರಶ್ನೆಗಳನ್ನು ಕೇಳಿದ್ದರು. ಆದರೆ, ಅವರಿಗೆ ಉತ್ತರಗಳ ಬದಲಿಗೆ ಅವಮಾನಗಳು ಸಿಕ್ಕವು' ಎಂದು ಬರೆದುಕೊಂಡಿದ್ದಾರೆ.

'ವಿದ್ಯಾರ್ಥಿಗಳು ಉಜ್ವಲ ಮತ್ತು ಸುರಕ್ಷಿತ ಭವಿಷ್ಯಕ್ಕೆ ಅರ್ಹರು. ಅವರು ಅದನ್ನು ಪಡೆಯುವಂತೆ ನಾವು ಖಚಿತ ಪಡಿಸಿಕೊಳ್ಳುತ್ತೇವೆ' ಎಂದು ಹೇಳಿದ್ದಾರೆ.

'ವೇದಾಂತ್ ಮತ್ತು ಇತರ ವಿದ್ಯಾರ್ಥಿಗಳು ತಮ್ಮ ಸಮಸ್ಯೆ ಹಾಗೂ ನ್ಯಾಯಸಮ್ಮತ ಕಾಳಜಿ ಬಗ್ಗೆ ಧ್ವನಿ ಎತ್ತಿದ ಕಾರಣಕ್ಕಾಗಿ, ಅವರಿಗೆ 'ಪಾಕಿಸ್ತಾನಿಗಳು' ಹಾಗೂ 'ರಹಸ್ಯ ಏಜೆಂಟರು' ಎಂಬ ಹಣೆಪಟ್ಟಿ ಕಟ್ಟಲಾಗಿದೆ' ಎಂದು ವ್ಯಂಗ್ಯವಾಡಿದ್ದಾರೆ.

'ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳನ್ನು ಮಾತ್ರ ಕೇಳುತ್ತಿದ್ದಾರಷ್ಟೆ. ಆದರೆ, ಈಗ ಹಠಾತ್ತನೆ ಅವರನ್ನು ದೇಶದ್ರೋಹಿಗಳೆಂದು ಕರೆಯಲಾಗುತ್ತಿದೆ. ಸಮಸ್ಯೆಯನ್ನು ಪರಿಹರಿಸಬೇಕಾದರೆ ಮೊದಲು ಸಮಸ್ಯೆಯನ್ನು ಒಪ್ಪಿಕೊಳ್ಳಬೇಕು. ಆದರೆ, ಸಿಬಿಎಸ್‌ಇ ಹಾಗೂ ಕೇಂದ್ರ ಸರ್ಕಾರವು ಸಮಸ್ಯೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ. ಬಡ ಮಕ್ಕಳನ್ನು ದೂಷಿಸುತ್ತಾ 'ನೀವು ಗೂಢಚಾರರು, ಭಯೋತ್ಪಾದಕರು' ಎಂದು ಆರೋಪಿಸಲಾಗುತ್ತಿದೆ' ಎಂದು ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

'ನಿಮ್ಮನ್ನೂ ಭಯೋತ್ಪಾದಕರು ಎಂದು ಕರೆಯಲಾಗಿದೆಯೇ ಹೇಳಿ' ಎಂದು ರಾಹುಲ್ ಗಾಂಧಿ ಅವರು ವೇದಾಂತ್ ಮತ್ತು ಇತರ ವಿದ್ಯಾರ್ಥಿಗಳನ್ನು ಪ್ರಶ್ನಿಸಿದ್ದಾರೆ. ಅಲ್ಲದೆ, ಸಂವಾದದ ವೇಳೆ, ಛಾಯಾಗ್ರಾಹಕನಿಗೆ ನಗುತ್ತಾ, 'ಅಣ್ಣಾ, ಈ ಭಯೋತ್ಪಾದಕರ ಮುಖಗಳನ್ನು ತೋರಿಸು' ಎಂದು ಹೇಳಿರುವ ದೃಶ್ಯ ವಿಡಿಯೊದಲ್ಲಿದೆ.

'ಮರುಮೌಲ್ಯಮಾಪನ ಪ್ರಕ್ರಿಯೆಯ ಅಡಿಯಲ್ಲಿ ಸಿಬಿಎಸ್‌ಇ ಅಪ್‌ಲೋಡ್ ಮಾಡಿದ ಭೌತಶಾಸ್ತ್ರದ ಉತ್ತರ ಪತ್ರಿಕೆ ನನ್ನದಲ್ಲ' ಎಂದು 12ನೇ ತರಗತಿ ವಿದ್ಯಾರ್ಥಿ ವೇದಾಂತ್ ಇತ್ತೀಚೆಗೆ 'ಎಕ್ಸ್'ನ ಪೋಸ್ಟ್‌ನಲ್ಲಿ ಆರೋಪಿಸಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿತ್ತು. ಇದರ ಬೆನ್ನಲ್ಲೇ, ಇನ್ನೂ ಹಲವಾರು ವಿದ್ಯಾರ್ಥಿಗಳು ಇದೇ ರೀತಿಯ ದೂರುಗಳೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಧ್ವನಿ ಎತ್ತಿದ್ದರು.

ಸಿಬಿಎಸ್‌ಇ 12ನೇ ತರಗತಿ ವಿದ್ಯಾರ್ಥಿ ವೇದಾಂತ್ ಮತ್ತು ಅವರ ಸ್ನೇಹಿತರೊಂದಿಗೆ ರಾಹುಲ್ ಗಾಂಧಿ ಚರ್ಚಿಸಿದರು —ಪಿಟಿಐ ಚಿತ್ರ

'ಮೋದಿಗೆ ಮಾವಿನ ಹಣ್ಣಿನ ಚಿಂತೆ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಮನದ ಮಾತು' ಮಾಸಿಕ ಬಾನುಲಿ ಕಾರ್ಯಕ್ರಮದಲ್ಲಿ ಮಾವಿನ ಹಣ್ಣಿನ ಬಗ್ಗೆ ಮಾತನಾಡಲು ಸಮಯವಿದೆ. ಆದರೆ, ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಯಲ್ಲಿ 18.5 ಲಕ್ಷ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೊಬೈಲ್ ಫೋನ್‌ಗಳಿಂದ ಸ್ಕ್ಯಾನ್ ಮಾಡಿದ ಕುರಿತು ಮಾತನಾಡಲು ಸಮಯವಿರಲಿಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಭಾನುವಾರ ಬೆಳಿಗ್ಗೆ ಮೋದಿ ಅವರು 'ಮನದ ಮಾತು' ಕಾರ್ಯಕ್ರಮದಲ್ಲಿ ಮಾವಿನ ಹಣ್ಣುಗಳ ಬಗ್ಗೆ ಉಲ್ಲೇಖಿಸಿ, 'ಬೇಸಿಗೆಯಲ್ಲಿ ಮಾವಿನಹಣ್ಣಿನ ಬಗ್ಗೆ ಮಾತನಾಡದ ಮನೆಯೇ ಇಲ್ಲ. ಪ್ರತಿಯೊಂದು ಪ್ರದೇಶದಲ್ಲಿ ಮಾವು ಬೆಳೆಯುತ್ತಾರೆ ಹಾಗೂ ತಿನ್ನುತ್ತಾರೆ' ಎಂದು ಹೇಳಿದ್ದರು.

ಜಮ್ಮು ಮತ್ತು ಕಾಶ್ಮೀರ: ರಾಷ್ಟ್ರೀಯ ಭದ್ರತೆಗೆ ಕಂಟಕವಾಗಿರುವ 'ಒಜಿಡಬ್ಲ್ಯು'

ರಾಜಕೀಯ ನೆಲೆ: ಐಎಸ್‌ಐ ಕಾರ್ಯತಂತ್ರ

ಶ್ರೀನಗರ (ಪಿಟಿಐ): 'ಭಾರತದಲ್ಲಿನ ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಸೇರಿಕೊಂಡರೆ ಬಿಗಿಯಾದ ಭದ್ರತಾ ಪರಿಶೀಲನೆ ಮತ್ತು ಭಯೋತ್ಪಾದಕ ದಾಳಿಗೆ ಸಂಬಂಧಿಸಿದ ತನಿಖೆಯಿಂದ ತಪ್ಪಿಸಿಕೊಳ್ಳಬಹುದು, ಈ ನಿಟ್ಟಿನಲ್ಲಿ ಗಮನ ಹರಿಸಿ' ಎಂದು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ, ಜಮ್ಮು–ಕಾಶ್ಮೀರದಲ್ಲಿನ ತನ್ನ ಜಾಲದ ಸದಸ್ಯರಿಗೆ ಸೂಚಿಸಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನೇರವಾಗಿ ಶಸ್ತ್ರಾಸ್ತ್ರ ದಾಳಿ, ಹಿಂಸಾಚಾರ ದಲ್ಲಿ ಭಾಗಿಯಾಗದಿದ್ದರೂ, ರಹಸ್ಯವಾಗಿ ದ್ದುಕೊಂಡು ಭಯೋತ್ಪಾದಕ ಸಂಘಟನೆ ಗಳಿಗೆ ಹಣಕಾಸಿನ ನೆರವು, ಆಹಾರ, ವಸತಿ, ಸಾರಿಗೆ, ಗುಪ್ತಚರ ಮಾಹಿತಿ ಒದಗಿಸುವ ವ್ಯಕ್ತಿಗಳಿಗೆ (ಒಜಿಡಬ್ಲ್ಯು) ರಾಜಕೀಯ ಮುಖ್ಯವಾಹಿನಿ ಸೇರಿಕೊಳ್ಳು ವಂತೆ ಐಎಸ್‌ಐ ಸೂಚನೆ ರವಾನಿಸಿದೆ.

'ಭಯೋತ್ಪಾದನೆಗೆ ಹಣಕಾಸಿನ ಹರಿವು ಮತ್ತು ಜಾಗತಿಕ ಮಟ್ಟದಲ್ಲಿ ಹಣ ಅಕ್ರಮ ವಹಿವಾಟಿನ ಮೇಲೆ ಕಣ್ಣಿರಿಸಿರುವ 'ಎಫ್‌ಎಟಿಎಫ್' ಸಂಸ್ಥೆ ಮತ್ತು ಕೇಂದ್ರ ಭದ್ರತಾ ಸಂಸ್ಥೆಗಳು ಐಎಸ್‌ಐ ಮೇಲೆ ನಿರಂತರ ನಿಗಾ ವಹಿಸಿರುವುದರಿಂದ ಐಎಸ್‌ಐ ತನ್ನ ಕಾರ್ಯತಂತ್ರವನ್ನು ಬದಲಿಸಿಕೊಂಡಿದೆ.

ಇತ್ತೀಚೆಗೆ ಶ್ರೀನಗರ ಪೊಲೀಸರು ಬಂಧಿಸಿದ ಐಎಸ್‌ಐ ಜಾಲದ ಸದಸ್ಯನೊಬ್ಬನನ್ನು ಕೇಂದ್ರ ಭದ್ರತಾ ಸಂಸ್ಥೆಗಳು ವಿಚಾರಣೆಗೊಳಪಡಿಸಿದಾಗ, ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಕಷ್ಟು 'ಒಜಿಡಬ್ಲ್ಯು'ಗಳು ಈಗಾಗಲೇ ರಾಜಕೀಯ ಪಕ್ಷಗಳನ್ನು ಸೇರಿಕೊಂಡಿರುವ ಸಂಗತಿ ಬಹಿರಂಗಗೊಂಡಿದೆ.

'ಒಜಿಡಬ್ಲ್ಯು'ಗಳಲ್ಲಿ ಕೆಲವರು ಈಗಾಗಲೇ ರಾಜಕೀಯ ಪಕ್ಷಗಳ ಭಾಗ ಆಗಿರುವುದರಿಂದ ಅವರನ್ನು ಸುಲಭವಾಗಿ ತನಿಖೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ' ಎಂದು ಪೊಲೀಸರು ತಿಳಿಸಿದರು..

'ಪಾಕ್‌ನಿಂದ ರಹಸ್ಯ ನೆರವು'

ಅಂತರರಾಷ್ಟ್ರೀಯ ದೂರಸಂಪರ್ಕ ನಿಯಮಗಳನ್ನು ಉಲ್ಲಂಘಿಸಿ ಪಾಕಿಸ್ತಾನವು ದೇಶದ ಗಡಿಭಾಗದಲ್ಲಿ ಭಯೋತ್ಪಾದಕ ಸಂಘಟನೆಗಳಿಗೆ ರಹಸ್ಯವಾಗಿ ಸಂವಹನಕ್ಕೆ ತರಂಗಾಂತರ ನೆರವು ಒದಗಿಸುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್‌ಒಸಿ ಮತ್ತು ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ವಲಯದಲ್ಲಿ ತೀವ್ರ ನಿಗಾ ವಹಿಸಲಾಗಿದೆ.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಕ್ವಾರ್ಟರ್ ಫೈನಲ್‌ಗೆ ಅಲೆಕ್ಸಾಂಡರ್ ಜ್ವರೇವ್

ಶ್ವಾಂಟೆಕ್‌ಗೆ ಕೊಸ್ತ್ಯುಕ್ ಆಘಾತ

ಪ್ಯಾರಿಸ್ (ಎಎಫ್‌ಪಿ): ನಾಲ್ಕು ಬಾರಿಯ ಚಾಂಪಿಯನ್ ಇಗಾ ಶ್ವಾಂಟೆಕ್ ಅವರಿಗೆ ಭಾನುವಾರ ಉಕ್ರೇನ್‌ನ ಮಾರ್ತಾ ಕೊಸ್ತ್ಯುಕ್ ಆಘಾತ ನೀಡಿದರು. 25ನೇ ಜನ್ಮದಿನ ಸಂಭ್ರಮದಲ್ಲಿದ್ದ ಶ್ವಾಂಟೆಕ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

15ನೇ ಶ್ರೇಯಾಂಕದ ಕೊಸ್ತ್ಯುಕ್ 7-5 6-1ರಿಂದ ಮೂರನೇ ಶ್ರೇಯಾಂಕದ ಶ್ವಾಂಟೆಕ್ ಅವರನ್ನು ಹಿಮ್ಮೆಟ್ಟಿಸಿ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ಏಳನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಪ್ರಯತ್ನದಲ್ಲಿದ್ದ ಪೋಲೆಂಡ್‌ನ ಆಟಗಾರ್ತಿ ನಿರಾಸೆ ಅನುಭವಿಸಿದರು.

ಏಪ್ರಿಲ್‌ನಲ್ಲಿ ಮ್ಯಾಡ್ರಿಡ್ ಓಪನ್ ಪ್ರಶಸ್ತಿ ಗೆದ್ದಿದ್ದ 23 ವರ್ಷದ ಕೊಸ್ತ್ಯುಕ್ ಅವರು ಮುಂದಿನ ಸುತ್ತಿನಲ್ಲಿ ತಮ್ಮದೇ ದೇಶದ ಎಲಿನಾ ಸ್ವಿಟೋಲಿನಾ ಅವರನ್ನು ಎದುರಿಸಲಿದ್ದಾರೆ. ಏಳನೇ ಶ್ರೇಯಾಂಕದ ಎಲಿನಾ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 4–6, 6–4, 6–0ಯಿಂದ 11ನೇ ಶ್ರೇಯಾಂಕದ ಬೆಲಿಂಡಾ ಬೆನ್ಸಿಕ್ (ಸ್ವಿಟ್ಜರ್ಲೆಂಡ್) ಅವರನ್ನು ಸೋಲಿಸಿದರು.

ರೊಮೇನಿಯಾದ ಸೊರಾನಾ ಸಿರ್ಸ್ಟಿಯಾ 6-3, 7-6 (7/4)ರಿಂದ ಚೀನಾದ ವಾಂಗ್ ಕ್ಸಿಯು ಅವರನ್ನು ಮಣಿಸಿದರು. 36 ವರ್ಷದ ಸೊರಾನಾ 2009ರ ಬಳಿಕ ಇಲ್ಲಿ ಎರಡನೇ ಬಾರಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಜ್ವರೇವ್ ಮುನ್ನಡೆ: ಪ್ರಶಸ್ತಿಯ ಫೆವರೀಟ್‌ಗಳಲ್ಲಿ ಒಬ್ಬರಾದ ಜರ್ಮನಿಯ ಜ್ವರೇವ್ ನಾಲ್ಕನೇ ಸುತ್ತಿನಲ್ಲಿ 7–6(7–3), 6–4, 6–1ರಿಂದ ನೆದರ್ಲೆಂಡ್ಸ್‌ನ ಜೆಸ್ಪರ್ ಡಿ ಜಾಂಗ್ ಅವರನ್ನು ಮಣಿಸಿದರು. 2024ರ ರನ್ನರ್ಸ್ ಅಪ್ ಆಗಿರುವ ಜ್ವರೇವ್ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಅವರಿಗೆ ಝೆಕ್ ರಿಪಬ್ಲಿಕ್‌ನ ಥಾಮಸ್ ಮಾಚಾಕ್ ಮುಂದಿನ ಎದುರಾಳಿಯಾಗಿದ್ದಾರೆ. ಥಾಮಸ್ 6–4, 6–4, 6–3ರಿಂದ ಬೆಲ್ಜಿಯಂನ ಜಿಜೌ ಬರ್ಗ್ಸ್ ಅವರನ್ನು ಪರಾಭವಗೊಳಿಸಿದರು.

ಸ್ಪೇನ್‌ನ ಯುವ ತಾರೆ ರಫೆಲ್ ಜೋಡರ್ ಅವರೂ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಮೊದಲೆರಡು ಸೆಟ್‌ಗಳ ಹಿನ್ನಡೆಯಿಂದ ಪುನರಾಗಮನ ಮಾಡಿದ 19 ವರ್ಷದ ಜೋಡರ್ 4-6, 4-6, 6-1, 6-2, 6-2ರ ಐದು ಸೆಟ್‌ಗಳ ಹಣಾಹಣಿಯಲ್ಲಿ ಸ್ವದೇಶದ ಪ್ಯಾಬ್ಲೊ ಕ್ಯಾರೆನೊ ಬಸ್ತಾ ಅವರನ್ನು ಮಣಿಸಿದರು.

27ನೇ ಶ್ರೇಯಾಂಕದ ರಫೆಲ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೊದಲ ಬಾರಿ ಎಂಟರ ಘಟ್ಟ ತಲುಪಿದರು. ಕಳೆದ ವರ್ಷ ಇದೇ ಸಮಯದಲ್ಲಿ ವಿಶ್ವ ಕ್ರಮಾಂಕದಲ್ಲಿ 707ನೇ ಸ್ಥಾನದಲ್ಲಿದ್ದ ಈ ಆಟಗಾರ ಆಸ್ಟ್ರೇಲಿಯಾ ಓಪನ್‌ನಲ್ಲಿ ಎರಡನೇ ಸುತ್ತು ತಲುಪಿದ್ದರು.

ನಾಲ್ಕನೇ ಶ್ರೇಯಾಂಕದ ಫೆಲಿಕ್ಸ್ ಆಗರ್ ಅಲಿಸಿಮೆ 5-7, 6-1, 7-6 (7/4), 7-6ರಿಂದ ಅಮೆರಿಕದ ಬ್ರಾಂಡನ್ ನಕಾಶಿಮಾ ಅವರನ್ನು ಸೋಲಿಸಿದರು. ಕೆನಡಾದ ಫೆಲಿಕ್ಸ್ ನಾಲ್ಕನೇ ಸುತ್ತಿನಲ್ಲಿ ಚಿಲಿ ಆಟಗಾರ ಅಲೆಕ್ಸಾಂಡ್ರೊ ಟ್ಯಾಬಿಲೊ ಅವರನ್ನು ಎದುರಿಸುವರು.



ಉಕ್ರೇನ್‌ನ ಮಾರ್ತಾ ಕೊಸ್ತ್ಯುಕ್ (ಎಡ). ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಎಎಫ್‌ಪಿ ಚಿತ್ರಗಳು

ಪ್ಯಾರಾ ಅಥ್ಲೀಟ್ ಚಿರಾಗ್ ತ್ಯಾಗಿ ಹತ್ಯೆ

ಗಾಜಿಯಾಬಾದ್ (ಪಿಟಿಐ): ರಾಷ್ಟ್ರೀಯ ಪ್ಯಾರಾ ಅಥ್ಲೀಟ್, ಉತ್ತರಪ್ರದೇಶದ ಚಿರಾಗ್ ತ್ಯಾಗಿ ಅವರನ್ನು ಮತ್ತೊಬ್ಬ ಪ್ಯಾರಾ ಅಥ್ಲೀಟ್ ಯಶ್ ಖಾಟಿಕ್ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಚಿರಾಗ್ ವಿರುದ್ಧದ ಸೇಡಿನಿಂದಾಗಿ ಈ ಕೃತ್ಯ ಎಸಗಿದ್ದಾಗಿ ಬಂಧನದ ನಂತರ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ.

ಚಿರಾಗ್ ತ್ಯಾಗಿ

ಇಲ್ಲಿನ ಸಾಯಿ ಉಪವನ ಬಳಿ ಚಿರಾಗ್ ಅವರ ಮೃತದೇಹ ಶನಿವಾರ ಪತ್ತೆಯಾಗಿತ್ತು.

ಪುಣೆಯಲ್ಲಿ ತರಬೇತಿ ಪಡೆಯುತ್ತಿದ್ದ ಚಿರಾಗ್ ಅವರು ಶುಕ್ರವಾರ ದೆಹಲಿಗೆ ತೆರಳಿದ್ದರು. ಅಲ್ಲಿಂದ ಶನಿವಾರ ಮಧ್ಯಾಹ್ನ ಮನೆಗೆ ಮರಳುವುದಾಗಿ ಪೋಷಕರಿಗೆ ತಿಳಿಸಿದ್ದರು. ಆದರೆ, ಆ ನಂತರ ಅವರ ಫೋನ್ ಸಂಪರ್ಕಕ್ಕೆ ಸಿಕ್ಕಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

'ಚಿರಾಗ್ ಅವರನ್ನು ಗುಂಡಿಕ್ಕಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ದಾಖಲೆಗಳ ಪರಿಶೀಲನೆ ವಿಚಾರವಾಗಿ ಚಿರಾಗ್ ಅವರು ಯಶ್ ವಿರುದ್ಧ ದೂರು ನೀಡಿದ್ದರು. ಹೀಗಾಗಿ, ಯಶ್ ಅವರ ಅರ್ಹತೆಯನ್ನು ರದ್ದುಗೊಳಿಸಲಾಗಿತ್ತು. ಇದರಿಂದ ಕೋಪಗೊಂಡಿದ್ದ ಯಶ್ ಈ ಕೃತ್ಯ ಎಸಗಿದ್ದಾರೆ' ಎಂದು ಗಾಜಿಯಾಬಾದ್ ನಗರ ಉಪಪೊಲೀಸ್ ಆಯುಕ್ತ ಧವಳ್ ಜೈಸ್ವಾಲ್ ಭಾನುವಾರ ತಿಳಿಸಿದರು.

ಘಟನೆಯ ಸ್ಥಳದಿಂದ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಕೃತ್ಯಕ್ಕೆ ಬಳಸಲಾದ ಪಿಸ್ತೂಲ್ ಪತ್ತೆಗೆ ಪೊಲೀಸ್ ತಂಡವನ್ನು ನಿಯೋಜಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

24 ವರ್ಷ ವಯಸ್ಸಿನ ತ್ಯಾಗಿ ಅವರು ಬೆಂಗಳೂರಿನಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಕೂಟದಲ್ಲಿ ಎರಡು ಚಿನ್ನದ ಪದಕ ಗೆದ್ದಿದ್ದರು. ಜಪಾನ್‌ನಲ್ಲಿ ಅಕ್ಟೋಬರ್ 18ರಿಂದ 24ರ ವರೆಗೆ ನಡೆಯಲಿರುವ ಏಷ್ಯನ್ ಪ್ಯಾರಾ ಅಥ್ಲೆಟಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದರು.

ಮಹಿಳಾ ಹಾಕಿ: ಭಾರತ–ಆಸ್ಟ್ರೇಲಿಯಾ ಸರಣಿ ಸಮಬಲ

ಪರ್ತ್ (ಪಿಟಿಐ): ಆಸ್ಟ್ರೇಲಿಯಾ ಮಹಿಳೆಯರ ಹಾಕಿ ತಂಡವು ಶನಿವಾರ 3–2 ಗೋಲುಗಳಿಂದ ಪ್ರವಾಸಿ ಭಾರತ ಮಹಿಳಾ ತಂಡವನ್ನು ಮಣಿಸಿತು. ಅದರೊಂದಿಗೆ, ನಾಲ್ಕು ಪಂದ್ಯಗಳ ಈ ಸ್ನೇಹಪರ ಸರಣಿಯಲ್ಲಿ 2–2ರ ಸಮಬಲ ಸಾಧಿಸಿತು.

ಸಲೀಮಾ ಟೆಟೆ ಪಡೆಯು ಮೊದಲಾರ್ಧದಲ್ಲಿ 2–0ಯಿಂದ ಮುನ್ನಡೆ ಗಳಿಸಿದ್ದರೂ, ಗೆಲುವು ಕೈಚೆಲ್ಲಿತು.

ಅನುಭವಿ ಆಟಗಾರ್ತಿ ನವನೀತ್ ಕೌರ್ (2ನೇ ನಿ.) ಹಾಗೂ ದೀಪಿಕಾ ಸೊರೆಂಗ್ (23ನೇ ನಿ.) ಅವರು ತಲಾ ಒಂದು ಗೋಲು ಗಳಿಸಿ ಭಾರತ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ದ್ವಿತೀಯಾರ್ಧದಲ್ಲಿ ಪುಟಿದೆದ್ದ ಆಸ್ಟ್ರೇಲಿಯಾ ತಂಡವು ಪಂದ್ಯವನ್ನು ತನ್ನದಾಗಿಸಿಕೊಂಡಿತು. ಆತಿಥೇಯ ತಂಡದ ಅಬ್ಬಿ ವಿಲ್ಸನ್ (42ನೇ ನಿ.), ಒಲಿವಿಯಾ ಡೌನೆಸ್ (44ನೇ ನಿ.) ಹಾಗೂ ಕೋರ್ಟ್ನಿ ಶಾನೆಲ್ (58ನೇ ನಿ.) ತಲಾ ಒಂದು ಗೋಲು ಹೊಡೆದರು.

ನ್ಯೂಜಿಲೆಂಡ್‌ನಲ್ಲಿ ಜೂನ್ 15ರಿಂದ 21ರ ವರೆಗೆ ನಡೆಯಲಿರುವ ನೇಷನ್ಸ್ ಕಪ್ ಹಾಕಿ ಟೂರ್ನಿಯ ಸಿದ್ಧತೆಯ ಭಾಗವಾಗಿ ಭಾರತ ತಂಡವು ಈ ಪ್ರವಾಸ ಕೈಗೊಂಡಿತ್ತು.

ನವನೀತ್ ಕೌರ್

ರಾಯಲ್ ಚಾಲೆಂಜರ್ಸ್‌ಗೆ ವಿರಾಟ್ ವಿಜಯ

ಗೆಲುವಿನಲ್ಲಿ ಮಿಂಚಿದ ಕಿಂಗ್ ಕೊಹ್ಲಿ • ಹೇಝಲ್‌ವುಡ್, ರಸಿಕ್ ಅಮೋಘ ದಾಳಿ • ಗುಜರಾತ್ ಟೈಟನ್ಸ್ ರನ್ನರ್ಸ್ ಅಪ್

ಅಹಮದಾಬಾದ್: ಸಬರಮತಿ ನದಿಯ ದಡದ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿಯ 'ಹುಣ್ಣಿಮೆಯ ಚಂದ್ರ'ನಂತೆ ವಿರಾಟ್ ಕೊಹ್ಲಿ ಕಂಗೊಳಿಸಿದರು. ತಮ್ಮ ಅಭಿಮಾನಿಗಳ ಮನಕ್ಕೆ ಜಯದ ತಂಪೆರೆದರು.

ಅವರ ಅಜೇಯ ಅರ್ಧಶತಕ (ಔಟಾಗದೇ 75;42ಎ) ನಡೆದ 19ನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ ರಜತ್ ಪಾಟೀದಾರ್ ಬಳಗವು ಐದು ವಿಕೆಟ್‌ಗಳಿಂದ ಗುಜರಾತ್ ಟೈಟನ್ಸ್ ತಂಡವನ್ನು ಮಣಿಸಿತು. ಇದರೊಂದಿಗೆ ಸತತ ಎರಡನೇ ಬಾರಿ ಪ್ರಶಸ್ತಿಯನ್ನು ಗೆದ್ದುಕೊಂಡ ಮೂರನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಟಾಸ್ ಗೆದ್ದ ಪಾಟೀದಾರ್ ಫೀಲ್ಡಿಂಗ್ ಆಯ್ದುಕೊಂಡರು. ನಾಯಕನ ನಿರ್ಧಾರವನ್ನು ಸಮರ್ಥಿಸುವಂತೆ ಆರ್‌ಸಿಬಿ ಬೌಲರ್‌ಗಳು ಪರಿಣಾಮಕಾರಿ ದಾಳಿ ಸಂಘಟಿಸಿದರು. ವೇಗಿ ಜೋಶ್ ಹೇಝಲ್‌ವುಡ್ (37ಕ್ಕೆ2) ಮತ್ತು ರಸಿಕ್ ಸಲಾಮ್ ದಾರ್ (27ಕ್ಕೆ3) ಅವರ ದಾಳಿ ಮತ್ತು ಫೀಲ್ಡರ್‌ಗಳ ಚುರುಕುತನದಿಂದಾಗಿ ಗುಜರಾತ್ ತಂಡವನ್ನು 8 ವಿಕೆಟ್‌ಗೆ 155 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತು. ವಾಷಿಂಗ್ಟನ್ ಸುಂದರ್ (ಔಟಾಗದೇ 50) ಅವರೊಬ್ಬರೇ ದಿಟ್ಟತನ ತೋರಿದರು.

ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡಕ್ಕೆ ವೆಂಕಟೇಶ ಅಯ್ಯರ್ (32;16ಎ) ಮತ್ತು ವಿರಾಟ್ ಕೊಹ್ಲಿ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ ಬಿರುಸಿನ 62 (27ಎ) ರನ್ ಸೇರಿಸಿ ಗೆಲುವಿಗೆ ಮುನ್ನುಡಿ ಬರೆದರು. ಆದರೆ, ಉತ್ತಮ ಲಯದಲ್ಲಿದ್ದ ವೆಂಕಟೇಶ್ ಅಯ್ಯರ್ ಅವರು ಮೊಹಮ್ಮದ್ ಸಿರಾಜ್ ಓವರ್‌ನಲ್ಲಿ ಕಗಿಸೊ ರಬಾಡ ಅವರಿಗೆ ಕ್ಯಾಚಿತ್ತು ನಿರ್ಗಮಿಸಿದರು. ನಂತರ ಬಂದ ಕನ್ನಡಿಗ ದೇವದತ್ತ ಪಡಿಕ್ಕಲ್ (1) ನಿರಾಸೆ ಮೂಡಿಸಿದರು. ರಬಾಡ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಮುಂದಾದ ಅವರು ಬೌಂಡರಿ ಲೈನ್‌ನಲ್ಲಿ ಅರ್ಷದ್ ಖಾನ್ ಅವರಿಗೆ ಕ್ಯಾಚಿತ್ತರು.

ಅನುಭವಿ ಸ್ಪಿನ್ನರ್ ರಶೀದ್ ಖಾನ್ 9ನೇ ಓವರ್‌ನಲ್ಲಿ ಪಾಟೀದಾರ್ (15) ಮತ್ತು ಕೃಣಾಲ್ ಪಾಂಡ್ಯ ಅವರ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು. 91 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡ ಆರ್‌ಸಿಬಿ ಪಾಳಯದಲ್ಲಿ ಆತಂಕ ಮನೆಮಾಡಿತು. ಆದರೆ, ಒಂದೆಡೆ ವಿಕೆಟ್ ಉರುಳುತ್ತಿದ್ದರೂ ಕೊಹ್ಲಿ ಮಾತ್ರ ಜವಾಬ್ದಾರಿಯುತವಾಗಿ ಆಡಿದರು. ಅವರು 25 ಎಸೆತಗಳಲ್ಲಿ 50ರ ಗಡಿ ದಾಟಿದರು. ಇದು ಐಪಿಎಲ್‌ನಲ್ಲಿ ಅವರ ಅತಿ ವೇಗದ ಅರ್ಧಶತಕವಾಗಿದೆ. ಅವರ ಇನಿಂಗ್ಸ್‌ನಲ್ಲಿ ಒಂಬತ್ತು ಬೌಂಡರಿ ಮತ್ತು ಮೂರು ಸಿಕ್ಸರ್ ಒಳಗೊಂಡಿದ್ದವು.

ವಿರಾಟ್ ಮತ್ತು ಟಿಮ್ ಡೇವಿಡ್ (24;17ಎ) ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 41 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ಟಿಮ್ ಡೇವಿಡ್ ಔಟಾದ ಬಳಿಕ ವಿರಾಟ್ ಅವರನ್ನು ಸೇರಿಕೊಂಡ ಜಿತೇಶ್ ಶರ್ಮಾ (ಔಟಾಗದೇ 11) ತಂಡವನ್ನು ಗೆಲುವಿನ ದಡ ಸೇರಿಸಿದರು. ಅರ್ಷದ್ ಖಾನ್ ಓವರ್‌ನಲ್ಲಿ ಕೊಹ್ಲಿ ಗೆಲುವಿನ ಸಿಕ್ಸರ್ ಬಾರಿಸಿದರು. ತಂಡವು 12 ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 161 ರನ್ ಗಳಿಸಿ ಸಂಭ್ರಮಿಸಿತು. ನಾಯಕ ರಜತ್ ಮತ್ತು ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ಅವರ ಜನ್ಮದಿನಕ್ಕೆ (ಜೂನ್ 1) ತಂಡವು ಗೆಲುವಿನ ಉಡುಗೊರೆ ನೀಡಿತು.

ಬೌಲರ್‌ಗಳ ಬಿರುಗಾಳಿ: ಇದಕ್ಕೂ ಮೊದಲು ಆರ್‌ಸಿಬಿ ಬೌಲಿಂಗ್ ಪಡೆಯದ್ದೇ ಪಾರುಪತ್ಯ ನಡೆಯಿತು. ಕೆಂಪು ಮತ್ತು ಕಪ್ಪು ಮಣ್ಣಿನ ಮಿಶ್ರಣ ಇರುವ ಕ್ರೀಡಾಂಗಣದ ಪಿಚ್ ಸಂಖ್ಯೆ 6ರಲ್ಲಿ ನಡೆದ ಪಂದ್ಯದಲ್ಲಿ ರಜತ್ ಪಾಟೀದಾರ್ ಟಾಸ್ ಗೆದ್ದು ತೆಗೆದುಕೊಂಡ ನಿರ್ಧಾರವು ಫಲಪ್ರದವಾಯಿತು. ಆರ್‌ಸಿಬಿ ಬೌಲರ್‌ಗಳು ನಿಖರ ಲೆಂಗ್ತ್‌ನಲ್ಲಿ ಬೌಲಿಂಗ್ ಮಾಡಿದರು.

ಟೈಟನ್ಸ್ ಆರಂಭಿಕ ಜೋಡಿ ಶುಭಮನ್ ಗಿಲ್ (10) ಮತ್ತು ಬಿ. ಸಾಯಿ ಸುದರ್ಶನ್ (12) ಅವರು ವಿಫಲರಾಗಿದ್ದು ತಂಡದ ಸೋಲಿಗೆ ಮುನ್ನುಡಿಯಾಯಿತು. ಇಬ್ಬರೂ ಬ್ಯಾಟರ್‌ಗಳು ಪ್ರಸಕ್ತ ಟೂರ್ನಿಯಲ್ಲಿ ತಲಾ 700ಕ್ಕಿಂತ ಹೆಚ್ಚು ರನ್ ಗಳಿಸಿದ್ದರು. ಜೋಶ್ ಬೌಲಿಂಗ್‌ನಲ್ಲಿ ಗಿಲ್ ಹೊಡೆದ ಚೆಂಡನ್ನು ಮಿಡ್ ಆಫ್‌ನಲ್ಲಿ ಸುಲಭವಾಗಿ ಕ್ಯಾಚ್ ಮಾಡಿದ ರಜತ್ ಸಂಭ್ರಮಿಸಿದರು.

ನಂತರದ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ ಎಸೆತಕ್ಕೆ ಬೌಂಡರಿಯತ್ತ ನಿರ್ದೇಶಿಸುವ ಸಾಯಿ ಸುದರ್ಶನ್ ಪ್ರಯತ್ನ ಕೈಕೊಟ್ಟಿತು. ಬ್ಯಾಟ್‌ಗೆ ಬಡಿದು ಗಾಳಿಯಲ್ಲಿ ಎತ್ತರಕ್ಕೆ ಚಿಮ್ಮಿದ ಚೆಂಡನ್ನು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಬೆನ್ನುಹತ್ತಿ ಓಡಿದರು. ಪವರ್‌ಪ್ಲೇ ಹಂತದಲ್ಲಿ ಕೇವಲ 45 ರನ್‌ಗಳು ಖಾತೆ ಸೇರಿದವು.

ತಂಡದ ಉಳಿದ ಬ್ಯಾಟರ್‌ಗಳಲ್ಲಿ ದೊಡ್ಡ ಇನಿಂಗ್ಸ್ ಕಟ್ಟುವ ಮತ್ತು ರನ್ ಗಳಿಸುವ ಕಿಚ್ಚು ಕಾಣಿಸಲಿಲ್ಲ. ಜೋಸ್ ಬಟ್ಲರ್ (19 ರನ್) ಲಯಕ್ಕೆ ಮರಳುವ ಪ್ರಯತ್ನ ಫಲಿಸಲಿಲ್ಲ. ಸ್ಪಿನ್ನರ್ ಕೃಣಾಲ್ ಪಾಂಡ್ಯ ಬೌಲಿಂಗ್‌ನಲ್ಲಿ ಮುನ್ನುಗ್ಗಿ ಹೊಡೆಯುವ ಪ್ರಯತ್ನದಲ್ಲಿ ಬಟ್ಲರ್ ವಿಫಲರಾದರು. ಜೋಶ್ ಮತ್ತು ಭುವಿ ಕೊಟ್ಟ ಉತ್ತಮ ಆರಂಭವು ವ್ಯರ್ಥವಾಗದಂತೆ ರಸಿಕ್ ಸಲಾಮ್ ದಾರ್ ನೋಡಿಕೊಂಡರು. ಅವರು ನಿಶಾಂತ್ ಸಿಂಧು, ರಾಹುಲ್ ತೆವಾಟಿಯಾ ಹಾಗೂ ರಶೀದ್ ಖಾನ್ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಐಪಿಎಲ್: ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
2008	ರಾಜಸ್ಥಾನ ರಾಯಲ್ಸ್	ಚೆನ್ನೈ ಸೂಪರ್ ಕಿಂಗ್ಸ್
2009	ಡೆಕ್ಕನ್ ಚಾರ್ಜರ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2010	ಚೆನ್ನೈ ಸೂಪರ್ ಕಿಂಗ್ಸ್	ಮುಂಬೈ ಇಂಡಿಯನ್ಸ್
2011	ಚೆನ್ನೈ ಸೂಪರ್ ಕಿಂಗ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2012	ಕೋಲ್ಕತ್ತ ನೈಟ್ ರೈಡರ್ಸ್	ಚೆನ್ನೈ ಸೂಪರ್ ಕಿಂಗ್ಸ್
2013	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2014	ಕೋಲ್ಕತ್ತ ನೈಟ್ ರೈಡರ್ಸ್	ಕಿಂಗ್ಸ್ ಇಲೆವೆನ್ ಪಂಜಾಬ್
2015	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2016	ಸನ್‌ರೈಸರ್ಸ್ ಹೈದರಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2017	ಮುಂಬೈ ಇಂಡಿಯನ್ಸ್	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್
2018	ಚೆನ್ನೈ ಸೂಪರ್ ಕಿಂಗ್ಸ್	ಸನ್‌ರೈಸರ್ಸ್ ಹೈದರಾಬಾದ್
2019	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2020	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
2021	ಚೆನ್ನೈ ಸೂಪರ್ ಕಿಂಗ್ಸ್	ಕೋಲ್ಕತ್ತ ನೈಟ್ ರೈಡರ್ಸ್
2022	ಗುಜರಾತ್ ಟೈಟನ್ಸ್	ರಾಜಸ್ಥಾನ ರಾಯಲ್ಸ್
2023	ಚೆನ್ನೈ ಸೂಪರ್ ಕಿಂಗ್ಸ್	ಗುಜರಾತ್ ಟೈಟನ್ಸ್
2024	ಕೋಲ್ಕತ್ತ ನೈಟ್ ರೈಡರ್ಸ್	ಹೈದರಾಬಾದ್ ಸನ್‌ರೈಸರ್ಸ್
2025	ರಾಯಲ್ ಚಾಲೆಂಜರ್ಸ್ ಬೆಂಗಳೂರು	ಪಂಜಾಬ್ ಕಿಂಗ್ಸ್
2026	ರಾಯಲ್ ಚಾಲೆಂಜರ್ಸ್ ಬೆಂಗಳೂರು	ಗುಜರಾತ್ ಟೈಟನ್ಸ್

ವಿರಾಟ್ ಕೊಹ್ಲಿ ಅವರನ್ನು ಸಹ ಆಟಗಾರರು ಅಪ್ಪಿಕೊಂಡು ಅಭಿನಂದಿಸಿದರು ಚಿತ್ರಗಳು: ಎಎಫ್‌ಪಿ/ಪಿಟಿಐ



ವಿರಾಟ್ ಕೊಹ್ಲಿ

₹20 ಕೋಟಿ ಪ್ರಶಸ್ತಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗಳಿಸಿದ ಒಟ್ಟು ಬಹುಮಾನ

₹13 ಕೋಟಿ ರನ್ನರ್ಸ್ ಅಪ್ ಗುಜರಾತ್ ಟೈಟನ್ಸ್ ತಂಡವು ಪಡೆದ ಬಹುಮಾನ

600+ ವಿರಾಟ್ ಕೊಹ್ಲಿ ಅವರು ಸತತ ನಾಲ್ಕು ಆವೃತ್ತಿಗಳಲ್ಲಿ (2023ರಿಂದ 2026) 600ಕ್ಕೂ ಅಧಿಕ ರನ್ ಗಳಿಸಿದ ಮೊದಲ ಬ್ಯಾಟರ್ ಆಗಿದ್ದಾರೆ

1,426 ಹಾಲಿ ಆವೃತ್ತಿಯಲ್ಲಿ ದಾಖಲಾದ ಒಟ್ಟು ಸಿಕ್ಸರ್‌ಗಳು

2,332 ಈ ಆವೃತ್ತಿಯಲ್ಲಿ ಬಾರಿಸಿದ ಒಟ್ಟು ಬೌಂಡರಿಗಳು

5 ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅವರಿಗೆ ಇದು ಐದನೇ ಐಪಿಎಲ್ ಟ್ರೋಫಿಯಾಗಿದೆ. ಅವರು ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದಾಗ ಮೂರು ಬಾರಿ ಪ್ರಶಸ್ತಿ ಗೆದ್ದಿತ್ತು

3 ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದ ಮೂರನೇ ತಂಡ ಹಿರಿಮೆಗೆ ಆರ್‌ಸಿಬಿ ಪಾತ್ರವಾಯಿತು. ಈ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್ (2010, 2011) ಮತ್ತು ಮುಂಬೈ ಇಂಡಿಯನ್ಸ್ (2019, 2020) ತಂಡಗಳು ಈ ಸಾಧನೆ ಮಾಡಿದ್ದವು

1 ಒಂದೇ ಋತುವಿನಲ್ಲಿ ಐಪಿಎಲ್ ಮತ್ತು ಡಬ್ಲ್ಯುಪಿಎಲ್ ಪ್ರಶಸ್ತಿಯನ್ನು ಗೆದ್ದ ಮೊದಲ ಫ್ರ್ಯಾಂಚೈಸಿ ಎಂಬ ಹೆಗ್ಗಳಿಕೆಗೆ ಆರ್‌ಸಿಬಿ ಪಾತ್ರವಾಯಿತು

ಗುಜರಾತ್ ಟೈಟನ್ಸ್ ಸಾಧನೆ

ವರ್ಷ	ಸ್ಥಾನ
2022	ಚಾಂಪಿಯನ್
2023	ರನ್ನರ್ಸ್ ಅಪ್
2024	ಎಂಟನೇ ಸ್ಥಾನ
2025	ನಾಲ್ಕನೇ ಸ್ಥಾನ
2026	ರನ್ನರ್ಸ್ ಅಪ್

ಆರ್‌ಸಿಬಿ ತಂಡದ ಸಾಧನೆ

ವರ್ಷ	ಸ್ಥಾನ
2008	ಏಳನೇ ಸ್ಥಾನ
2009	ರನ್ನರ್ಸ್ ಅಪ್
2010	ಮೂರನೇ ಸ್ಥಾನ
2011	ರನ್ನರ್ಸ್ ಅಪ್
2012	ಐದನೇ ಸ್ಥಾನ
2013	ಐದನೇ ಸ್ಥಾನ
2014	ಏಳನೇ ಸ್ಥಾನ
2015	ಮೂರನೇ ಸ್ಥಾನ
2016	ರನ್ನರ್ಸ್ ಅಪ್
2017	ಎಂಟನೇ ಸ್ಥಾನ
2018	ಆರನೇ ಸ್ಥಾನ
2019	ಎಂಟನೇ ಸ್ಥಾನ
2020	ನಾಲ್ಕನೇ ಸ್ಥಾನ
2021	ನಾಲ್ಕನೇ ಸ್ಥಾನ
2022	ಮೂರನೇ ಸ್ಥಾನ
2023	ಆರನೇ ಸ್ಥಾನ
2024	ನಾಲ್ಕನೇ ಸ್ಥಾನ
2025	ಚಾಂಪಿಯನ್
2026	ಚಾಂಪಿಯನ್

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 8ಕ್ಕೆ155 (20 ಓವರ್‌ಗಳಲ್ಲಿ)
ಸುದರ್ಶನ್ ಸಿ ಜಿತೇಶ್ ಬಿ ಭುವನೇಶ್ವರ್ 12 (12ಎ, 4x2)
ಗಿಲ್ ಸಿ ಪಾಟೀದಾರ್ ಬಿ ಹೇಝಲ್‌ವುಡ್ 10 (8ಎ, 4x2)
ನಿಶಾಂತ್ ಸಿ ಪಡಿಕ್ಕಲ್ ಬಿ ರಸಿಕ್ 20 (18ಎ, 4x3)
ಬಟ್ಲರ್ ಸ್ಟಂಪ್ಡ್ ಜಿತೇಶ್ ಬಿ ಕೃಣಾಲ್ 19 (23ಎ, 4x1)
ವಾಷಿಂಗ್ಟನ್ ಸುಂದರ್ ಔಟಾಗದೇ 50 (37ಎ, 4x5)
ಅರ್ಷದ್ ಸಿ ರಸಿಕ್ ಬಿ ಹೇಝಲ್‌ವುಡ್ 15 (6ಎ, 6x2)
ತೆವಾಟಿಯಾ ಸಿ ಪಾಟೀದಾರ್ ಬಿ ರಸಿಕ್ 7 (5ಎ, 4x1)
ಹೋಲ್ಡರ್ ಸಿ ಹೇಝಲ್‌ವುಡ್ ಬಿ ಭುವನೇಶ್ವರ್ 7 (5ಎ, 4x1)
ರಶೀದ್ ಸಿ ಶೆಫರ್ಡ್ ಬಿ ರಸಿಕ್ 7 (3ಎ, 6x1)
ಕಗಿಸೊ ರಬಾಡ ಔಟಾಗದೇ 3 (3ಎ)
ಇತರೆ: 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1–22 (ಶುಭಮನ್ ಗಿಲ್, 2.2), 2-26 (ಸಾಯಿ ಸುದರ್ಶನ್, 3.4), 3-55 (ನಿಶಾಂತ್ ಸಿಂಧು, 7.6), 4-73 (ಜೋಸ್ ಬಟ್ಲರ್, 12.1), 5-99 (ಅರ್ಷದ್ ಖಾನ್, 14.1), 6-115 (ರಾಹುಲ್ ತೆವಾಟಿಯಾ, 16.1), 7-142 (ಜೇಸನ್ ಹೋಲ್ಡರ್, 18.3), 8-151 (ರಶೀದ್ ಖಾನ್, 19.2)
ಬೌಲಿಂಗ್: ಜೇಕಬ್ ಡಫಿ 4–0–38–0, ಭುವನೇಶ್ವರ್ ಕುಮಾರ್ 4–0–29–2, ಜೋಶ್ ಹೇಝಲ್‌ವುಡ್ 4–0–37–2, ರಸಿಕ್ ಸಲಾಂ 4–0–27–3, ಕೃಣಾಲ್ ಪಾಂಡ್ಯ 4–0–23–1

ರಾಯಲ್ ಚಾಲೆಂಜರ್ಸ್ ಬೆಂಗಳೂರು: 5ಕ್ಕೆ 161 (18 ಓವರ್‌ಗಳಲ್ಲಿ)
ವೆಂಕಟೇಶ್ ಸಿ ರಬಾಡ ಬಿ ಸಿರಾಜ್ 32 (16ಎ, 4x4, 6x2)
ವಿರಾಟ್ ಕೊಹ್ಲಿ ಔಟಾಗದೇ 75 (42ಎ, 4x9, 6x3)
ಪಡಿಕ್ಕಲ್ ಸಿ ಅರ್ಷದ್ ಬಿ ರಬಾಡ 1 (4ಎ)
ರಜತ್ ಸಿ ರಬಾಡ ಬಿ ರಶೀದ್ 15 (13ಎ, 4x1, 6x1)
ಕೃಣಾಲ್ ಎಲ್‌ಬಿಡಬ್ಲ್ಯು ರಶೀದ್ 1 (2ಎ)
ಟಿಮ್ ಸಿ ಬಟ್ಲರ್ ಬಿ ಅರ್ಷದ್ 24 (17ಎ, 4x3, 6x1)
ಜಿತೇಶ್ ಶರ್ಮಾ ಔಟಾಗದೇ 11 (14ಎ, 4x1)
ಇತರೆ: 2 (ಎಲ್‌ಬಿ 1, ವೈಡ್ 1)
ವಿಕೆಟ್ ಪತನ: 1–62 (ವೆಂಕಟೇಶ್ ಅಯ್ಯರ್, 4.3), 2–63 (ದೇವದತ್ತ ಪಡಿಕ್ಕಲ್, 5.1), 3–89 (ರಜತ್ ಪಾಟೀದಾರ್, 8.2), 4–91 (ಕೃಣಾಲ್ ಪಾಂಡ್ಯ, 8.5), 5–132 (ಟಿಮ್ ಡೇವಿಡ್, 13.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–36–1; ಕಗಿಸೊ ರಬಾಡ 3–0–44–1; ಜೇಸನ್ ಹೋಲ್ಡರ್ 2–0–16–0; ರಶೀದ್ ಖಾನ್ 4–0–25–2; ಅರ್ಷದ್ ಖಾನ್ 4–0–32–1; ಪ್ರಸಿದ್ಧ ಕೃಷ್ಣ 1–0–7–0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ
ಆರೆಂಜ್ ಕ್ಯಾಪ್: ವೈಭವ್ ಸೂರ್ಯವಂಶಿ (ಆರ್ ಆರ್; 776 ರನ್)
ಪರ್ಪಲ್ ಕ್ಯಾಪ್: ಕಗಿಸೊ ರಬಾಡ (ಜಿ ಟಿ; 29 ವಿಕೆಟ್)

ಫಲಿತಾಂಶ: ಆರ್‌ಸಿಬಿಗೆ 5 ವಿಕೆಟ್ ಗೆಲುವು

ಐಪಿಎಲ್ 2026: ಅತಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ತಂಡ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ವೈಭವ್ ಸೂರ್ಯವಂಶಿ	ಆರ್.ಆರ್	16	776	103	1	5
ಶುಭಮನ್ ಗಿಲ್	ಜಿ.ಟಿ	16	732	104	1	6
ಸಾಯಿ ಸುದರ್ಶನ್	ಜಿ.ಟಿ	17	722	100	1	8
ವಿರಾಟ್ ಕೊಹ್ಲಿ	ಆರ್‌ಸಿಬಿ	16	675	105*	1	5
ಹೆನ್ರಿಚ್ ಕ್ಲಾಸೆನ್	ಎಸ್‌ಆರ್‌ಎಚ್	15	624	69	0	6

ಐಪಿಎಲ್ 2026: ಅತಿ ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ತಂಡ	ಪಂದ್ಯ	ವಿಕೆಟ್	ಶ್ರೇಷ್ಠ	ಎಕಾನಮಿ
ಕಗಿಸೊ ರಬಾಡ	ಜಿ.ಟಿ	17	29	25ಕ್ಕೆ3	9.68
ಭುವನೇಶ್ವರ್ ಕುಮಾರ್	ಆರ್‌ಸಿಬಿ	16	28	23ಕ್ಕೆ4	7.95
ಜೋಫ್ರಾ ಆರ್ಚರ್	ಆರ್.ಆರ್	16	25	17ಕ್ಕೆ3	9.31
ರಶೀದ್ ಖಾನ್	ಜಿ.ಟಿ	17	21	33ಕ್ಕೆ 4	9.07
ಅನ್ಷುಲ್ ಕಂಬೋಜ್	ಸಿಎಸ್‌ಕೆ	14	21	22ಕ್ಕೆ3	10.52

ಆರ್‌ಸಿಬಿ ಅಭಿಮಾನಿಗಳ ಸಂಭ್ರಮ

15ರ ಪೋರ ವೈಭವ್ ಸೂರ್ಯವಂಶಿಗೆ 'ಆರೆಂಜ್ ಕ್ಯಾಪ್'

ಐಪಿಎಲ್‌ನಲ್ಲಿ ಎರಡನೇ ಆವೃತ್ತಿಯನ್ನು ಆಡಿದ 15ರ ಪೋರ ವೈಭವ್ ಸೂರ್ಯವಂಶಿ ಅವರು ಈ ಬಾರಿ 16 ಇನಿಂಗ್ಸ್‌ಗಳಿಂದ 49.50 ಸರಾಸರಿಯಲ್ಲಿ 776 ರನ್ ಗಳಿಸಿದ್ದಾರೆ. ಅತ್ಯಧಿಕ ರನ್ ಕಲೆಹಾಕಿದ ಆಟಗಾರನಿಗೆ ನೀಡುವ 'ಆರೆಂಜ್ ಕ್ಯಾಪ್' ತಮ್ಮದಾಗಿಸಿಕೊಂಡಿದ್ದಾರೆ. ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸಿದ್ದ ಅವರು 1 ಶತಕ ಮತ್ತು 5 ಅರ್ಧಶತಕ ದಾಖಲಿಸಿದ್ದರು.

ಮಾತ್ರವಲ್ಲದೆ, ಅತ್ಯಧಿಕ ಸಿಕ್ಸರ್ ಸಿಡಿಸಿದ ಆಟಗಾರನಿಗೆ ನೀಡುವ 'ಸೂಪರ್ ಸಿಕ್ಸರ್ ಆಫ್ ದ ಸೀಸನ್' ಪ್ರಶಸ್ತಿಯನ್ನು ವೈಭವ್ ಗೆದ್ದುಕೊಂಡರು. ಅವರು 16 ಇನಿಂಗ್ಸ್‌ಗಳಲ್ಲಿ 72 ಸಿಕ್ಸರ್ ಸಿಡಿಸಿದ್ದಾರೆ. 237.31ರ ಸ್ಟ್ರೈಕ್‌ರೇಟ್ ಹೊಂದಿರುವ ಅವರು 'ಸೂಪರ್ ಸ್ಟ್ರೈಕರ್ ಆಫ್ ದಿ ಸೀಸನ್' ಪ್ರಶಸ್ತಿಗೂ ಭಾಜನರಾದರು.

ಅದರ ಜೊತೆಗೆ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರನಿಗೆ ನೀಡುವ 'ಅತ್ಯಧಿಕ ಮೌಲ್ಯಯುತ ಆಟಗಾರ' ಪ್ರಶಸ್ತಿ, ಅತ್ಯಂತ ಭರವಸೆಯ ಆಟಗಾರನಿಗೆ ನೀಡುವ 'ಆವೃತ್ತಿಯ ಉದಯೋನ್ಮುಖ ಆಟಗಾರ' ಗೌರವವನ್ನೂ ಅವರು ತಮ್ಮದಾಗಿಸಿಕೊಂಡರು.

ಸಿಂಗಪುರ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಜೋಡಿ

ಸಾತ್ವಿಕ್–ಚಿರಾಗ್ ಮುಡಿಗೆ ಕಿರೀಟ

ಸಿಂಗಪುರ (ಪಿಟಿಐ): ಭಾರತದ ತಾರಾ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಭಾನುವಾರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಇದರೊಂದಿಗೆ ಎರಡು ವರ್ಷಗಳ ಪ್ರಶಸ್ತಿಯ ಬರವನ್ನು ನೀಗಿಸಿಕೊಂಡರು.

ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಚಾಂಪಿಯನ್ ಆಗಿರುವ ಸಾತ್ವಿಕ್–ಚಿರಾಗ್ ಅವರು ಆರಂಭಿಕ ಗೇಮ್ ಹಿನ್ನಡೆಯಿಂದ ಚೇತರಿಸಿಕೊಂಡು 18-21, 21-17, 21-16ರಿಂದ ಇಂಡೊನೇಷ್ಯಾದ ಫಜರ್ ಅಲ್ಫಿಯಾನ್ ಹಾಗೂ ಮುಹಮ್ಮದ್ ಶೊಹಿಬುಲ್ ಫಿಕ್ರಿ ಅವರನ್ನು ಮಣಿಸಿದರು. ಇಲ್ಲಿ ಮೊದಲ ಬಾರಿ ಕಿರೀಟ ಗೆಲ್ಲುತ್ತಿದ್ದಂತೆ ಅವರು ಕುಣಿದು ಕುಪ್ಪಳಿಸಿದರು.

2024ರಲ್ಲಿ ಥಾಯ್ಲೆಂಡ್ ಓಪನ್ ಬಳಿಕ ಸಾತ್ವಿಕ್–ಚಿರಾಗ್ ಗೆದ್ದ ಮೊದಲ ಪ್ರಶಸ್ತಿ ಇದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಅವರು ನಾಲ್ಕು ಟೂರ್ನಿಗಳಲ್ಲಿ ಪ್ರಶಸ್ತಿ ಸುತ್ತು ತಲುಪಿ, ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದ್ದರು. ಎರಡು ವಾರಗಳ ಹಿಂದೆ ಥಾಯ್ಲೆಂಡ್ ಓಪನ್ ಫೈನಲ್‌ನಲ್ಲೂ ಎಡವಿದ್ದರು.

ಸಿಂಗಪುರ ಓಪನ್ ಡಬಲ್ಸ್ ಪ್ರಶಸ್ತಿ ಗೆದ್ದ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಚಿತ್ರ: 'ಬ್ಯಾಡ್ಮಿಂಟನ್ ಫೋಟೊ'

ವಿಶ್ವದ ನಾಲ್ಕನೇ ಕ್ರಮಾಂಕದ ಚಿರಾಗ್ ಮತ್ತು ಸಾತ್ವಿಕ್, ಸಿಂಗಪುರ ಓಪನ್ ಪ್ರಶಸ್ತಿ ಗೆದ್ದ ಭಾರತದ ಮೊದಲ ಜೋಡಿ ಎಂಬ ಹಿರಿಮೆಗೂ ಪಾತ್ರರಾದರು. ಇದು ಅವರ ಬಿಡಬ್ಲ್ಯುಎಫ್ ಸೂಪರ್ 750 ಮಟ್ಟದ ಮೂರನೇ ಹಾಗೂ ವಿಶ್ವ ಪ್ರವಾಸದಲ್ಲಿ ಒಂಬತ್ತನೇ ಪ್ರತಿಷ್ಠಿತ ಕಿರೀಟವಾಗಿದೆ.

ಇಂಡೊನೇಷ್ಯಾದ ಈ ಜೋಡಿಯ ವಿರುದ್ಧ ಭಾರತದ ಆಟಗಾರರು 1-2 ಗೆಲುವಿನ ದಾಖಲೆಯೊಂದಿಗೆ ಫೈನಲ್‌ನಲ್ಲಿ ಕಣಕ್ಕಿಳಿದಿದ್ದರು. ಜನವರಿಯಲ್ಲಿ ನಡೆದ ಮಲೇಷ್ಯಾ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಇದೇ ಆಟಗಾರರ ವಿರುದ್ಧ ಸಾತ್ವಿಕ್–ಚಿರಾಗ್ ನೇರ ಗೇಮ್‌ಗಳಿಂದ ಮುಗ್ಗರಿಸಿದ್ದರು.

ಸರ್ಫಿಂಗ್: ಪ್ರದೀಪ್ ಪೂಜಾರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರ ಹೊರವಲಯದ ಸಸಿಹಿತ್ಲು ಕಡಲಿನಲ್ಲಿ ಅಲೆಗಳ ಸವಾಲನ್ನು ಎದುರಿಸುತ್ತ ಬೆಳೆದ ಸರ್ಫಿಂಗ್ ಸ್ವಾಮಿ ಫೌಂಡೇಷನ್‌ನ ಪ್ರದೀಪ್ ಪೂಜಾರ ಮಂಗಳೂರಿನ ತಣ್ಣೀರುಬಾವಿ ಕಡಲಿನಲ್ಲಿ ಭಾನುವಾರ ಮಿಂಚಿದರು.

ಭಾರತ ಸರ್ಫಿಂಗ್ ಫೆಡರೇಷನ್, ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿದ್ದ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ 18 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿ ಗೆದ್ದ ಅವರು ರಾಷ್ಟ್ರ-ಮಟ್ಟದ ಮೊದಲ ಟ್ರೋಫಿಯೊಂದಿಗೆ ಸಂಭ್ರಮಿಸಿದರು. ತಮಿಳುನಾಡಿನ ಕಮಲಿ ಮೂರ್ತಿ ಮಹಿಳೆಯರ ಓಪನ್ ಮತ್ತು 18 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡ-ರು. ಮಹಿಳೆಯರ ವಿಭಾಗದಲ್ಲಿ ಕಳೆದ ಬಾರಿಯೂ ಅವರು ಚಾಂಪಿಯನ್ ಆಗಿದ್ದರು.

ಪ್ರದೀಪ್ ಪೂಜಾರ

ಪುರುಷರ ವಿಭಾಗದಲ್ಲಿ ತಮಿಳುನಾಡಿನ ಕಿಶೋರ್ ಕುಮಾರ್ ಮೊದಲಿಗರಾದರು. ಕನ್ನಡಿಗ, ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಪದಕವಿಜೇತ ರಮೇಶ ಬೂದಿಹಾಳ ಎರಡನೇ ಸ್ಥಾನ ಪಡೆದರು. ಮಂಗಳೂರಿನ ಸಾನ್ವಿ ಹೆಗ್ಡೆ ಮತ್ತು ಆದ್ಯಾ ಸಿಂಗ್ 18 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕ್ರಮವಾಗಿ 2 ಮತ್ತು 3ನೇ ಸ್ಥಾನ ಗಳಿಸಿದರು. ಆದ್ಯಾ ಸಿಂಗ್ 14 ವರ್ಷದೊಳಗಿನವರ ವಿಭಾಗದ ಕಂಚು ಗೆದ್ದರು.

ಉತ್ತರ ಕರ್ನಾಟಕದಿಂದ ಬಂದು ನೆಲೆಸಿರುವ ಪ್ರದೀಪ್ ಪೂಜಾರ 5 ವರ್ಷಗಳ ಹಿಂದಷ್ಟೇ ಸರ್ಫ್ ಬೋರ್ಡ್ ತುಳಿದಿದ್ದರು. ಭಾನುವಾರ 5 ಅಲೆಗಳೊಂದಿಗೆ ಸೆಣಸಿದ ಅವರು ಗರಿಷ್ಠ 5 ಪಾಯಿಂಟ್‌ಗಳೊಂದಿಗೆ ಒಟ್ಟು 12.17 ಸ್ಕೋರು ಕಲೆ ಹಾಕಿದರು. ಚಾಂಪಿಯ-ನ್‌ಷಿಪ್‌ನಲ್ಲಿ ಕರ್ನಾಟಕಕ್ಕೆ ಲಭಿಸಿದ ಏಕೈಕ ಪ್ರಶಸ್ತಿ ಇದು.

ಮಹಿಳೆಯರ ಮತ್ತು 18 ವರ್ಷದೊ-ಳಗಿನವರ ವಿಭಾಗದ ಎಲ್ಲ ಹೀಟ್ಸ್‌ನಲ್ಲೂ ಮೊದಲ ಸ್ಥಾನ ಕಾಯ್ದುಕೊಂಡು ಬಂದಿದ್ದ ಕಮಲಿ ಮೂರ್ತಿ ಫೈನಲ್‌ನಲ್ಲೂ ಅಮೋಘ ಸಾಧನೆ ಮಾಡಿದರು. ಮಹಿಳೆಯರ ವಿಭಾಗದಲ್ಲಿ ಗೋವಾದ ಸುಗರ್ ಶಾಂತಿ ಬನಾರ್ಸೆ ಅವರನ್ನು 1.44 ಪಾಯಿಂಟ್‌ಗಳಿಂದ ಹಿಂದಿಕ್ಕಿ ಪ್ರಶಸ್ತಿಗೆ ಮುತ್ತಿಕ್ಕಿದರು. ಸುಗರ್ ಶಾಂತಿ ಮೊದಲ ಅಲೆಯಲ್ಲಿ 6 ಪಾಯಿಂಟ್ ಗಳಿಸಿ ಮುನ್ನ-ಡೆದಿದ್ದರು. ಕಮಲಿ ಕೊನೆಯ ಹಂತದಲ್ಲಿ ಲಯ ಕಂಡುಕೊಂಡರು.

ಯುವ ಸರ್ಫರ್ ತಮಿಳುನಾಡಿನ ಕಿಶೋರ್ ಕುಮಾರ್ ಪುರುಷರ ವಿಭಾಗದಲ್ಲಿ ರಮೇಶ್ ಬೂದಿಹಾಳ್ ಅವರನ್ನು ನಿರಾಸೆಗೊಳಿಸಿದರು. ದೇಶದ ಪ್ರಮುಖ ಸರ್ಫರ್‌ಗಳು ಕಣಕ್ಕೆ ಇಳಿದಿದ್ದ ಈ ವಿಭಾಗದಲ್ಲಿ ಕಿಶೋರ್ ಗರಿಷ್ಠ 8 ಅಂಕಗಳೊಂದಿಗೆ ಒಟ್ಟು 15.20 ಸ್ಕೋರು ಗಳಿಸಿದರು.

ಫಲಿತಾಂಶಗಳು: ಪುರುಷರ ವಿಭಾಗ: ಕಿಶೋರ್ ಕುಮಾರ್ (ತಮಿಳುನಾಡು)–1. ಸ್ಕೋರು:15.20, ರಮೇಶ ಬೂದಿಹಾಳ (ಕೇರಳ)–2 (12.87), ಶಿವರಾಜ್ ಬಾಬು (ತಮಿಳುನಾಡು)–3 (11.90); ಮಹಿಳೆಯರು: ಕಮಲಿ ಮೂರ್ತಿ (ತಮಿಳುನಾಡು)–1. ಸ್ಕೋರು: 13.17, ಸುಗರ್ ಶಾಂತಿ ಬನಾರ್ಸೆ (ಗೋವಾ)–2 (11.73) ಸೃಷ್ಟಿ ಸೆಲ್ವಂ (ತಮಿಳುನಾಡು)–3 (8.50).

ಇಂಪ್ಯಾಕ್ಟ್ ನಿಯಮ ರದ್ದು ಮಾಡಿ: ಸಚಿನ್

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ-ಯಲ್ಲಿರುವ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ರದ್ದು ಮಾಡಬೇಕು ಎಂದು ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಹೇಳಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ 2023ರ ಆವೃತ್ತಿಯಿಂದ ಈ ನಿಯಮ ಜಾರಿಯಾಗಿದೆ. ಈ ಬಗ್ಗೆ ಹಲವು ಖ್ಯಾತನಾಮ ಆಟಗಾರರು ಅಸಮಾಧಾನ ವ್ಯಕ್ತಪಡಿಸಿ-ದ್ದರು. ಇದೀಗ ಸಚಿನ್ ಅವರು 'ಇಎಸ್‌ಪಿ-ಎನ್‌ಕ್ರಿಕ್‌ಇನ್ಫೋ ಪ್ರಶಸ್ತಿ' ಪ್ರದಾನ ಸಂದರ್ಭದಲ್ಲಿ ಹೇಳಿದ್ದಾರೆ. ಅಲ್ಲದೇ ಐಪಿಎಲ್ ಟೂರ್ನಿಯನ್ನು ಮತ್ತಷ್ಟು ಸ್ವಾರಸ್ಯಕರವಾಗಿಸಲು ಅವರು ಮೂರು ಪ್ರಮುಖ ಸಲಹೆಗಳನ್ನು ನೀಡಿದ್ದಾರೆ.

'ಟಿ20 ಕ್ರಿಕೆಟ್ ಮಾದರಿಯಲ್ಲಿ ಆಡಲು ಕೇವಲ 20 ಓವರ್‌ಗಳು ಮಾತ್ರ ಸಿಗುತ್ತವೆ. ಅಂತಹದರಲ್ಲಿ ಇಂಪ್ಯಾಕ್ಟ್ ನಿಯಮದಲ್ಲಿ ಒಬ್ಬ ಹೆಚ್ಚುವರಿ ಬ್ಯಾಟರ್‌ಗೆ ಅವಕಾಶ ಕೊಡಲಾಗುತ್ತಿದೆ. ಈ ಮಾದರಿಯಲ್ಲಿ ಬೌಲರ್‌ಗಳ ಮುಂದೆ ಕಠಿಣ ಸವಾಲು ಇದೆ. ಅದರ ಮೇಲೆ ಈ ನಿಯಮವು ಮತ್ತಷ್ಟು ಹೊರೆ ಹಾಕುತ್ತಿದೆ. ಇದು ಅಸಮತೋಲನಗೊಳಿಸುತ್ತಿದೆ' ಎಂದು ತೆಂಡೂಲ್ಕರ್ ಹೇಳಿದರು.

ಸಚಿನ್ ತೆಂಡೂಲ್ಕರ್ –ಪಿಟಿಐ ಚಿತ್ರ

'ಬೌಲರ್‌ಗಳಿಗೆ ತಲಾ ನಾಲ್ಕು ಓವರ್ ಹಾಕುವ ನಿಯಮವನ್ನು ಪರಿಷ್ಕರಿಸಬೇ-ಕು. ಪ್ರತಿ ಬೌಲರ್‌ಗೆ ತಲಾ ಐದು ಓವರ್ ಹಾಕುವ ಅವಕಾಶ ನೀಡಬೇಕು' ಎಂದು ಹೇಳಿದ್ದಾರೆ.

'ಮೂರನೇಯದಾಗಿ ಪವರ್‌ಪ್ಲೇ ನಿಯಮವನ್ನು ಬದಲಾಯಿಸಬೇಕು. ಅದನ್ನು ಎರಡು ಭಾಗಗಳಾಗಿ ವಿಭಜಿಸಬೇಕು. ಬ್ಯಾಟಿಂಗ್ ಮಾಡುವ ತಂಡಕ್ಕೆ 4 ಓವರ್‌ಗಳ ಪವರ್‌ಪ್ಲೇ ಮತ್ತು ಬೌಲಿಂಗ್ ಮಾಡುವವರಿಗೆ ಎರಡು ಓವರ್ ಪವರ್‌ಪ್ಲೇ ಪಡೆಯುವ ಅವಕಾಶ ನೀಡಬೇಕು. ಬೌಲಿಂಗ್ ಕಡೆಯ ಪವರ್‌ಪ್ಲೇ ಇದ್ದಾಗ 30 ಯಾರ್ಡ್ ವೃತ್ತದ ಹೊರಗೆ ಒಬ್ಬ ಹೆಚ್ಚುವರಿ ಫೀಲ್ಡರ್ ನಿಯೋಜನೆಗೆ ಅವಕಾಶವಿರಬೇಕು' ಎಂದು ಸಚಿನ್ ಸಲಹೆ ಕೊಟ್ಟಿದ್ದಾರೆ.

ಗೆಲುವಿನ ಹಳಿಗೆ ಮರಳಿದ ಗುಕೇಶ್

ಓಸ್ಲೊ (ಪಿಟಿಐ): 20ನೇ ವರ್ಷಕ್ಕೆ ಕಾಲಿಟ್ಟ ಮರುದಿನವೇ ವಿಶ್ವ ಚಾಂಪಿಯನ್ ಡಿ.ಗುಕೇಶ್ ತಮ್ಮ ಲಯಕ್ಕೆ ಮರಳುವ ರೀತಿಯಲ್ಲಿ ಆಡಿದರು. ನಾರ್ವೆ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಅವರು ಸ್ವದೇಶದ ಆರ್. ಪ್ರಜ್ಞಾನಂದ ಅವರನ್ನು ಸೋಲಿಸಿ ಪೂರ್ಣ ಮೂರು ಪಾಯಿಂಟ್ ಪಡೆದರು.

ಈವರೆಗೆ ಪರದಾಡಿದ್ದ ಗುಕೇಶ್ ಮುಖದಲ್ಲಿ ಶನಿವಾರ ಮಂದಹಾಸ ಅರಳಿತು. ಅವರು ಒಟ್ಟು 6.5 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ (6) ನಂತರದ ಸ್ಥಾನದಲ್ಲಿದ್ದಾರೆ.

ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಬೇಗುದಿ ಮುಂದುರಿಯಿತು. ಅವರು ಅಮೆರಿಕದ ವೆಸ್ಲಿ ಸೊ ಅವರಿಗೆ ಸೋತರು. ಸೊ ಒಟ್ಟು 8.5 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನಕ್ಕೇರಿದರು.

ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ ತವರಿನ ಈ ಟೂರ್ನಿಯಲ್ಲಿ 4.5 ಪಾಯಿಂಟ್‌ಗಳೊಡನೆ ಕೊನೆಯ ಸ್ಥಾನದಲ್ಲಿದ್ದಾರೆ.

ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ (10) ಅವರು ಅಗ್ರಸ್ಥಾ-ನದಲ್ಲಿ ಮುಂದುವರಿದಿದ್ದಾರೆ. ಅವರು ಐದನೇ ಸುತ್ತಿನಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (5) ಅವರನ್ನು ಮಣಿಸಿದರು.

ಅಗ್ರಸ್ಥಾನಕ್ಕೇರಿದ ದಿವ್ಯಾ: ಮಹಿಳೆಯರ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ (8.5), ಐದನೇ ಸುತ್ತಿನಲ್ಲಿ ಚೀನಾದ ಝು ಜಿನೆರ್ (5) ಅವರನ್ನು 84 ನಡೆಗಳಲ್ಲಿ ಸೋಲಿಸಿ ಅಗ್ರಸ್ಥಾನಕ್ಕೇರಿದರು. ಕೋನೇರು ಹಂಪಿ (4.5), ಆರ್ಮ್‌ಗೆಡನ್‌ನಲ್ಲಿ ವಿಶ್ವ ಚಾಂಪಿಯನ್ ಜು ವೆನ್‌ಜುನ್ (ಚೀನಾ, 5) ಅವರನ್ನು ಸೋಲಿಸಿದರು.

ಹಾಕಿ: ಹಾಸನ ಬಾಲಕಿಯರು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿವೈಇಎಸ್ ಹಾಸನ ತಂಡವು 3–2 ಗೋಲುಗಳಿಂದ ಡಿವೈಇಎಸ್ ಕೊಡಗು ತಂಡವನ್ನು ಮಣಿಸಿ, ಶನಿವಾರ ಮುಕ್ತಾಯಗೊಂಡ 'ಹಾಕಿ ಕರ್ನಾಟಕ' ರಾಜ್ಯ 16 ವರ್ಷದೊಳಗಿನ ಬಾಲಕಿಯರ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕ್ರೀ-ಡಾಂಗಣದಲ್ಲಿ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಡಿವೈಇಎಸ್ ಹಾಸನ ತಂಡದ ಸರಸ್ವತಿ ಎಸ್.ಎಂ., ಆರಾಧ್ಯ ಎಂ.ಡಿ. ಹಾಗೂ ಜಿ.ಎಚ್. ಅನುಷ್ಕಾ ತಲಾ ಒಂದು ಗೋಲು ಗಳಿಸಿ, ಗೆಲುವಿನ ರೂವಾರಿಯಾದರು. ಕೊಡಗು ತಂಡದ ಬಿ.ಎಸ್.ದೇಚಮ್ಮ (10ನೇ ಹಾಗೂ 30ನೇ ನಿ.) ಅವಳಿ ಗೋಲು ಗಳಿಸಿದರು.

ತೃತೀಯ ಸ್ಥಾನದ ನಿರ್ಣಯಕ್ಕಾಗಿ ನಡೆದ ಪಂದ್ಯದಲ್ಲಿ ಮಡಿಕೇರಿಯ 'ಸಾಯ್' ತರಬೇತಿ ಕೇಂದ್ರ ತಂಡವು 3–0ಯಿಂದ 'ಹಾಕಿ ಬೆಳಗಾವಿ' ತಂಡವನ್ನು ನಿರಾಯಾಸವಾಗಿ ಮಣಿಸಿತು.

ಡಿವೈಇಎಸ್ ಕೊಡಗು ತಂಡದ ಯಶಿಕಾ ಕೆ.ಕೆ. ಟೂರ್ನಿಯ ಆಟಗಾರ್ತಿ ಗೌರವಕ್ಕೆ ಭಾಜನರಾದರು.